Madam SPEAKER.—I agree with the Hon. Minister's point of order.

ಶ್ರೀ ವಾಟಾಳ್ ನಾಗರಾಜ್.—ಈ ಸಂಸ್ಥೆ ಸರಕಾರದ್ದೇ ಅಲ್ಲವೇ ಎನ್ನುವುದನ್ನು ಮಾತ್ರ ಇಲ್ಲಿ ಸರಕಾರ ಒಂದು ಶಬ್ದ ಹೇಳಿದರೆ ಸಾಕು.

ಅಧ್ಯಕ್ಷರು.—ಇದರ ಎಲ್ಲ ಉತ್ತರವನ್ನು ನಾಳೆ ಕೊಡುತ್ತಾರೆ. ಅಲ್ಲಿಯವರೆಗೆ ತಾವು ಸ್ವಲ್ಪ ಅವಕಾಶ ಕೊಡಿ.

ಶ್ರೀವಿ. ಎನ್. ಪಾಟೀಲ್.—ಇದರ ಬಗ್ಗೆ ಮಂತ್ರಿಗಳು ನಾಳೆ ಉತ್ತರ ಕೊಡಲಿ. ಇದರ ಬಗ್ಗೆ ಒಂದು ಸಲಹೆ ನಾನು ಹೇಳುವುದು, ಈ ಸಂಸ್ಥೆ ಸರಕಾರದ್ದಾಗಿದ್ದರೆ ಅದರಲ್ಲಿ ಮುಖ್ಯಮಂತ್ರಿಗಳ ಫೋಟೋ ಹಾಕಿಸಲಿ. ಹಾಗಿಲ್ಲದೇ ಇದ್ದರೆ ಇದರಲ್ಲಿ ಮುಖ್ಯ ಮಂತ್ರಿಗಳ ಫೋಟೋ ಹಾಕುಬೇಡ ಎನ್ನುವ ವಿಚಾರವನ್ನೂ ಗಮನದಲ್ಲಿಟ್ಟು ಉತ್ತರ ಕೊಡಲಿ.

Collection of levy paddy in the Malnad Areas

ಶ್ರೀ ಕೋಣಂದೂರು ಲಿಂಗಪ್ಪ.—ನಿನ್ನೆ ತಮ್ಮ ಅಪ್ಪಣೆ ಕೇಳಿದ್ದೆ. ಅದು ನಮ್ಮ ಮಲೆನಾಡಿನಲ್ಲಿ ಎಲ್ಲಿ ಕಡೆಗಳಲ್ಲೂ ಲೆವಿ ಭತ್ತ ವಸೂಲು ಮಾಡುತ್ತಿರುವುದರ ಬಗ್ಗೆ.

ಅಧ್ಯಕ್ಷರು.—ಇದನ್ನು ಸರಕಾರದ ಕಡೆಗೆ ಕಳುಹಿಸಲಾಗಿದೆ. ಇಂದು ಮಾನ್ಯ ಮಂತ್ರಿಗಳೂ ಬಂದಿಲ್ಲ. ಅವರು ಬಂದ ನಂತರ ಇದರ ಉತ್ತರ ಆಮೇಲೆ ತೆಗೆದುಕೊಳ್ಳಬಹುದು.

ಶ್ರೀ ಕೋಣಂದೂರು ಲಿಂಗಪ್ಪ.—ನಾನು ಕೆಲವು ಮುಖ್ಯವಾದ ವಿಚಾರಗಳ ಬಗ್ಗೆ ಅಲ್ಪಕಾಲಾವಧಿ ಪ್ರಶ್ನೆ ಹಾಗೂ ಕಾಲಿಂಗ್ ಅಟೆನ್‌ಷನ್ ಕಳುಹಿಸಿ 8—10 ದಿನಗಳಾದರೂ ಇದರ ಬಗ್ಗೆ ಇಲ್ಲಿ ಸರಕಾರ ಏನೂ ಏಕೆ ಪ್ರಸ್ತಾಪ ಮಾಡುತ್ತಿಲ್ಲ? ಇದನ್ನು ಸರಕಾರದ ಕಡೆಯಿಂದ ತಾವು ತರಿಸಿಕೊಡಬೇಕು.

ಅಧ್ಯಕ್ಷರು.—ಸರಕಾರದಿಂದ ಉತ್ತರ ಬಂದಿಲ್ಲ. ಅದು ಬಂದ ನಂತರ ಇಲ್ಲಿ ತೆಗೆದು ಕೊಳ್ಳೋಣ.

ಶ್ರೀ ಕೋಣಂದೂರು ಲಿಂಗಪ್ಪ.—ಉತ್ತರ ಬರಲಿಲ್ಲ ಎಂದರೆ ನಮ್ಮ ಮಲೆನಾಡಿನ ಬಹು ಜ್ವಲಂತವಾದ ಪ್ರಶ್ನೆಗಳನ್ನೂ ಕಳುಹಿಸಿದರೂ ಸರಕಾರದ ಕಡೆಯಿಂದ ಉತ್ತರ ಬಾರದೇ ಹೋದರೆ ಏನು ಮಾಡುವುದು? ನಮ್ಮ ಮಲೆನಾಡಿನಲ್ಲಿ ಕಟ್ಟಿಗೆ ಸಮಸ್ಯೆ ಬಹುವಾಗಿ ದಿನೇ ದಿನೇ ಹೆಚ್ಚಾಗುತ್ತಿದೆ. ಇದು ನಮ್ಮ ಭಾಗದ ಜನರ ಸಾವು ಬದುಕಿನ ಸಮಸ್ಯೆ. ಇದರ ಬಗ್ಗೆ ಸರಕಾರ ಏಕೆ ಇನ್ನೂ ಉತ್ತರ ಕೊಡುತ್ತಿಲ್ಲ?

ಶ್ರೀ ಹೆಚ್. ಡಿ. ದೇವೇಗೌಡ.—ನಾನು 312ರ ನಿಯಮದ ಪ್ರಕಾರ ಮಾನ್ಯ ಲೋಕೋಪಯೋಗಿ ಮಂತ್ರಿಗಳ ಗಮನಕ್ಕೆ ಬಿಜಾಪುರ ಜಿಲ್ಲೆಯಲ್ಲಿರುವ ಒಂದು ಕೆರೆಯ ಬಗ್ಗೆ ಎಂದರೆ ಮುದ್ದೇಬಿಹಾಳಿನ ಮಡಕೇಶ್ವರ ಕೆರೆ ಬಗ್ಗೆ ವಿವರಗಳನ್ನು ಕೇಳಿದ್ದೆ. ಇದರ ಬಗ್ಗೆ ಇಂದು ಇಲ್ಲಿ ಪ್ರಸ್ತಾಪ ಮಾಡು ಎಂದರೆ ಮಾಡುತ್ತೇನೆ. ಇಲ್ಲವೇ ವಿವರಗಳನ್ನ ಸಂಗ್ರಹಣೆ ಮಾಡಿದ ಮೇಲೆ ತೆಗೆದು ಕೊಳ್ಳಬೇಕೆಂದು ಅಧ್ಯಕ್ಷರು ಹೇಳಿದರೆ ಹಾಗೇ ಮಾಡಬಹುದು.

ಅಧ್ಯಕ್ಷರು.—ಇದನ್ನು ನಾಳೆ ತೆಗೆದುಕೊಳ್ಳಬಹುದು.

Mysore Land Reforms Amendment) Bill, 1972

Motion to consider

(Debate Contd.)

† ಶ್ರೀ ಎಸ್. ವೈ. ಪಾಟೀಲ್ (ಸಿಂದಗಿ).—ಮಾನ್ಯ ಅಧ್ಯಕ್ಷರೇ, ಲ್ಯಾಂಡು ರಿಫಾರಂಸ್ ಅಮೆಂಡುಮೆಂಟ್ ಬಿಲ್ಲಿನ ಮೇಲೆ ಕೆಲವು ದಿನಗಳಿಂದ ಇಲ್ಲಿ ಚರ್ಚೆಯಾಗುತ್ತಿದೆ, ಈ ಚರ್ಚೆಯನ್ನು ನೋಡಿದರೆ ಸಾಧಾರಣವಾಗಿ ಈ ಭೂಮಿ ವಿಷಯವಾಗಿ ಯಾವುದೋ ಕೆಲವು ವಿಚಾರಗಳನ್ನು

ಪ್ರಸ್ತಾಪ ಮಾಡುತ್ತಾ ನಮ್ಮ ಮಾನ್ಯ ಮಿತ್ರರನೇಕರು ಎಂದರೆ ಶ್ರೀ ಕೋಣಂಡೂರು ಲಿಂಗಪ್ಪ ನವರು ಹಾಗೂ ಇನ್ನಿತರ ಮಿತ್ರರು ಇಲ್ಲಿ ಹೇಳಿದುದನ್ನೆಲ್ಲಾ ಕೇಳಿದ್ದೇನೆ. ಆದರೆ ನಮ್ಮ ದೇಶ ದಲ್ಲಿ ತತ್ವ ಪ್ರತಿಪಾದನೆ ಮಾಡತಕ್ಕದ್ದು ಬಹಳ ಸುಲಭ. ಆದರೆ ಆ ತತ್ವವನ್ನು ಅನುಷ್ಠಾನಕ್ಕೆ ತರುವುದು ಬಹಳ ಕಠಿಣ. ಭೂಮಿ ಎಂದರೆ ಏನು? ಅದು ರೈತನ ಕೈಯಲ್ಲಿ ಬಂದು ಅದು ಯಾವ ರೀತಿ ಇಲ್ಲಿಯವರೆಗೆ ಉಳಿದಿದೆ! ಈ ಭೂಮಿಯನ್ನು ಅನ್ ಆಥರೈಸ್ಡ್ ಆಗಿ ಕೊಟ್ಟಿದ್ದರೋ ಹೇಗೆ ಇಲ್ಲವೇ ಭೂಮಿಯನ್ನೇನಾದರೂ ಕಳ್ಳತನ ಮಾಡಿ ತೆಗೆದುಕೊಂಡು ಬಂದಿದ್ದಾರೆಯೇ ಹೇಗೆ? ಇಂದಿನವರೆಗೂ ಅನಾಥನಾಗಿದ್ದ ರೈತ ಇಲ್ಲಿಯವರೆಗೂ ಜನಕ್ಕೆ ಅನ್ನ ಒದಗಿಸಿಕೊಡುತ್ತಿದ್ದಂ. ಇಂದು ಇಂತಹ ರೈತನ ಮೇಲೆ ಗದಾಪ್ರಹಾರವಾಗುತ್ತಿದೆ. ಈ ಬಿಲ್ಲನ್ನು ನೋಡುವಾಗ ನಾನೇನೂ ಇಲ್ಲಿ ಹೆಚ್ಚು ಭೂಮಿ ಉಳ್ಳವರ ಪರವಾಗಿ ಮಾತನಾಡುತ್ತಿಲ್ಲ ಮತ್ತು ನನಗೇನೂ ಇವರನ್ನು ಸಪೋರ್ಟ್ ಮಾಡಲು ನನ್ನಲ್ಲಿ ಭೂಮಿ ಏನೂ ಇಲ್ಲ. ಇದರಿಂದ ಬಡವರಿಗೆ ಕಲ್ಯಾಣ ಹೇಗೆ ಆಗುತ್ತದೆ ಎನ್ನುವುದರ ಬಗ್ಗೆ ಇಲ್ಲಿ ಹೇಳುತಿದ್ದೇನೆ. ಬಹು ಜನರಿಗೆ ಅನುಕೂಲವಾಗುವಂತೆ ಮತ್ತು ಬಡವರಿಗೆ ಕಲ್ಯಾಣವಾಗುವಂತೆ ಇದರಲ್ಲಿ ವಿಚಾರ ಮಾಡುವುದು ಅವಶ್ಯವಾಗಿದೆ. ಮುಖ್ಯ ವಾಗಿ ಭಾರತ ದೇಶದೊಳಗೆ ಅನ್ನ ವಸ್ತುಗಳಿಗಾಗಿ ಪರಾವಲಂಬನೆಯನ್ನು ಮಾಡದೆ ಭೂಮಿಯ ಮುಖೇನ ಭೂಮಿಯನ್ನು ಅಭಿವೃದ್ಧಿ ಮಾಡಿಕೊಂಡು ಅನ್ನ ಸಮಸ್ಯೆ ಹಾಗೂ ಅರಿವೆ ಸಮಸ್ಯೆಯನ್ನು ಬಗೆಹರಿಸಬೇಕಾದರೆ ಇದರಿಂದ ಏನು ಪರಿಣಾಮವಾಗುತ್ತದೆ ಎನ್ನುವುದನ್ನು ವಿಚಾರ ಮಾಡುವುದು ಅತ್ಯಾವಶ್ಯಕ. ಅನ್ನವನ್ನು ಕೊಡಬೇಕಾದರೆ ನಾವು ಮೆಕನೈಸೇಷನ್ ಕಲ್ಟಿವೇಷನ್ ಎಂದರೆ ಯಾಂತ್ರಿಕ ಸಹಾಯದಿಂದ ಹೆಚ್ಚು ಉತ್ಪತ್ತಿ ಮಾಡಲು ಇದರಿಂದ ಹೇಗೆ ಆದೀತು ಎನ್ನುವುದನ್ನು ವಿಚಾರ ಮಾಡುವುದು ಅವಶ್ಯಕವಾಗಿದೆ. ಈ ಬಿಲ್ಲು ಹೀಗೂ ಸೆಲೆಕ್ಟ್ ಕಮಿಟಿಗೆ ಹೋಗುತ್ತಿರುವುದರಿಂದ ನಾನು ಹೆಚ್ಚು ಮಾತನಾಡಲು ಹೋಗದ ಕೆಲವೇ ಕೆಲವು ಅಂಶಗಳ ಬಗ್ಗೆ ಇಲ್ಲಿ ಹೇಳುತ್ತೇನೆ. ಇದರೊಳಗೆ 16 ಕಿಲೋಮೀಟರು ದೂರದೊಳಗೆ ಇರುವವರಿಗೆ ಮಾತ್ರ ಭೂಮಿ ಇಟ್ಟುಕೊಳ್ಳಲು ಅವಕಾಶವಿದೆ ಎನ್ನುವುದು ಇದೆ. ಸಾಧಾರಣವಾಗಿ ಒಬ್ಬರು ಗಂಡ ಸತ್ತ ಹೆಂಡತಿ ಹಾಗೂ ಅವರ ಮಕ್ಕಳು ಇದ್ದರೆ ಅವರಿಗೆ ಸ್ವಲ್ಪ ಜಮೀನು ಇದ್ದರೆ ಇದರಲ್ಲಿರುವಂತೆ 16 ಕಿಲೋ ಮೀಟರು ಒಳಗೆ ಇರಬೇಕಾಗುತ್ತದೆ. ಉದಾಹರಣೆಗೆ ಬಿಜಾಪುರ ಜಿಲ್ಲೆಯಲ್ಲಿರುವ ಒಂದು ಹಳ್ಳಿಯಲ್ಲಿ ಇರುವ ಇವರು ಧಾರವಾಡಕ್ಕೋ ಇಲ್ಲವೇ ಬೇರೆ ಒಂದು ಜಿಲ್ಲೆಗೋ ಹೋಗಿ ಅವರ ಮಕ್ಕಳ ವಿದ್ಯಾಭ್ಯಾಸ ಮಾಡಲು ಎಂದರೆ ಎಂ. ಎ. ಮಾಡಿಸಲು ಇಲ್ಲವೇ ಎಂ ಬಿ ಬಿ ಎಸ್ ಓದಿಸಲು ಹೋಗಬೇಕಾಗಿ ಬರುತ್ತದೆ, ಶಿಕ್ಷಣ ಕೊಡಿಸುವುದಕ್ಕಾಗಿ ಇವರು ಭೂಮಿಯನ್ನೇ ನಂಬಿಕೊಂಡು ಜೀವನ ನಡೆಸಬೇಕಾಗಿ ಬರುತ್ತದೆ. ಇಂತಹ ಬಡವರ ಬಗ್ಗೆ ಏನು ಮಾಡಬೇಕು ಎನ್ನುವುದನ್ನು ಸ್ಪಷ್ಟವಾಗಿ ಇಲ್ಲಿ ವಿಚಾರ ಮಾಡುತ್ತಿದ್ದಾರೆ. ರೈತರ ಮಕ್ಕಳು ಬೇರೆ ಕಡೆಗೆ ಹೋಗಿ ವಿದ್ಯಾಭ್ಯಾಸ ಮಾಡಿ ಸುಧಾರಣೆ ಮಾಡಿಕೊಳ್ಳಲು ಅವಕಾಶ ಮಾಡಬೇಕಾಗುತ್ತದೆ. ನಮ್ಮ ರಾಜ್ಯದಲ್ಲಿ ಹಂಚಲು ಸುಮಾರು ನಲವತ್ತು ಲಕ್ಷ ಎಕರೆ ಸಿಗುತ್ತದೆ ಎನ್ನುವ ಒಂದು ವಿಚಾರವನ್ನು ಸರ್ಕಾರದವರು ಹೇಳಿದರು. ಆದರೆ ನನಗೆ ತಿಳಿದ ಮಟ್ಟಿಗೆ ಐವತ್ತು ಸಾವಿರ ಎಕರೆ ಭೂಮಿ ಕೂಡ ಬರುವುದಿಲ್ಲ. ಇದರಂತೆ ಹಂಚಿಕೆ ಮಾಡಲು ಹೋದರೆ ಇಂದಿನ ರೈತರ ಸ್ಥಿತಿಯಲ್ಲಿ ಅರ್ಧ ಎಕರೆ ಕೂಡ ಬರುವುದಿಲ್ಲ. ರೈತರು ತಮ್ಮಲ್ಲಿದ್ದ ಹಣವನ್ನೆಲ್ಲಾ ಭೂಮಿಯ ಮೇಲೆ ಹಾಕಿಕೊಂಡು ಅದನ್ನು ಕಾಪಾಡಿಕೊಂಡು ಅನುಭವಿಸಿಕೊಂಡು ಬರುತ್ತಿದ್ದಾರೆ. ಸರ್ಕಾರ ಇಂತಹವರ ಮೇಲೆ ವಿಚಾರ ಮಾಡಿಲ್ಲ ಎಂದು ತೋರುತ್ತೆ. ಹತ್ತಾರು ವರ್ಷಗಳಿಂದಲೂ ಜಮೀನನ್ನು ಸುಧಾರಣೆ ಮಾಡಿಕೊಂಡು ಇವೊತ್ತು ಜನರಿಗೆ ಅನ್ನವನ್ನು ಕೊಡುತ್ತ ಬರುತ್ತಿರುವ ರೈತರ ಮೇಲೆ ಮಾತ್ರ ಇದರಲ್ಲಿ ಮಿತಿ ಇದೆ. ಆದರೆ ದೊಡ್ಡ ದೊಡ್ಡ ಇಂಡಸ್ಟ್ರೀಗಳಲ್ಲಿರುವವರ ಮೇಲೆ ಹಾಗೂ ಅರ್ಬನ್ ಏರಿಯಾದಲ್ಲಿರುವ ಜನರ ಮೇಲೆ ಯಾವ ರೀತಿಯಾದ ಸೀಲಿಂಗ್‌ನ್ನೂ ಮಾಡಿಲ್ಲ. ಇದನ್ನು ಮಾಡದೆ ರೈತರ ಮೇಲೆ ಅನ್ಯಾಯ ಮಾಡಿದರೆ ಸರಿಯಾಗುವುದಿಲ್ಲ. ಇದೂ ಅಲ್ಲದೆ ಇಂದು ಬರಗಾಲದ ಸ್ಥಿತಿ ಬೇರೆ ಬಂದು ರೈತರನ್ನು ಸುಧಾರಿಸಬೇಕೆಂದು ಇರುವಾಗ ಇದರಲ್ಲಿ 16 ಕಿಲೋಮೀಟರಿನಲ್ಲಿರಬೇಕು ಎಂದು ಹೇಳುವುದು ಸರಿಯೇ? ಇದರಿಂದ ಎಷ್ಟು ಅನ್ನ ಸಂಪತ್ತು ಬೆಳೆಯುತ್ತದೆ. ಬೇರೆಯವರಿಗೆ ಏನಾದರೂ ಅನುಕೂಲತೆ ಮಾಡಿ ಕೊಡಬೇಕಾದರೆ ಊರು ಊರಿಗೆ ಗ್ರಾಮ ಕೈಗಾರಿಕೆಯನ್ನು ಮಾಡಿ ಅದರಲ್ಲಿ ಜನರಿಗೆ ತೊಡಗಿಸಬೇಕು. ಭೂಮಿಯ ಮೇಲೆ ಈ ತರಹ ಕಾಯದೆ ಮಾಡುವುದಕ್ಕಿಂತ ಭೂಮಿಯಲ್ಲಿ ಉತ್ಪನ್ನ ಯಾರು ಹೆಚ್ಚಿಸುವುದಿಲ್ಲ ಅವರಿಂದ ಭೂಮಿಯನ್ನು ಕಸಿದುಕೊಳ್ಳುತ್ತೇವೆಂದು ಮಾಡಿದರೆ ಆ ದೃಷ್ಟಿಯಿಂದ ರೈತನ ಮೇಲೆ ಅವಲಂಬಿಸಿರುವ ಕೂಲಿಕಾರರ ಪಗಾರ ಹೆಚ್ಚಬಹುದು. ಅದರ ಸಲುವಾಗಿ 16 ಕಿಲೋ ಮೀಟರ್ ತತ್ವ ಏನಿದೆ ಅದು ಶುದ್ಧ ತಪ್ಪು. ಹೀಗೆ ಮಾಡಿದರೆ ಅವರ ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಹಾಕುವುದು ಶಕ್ಯವಿಲ್ಲ, ಮುಂದಿ ಮಕ್ಕಳಿಗೆ ಸಂರಕ್ಷಣೆಯು ಗ್ಯಾರಂಟಿ ಇಲ್ಲ. ಹೆಚ್ಚು ಭೂಮಿಯನ್ನು

(ಶ್ರೀ ಎಸ್. ಮೈ. ಪಾಟೀಲ್)

ಕಸಿದುಕೊಂಡು ಬೇರೆಯವರಿಗೆ ಕೊಡುತ್ತೇವೆಂದು ಹೇಳುವುದಾದರೆ, ಎಲ್ಲಾ ಭೂಮಿಯನ್ನೂ ಕಸಿದುಕೊಳ್ಳಿ. ಆದರೆ ಅವನ ಮಕ್ಕಳಿಗೆ ನೌಕರಿ ಕೊಡುವುದಾಗಲೀ ಅಥವಾ ಬೇರೆ ರೀತಿಯಲ್ಲಿ ಅವರ ಜೀವನ ಸಂರಕ್ಷಣೆಗಾಗಲೀ ವ್ಯವಸ್ಥೆ ಮಾಡಿ. ಮಕ್ಕಳ ಲಗ್ನ ಮತ್ತೊಂದು ಅವನು ಮಾಡಿ ಬೇಕಾದರೆ ಯಾವ ರೀತಿ ಮಾಡಬೇಕು ಎನ್ನುವುದನ್ನೂ ಯೋಚನೆ ಮಾಡಿ. ಭಾರತೀಯ ಸಂಸ್ಕೃತಿಯನ್ನು ಬರೇ ಆರ್ಥಿಕ ದೃಷ್ಟಿಯಿಂದ ನೋಡುತ್ತಿದ್ದಾರೆಯೇ ಹೊರತು ನೈತಿಕ ದೃಷ್ಟಿಯಿಂದ ನೋಡುವ ದೃಷ್ಟಿಕೋನವಿಲ್ಲ. ಪರದೇಶಗಳಲ್ಲಿ ಬೇಕಾದಷ್ಟು ದುಡ್ಡು ಹೇಗೆ ಸಿಕ್ಕುತ್ತದೆ ? ತಂದೆಯ ರಕ್ತವನ್ನು ತೆಗೆದುಕೊಂಡು ಯಂತ್ರೋಪಕರಣ ಮಾಡುತಾರೆ. ನಮ್ಮಲ್ಲಿ ಬಲಿದಾನ ಮಾಡಿ ತಂದೆ ತಾಯಿಯನ್ನು ಸಂರಕ್ಷಣೆ ಮಾಡುತ್ತಾರೆ. ನಮ್ಮಲ್ಲಿ ಭೂಮಿ ತಾಯಿ ಎನ್ನುವ ಪದವನ್ನು ಉಪಯೋಗ ಮಾಡುತ್ತೇವೆ. ಅದು ಒಂದು ವಸ್ತುವಲ್ಲ. ಅದೂ ಒಂದು ವಸ್ತು ಎಂದು ಕೆಲವು ವಾನ್ಯ ಸ್ನೇಹಿತರು ಹೇಳಿದರು. ಅದು ಸರಿಯಾದ ಮಾತಲ್ಲ. ನಾನು ಒಟ್ಟಿನಲ್ಲಿ ಹೇಳುವುದಾದರೆ 16 ಕೆರೋ ಮೀಟರ್ ದೂರವೇನಿದೆ ಆ ವ್ಯವಹಾರಿಕ, ಇದರಿಂದ ತೊಂದರೆಯಾಗುತ್ತದೆ, ಇದನ್ನು ಇಡಬಾರದು ಎಂದು ಹೇಳುತ್ತೇನೆ.

[MR. DEPUTY SPEAKER in the Chair]

ಕಾಯಿದೆ ಮಾಡುವ ಕಾಲಕ್ಕೆ ಸ್ಪಷ್ಟವಾದ ಅರ್ಥವಿರಬೇಕು. ವಕೀಲರಿಗೆ ಮಾತ್ರ ಅರ್ಥವಾಗುವಂತೆ ಇರಬಾರದು. ಆದರಿಂದ ಏನೂ ಕಾಂಪ್ಲಿಕೇಶನ್ ಉತ್ಪನ್ನವಾಗಬಾರದು. ಕಟ್ಟುಂಬದ ವ್ಯಾಖ್ಯೆಯಲ್ಲಿ ಏನು ಹೇಳಿದ್ದಾರೆಂದರೆ ಅಲ್ಪವಯಸ್ಸಿನ ಮಕ್ಕಳು, ತಂದೆ ತಾಯಿ ಎಂದು ಮಾತ್ರ ಹೇಳಿದ್ದಾರೆ. ವಯಸ್ಸಾದ ಮಕ್ಕಳು ಇದರೊಳಗೆ ಬರುವುದಿಲ್ಲ. ವಯಸ್ಸಾದ ಮಕ್ಕಳಿಗೆ ಪ್ರತ್ಯೇಕ ಸೀಲಿಂಗ್ ಇದೆ ಎಂದು ಆರ್ಥಮಾಡಬಹುದು ಎಂದು ಕೆಲವರು ಹೇಳುತಾರೆ. ಇಂಥದಕ್ಕೆ ಯಾವುದೇ ರೀತಿಯಲ್ಲಿ ಅನ್ವಯ ಕೊಡದೆ ಸ್ಪಷ್ಟವಾಗಿ ವಯಸ್ಸಿಗೆ ಬಂದು ಮಗನಿಗೆ ಏನು ವ್ಯವಸ್ಥೆ ಇದೆ ಎನ್ನುವುದನ್ನು ಕಾಯದೆಯಲ್ಲಿ ಸ್ಪಷ್ಟಪಡಿಸಬೇಕು.

ರಿಟ್ರಾಸ್ಪೆಕ್ಟಿವ್ ಎಫೆಕ್ಟ್ ಎಂದು ಇದೆ. ಯಾವುದೇ ಕಾಯದೆಯನ್ನು ಮಾಡುವ ಕಾಲಕ್ಕೆ ಹಿಂದಿನ 10 ವರ್ಷಗಳಿಂದ ಅಗು ಮಾಡಬೇಕು ಎನ್ನುವ ಶಬ್ದಗಳನ್ನು ಹಾಕಿದರೆ ಹೇಗೆ ಎನ್ನುವ ಬಗ್ಗೆ ಒಂದು ಮಾತು ಹೇಳುತ್ತೇನೆ. ಎಷ್ಟೋ ಜನ ಮಾರಾಟ ಮಾಡಿ ಹಣ ತೆಗೆದುಕೊಂಡಿದ್ದಾರೆ. ಭೂಮಿಯ ಬೆಲೆ ಕೊಡಬೇಕಾದರೆ ಅವನಿಗೆ ರೊಕ್ಕ ಎಲ್ಲಿಂದ ತಂದು ಕೊಟ್ಟಿದ್ದಾನೆ ? ಸರ್ಕಾರದಲ್ಲಿ ಇದಕ್ಕೆ ಬೇಕಾದ ಅಂಕಿ ಅಂಶಗಳಿರುವದಿಲ್ಲ. ಒಂದು ಮನೆಯನ್ನು ಮಾರಿ ಹೊಲ ತೆಗೆದುಕೊಡಿರಬಹುದು, ಮತ್ತೊಂದು ಆಸ್ತಿಯನ್ನು ಮಾರಿ ತಗೆದುಕೊಂಡಿರಬಹುದು. ಮತ್ತೆ ಹೀಗೆ ಕಾಯದೆ ಬರುತ್ತದೆ ಎನ್ನುವ ಪರಿಜ್ಞಾನ ಅವನಿಗೆ ಇರಲಿಲ್ಲ. ಇಂಥ ಪರಿಸ್ಥಿತಿಯಲ್ಲಿ ಹತ್ತು ವರ್ಷಗಳ ಹಿಂದಿನಿಂದ ಈ ಕಾಯಿದೆಯನ್ನು ಲಾಗು ಮಾಡುತ್ತೇವೆಂದರೆ ತೊಂದರೆಯಾಗುತ್ತದೆ. ನಾನು ಒಂದು ಉದಾಹರಣೆಯನ್ನು ಕೊಟ್ಟರೆ ಯಾರಾಬೇರೆ ರೀತಿಯಲ್ಲಿ ಭಾವಿಸಬಾರದು. ಒಂದು ಕನ್ಯೆಗೆ ಲಗ್ನವಾಗಿ ಹತ್ತು ವರ್ಷಗಳಾಗಿರುತ್ತವೆ. ಹತ್ತು ವರ್ಷಗಳ ನಂತರ ಕನ್ಯೆಯನ್ನು ಬಿಟ್ಟು ಕೊಡು ನಿನಗೆ ಹೇಗಾದರೂ ವಯಸ್ಸಾಗಿದೆ ಎಂದು ಹೇಳುವ ರೀತಿಯಲ್ಲಿ ಕಾಯಿದೆಗಳು ಆಗಬಾರದು. ಆ ವಸ್ತು ಪ್ರೀತಿಯ ಸಂಬಂಧ ಆ ವಸ್ತು ವ್ಯವಹಾರಕ್ಕೆ ಸಂಬಂಧಪಟ್ಟುದಲ್ಲ, ಆದ್ದರಿಂದ ರಿಟ್ರಾಸ್ಪೆಕ್ಟಿವ್ ಎಫೆಕ್ಟ್ ಎನುವುದು ಶುದ್ಧ ತಪ್ಪು ಇದೆ. ಕಾಯದೆಯನ್ನು ಪಾಯಿಂಟ್ ಪೆರೆಕ್ಕ್ ನಮತಿಗೆ ಕಳುಹಿಸಿದಂದಿನಿಂದ, ಅಥವಾ ಬಿಲ್ ಸಭೆಯ ಮುಂದೆ ಮಂಡಿಸಿದಂದಿನಿಂದ ಅಥವಾ ಕಾಯದೆ ಇಲ್ಲಿ ಪಾಸ್ ಆದಂದಿನಿಂದ ಎಂದು ಬೇಕಾದರೆ ಹೇಳಬಹುದು. ಈ ಎಲ್ಲ ದೃಷ್ಟಿಯಿಂದ ರಿಟ್ರಾಸ್ಪೆಕ್ಟಿವ್ ಎಂದು ಏನು ಹೇಳಿದ್ದಾರೆ ಅದು ಆಗಬಾರದು.

ಒಬ್ಬರು ಸ್ನೇಹಿತರು ಮಾತನಾಡುತಾ ಸ್ಕೇರ್ಸಿಟಿ ಏರಿಯಾದಲ್ಲಿ ಏಳನೇ ವರ್ಗವನ್ನು ಬಿಟ್ಟು ಎಂಟನೇ ವರ್ಗವನ್ನು ಮಾಡಬೇಕೆಂದು ಹೇಳಿದರು. ಸ್ಕೇರ್ಸಿಟಿ ಏರಿಯಾ ಎಂದರೆ ಏನು ಎಂದು ಅದರ ಸ್ಪೆಲಿಂಗ್ ಓದಿ ತಿಳಿಯುತಕ್ಕ ಮಾತಲ್ಲ. ಕನ್ನಡದಲ್ಲಿ "ಬಂಜೆ ಬಲ್ಲಳೇ ಹಡೆವ ಬೇನೆಯನ್ನು" ಎನ್ನುವ ಗಾದೆ ಇದೆ. ಯಾವ ಹೆಣ್ಣು ಮಗಳು ಮಗನಿಗೆ ಜನ್ಮ ಕೊಡುತಾಳೆಯೊ ಅವಳಿಎನಾ ಬೇರೆಯವರಿಗೆ ಅದರ ಕಲ್ಪನೆ ಬರುವುದಿಲ್ಲ. ನಮ್ಮ ಭಾಗದಲ್ಲಿ ದುರ್ಕಾಲ ಪರಿಸ್ಥಿತಿ ಏನಿದೆ ಅದರ

ಬಗ್ಗೆ 1396ನೇ ಇಸವಿಯ ಗೆಜೆಟ್ಟಿನಲ್ಲಿ ಒಂದು ವಿಚಾರ ಬಂದಿದೆ. ಕಳೆದ 700 ವರ್ಷಗಳಲ್ಲಿ 500ಕ್ಕಿಂತ ಹೆಚ್ಚಾಗಿ ದುಷ್ಕಾಲ ಬಿದ್ದಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಬಿಜಾಪುರ ಜಿಲ್ಲೆಯ ರೋಗಾವಿ ಎಂಬ ಊರು ಇದೆ. ಅಲ್ಲಿ ಶ್ರೀ ಎಲ್. ಎಚ್, ಬಿದ್ರೆ ಎಂಬುವವರಿಗೆ ನೂರು ಎಕರೆ ಭೂಮಿ ಇದೆ. ಅದನ್ನು ನಾಲ್ಕೈದು ಸಾವಿರಕ್ಕೆ ತೆಗೆದುಕೊಳ್ಳಿ, ಬಂದುದರಲ್ಲಿ ಲಾಭೋ ಇಡುತ್ತೇನೆ ಎನ್ನುವ ದೃಷ್ಟಿಯಿಂದ ಹೇಳಿದರು. ಅಲ್ಲಿನ ಪರಿಸ್ಥಿತಿ ಹೀಗಿದೆ. ದುಷ್ಕಾಲ ಪರಿಸ್ಥಿತಿ ಬಗ್ಗೆ ಈಗ ಮಾತನಾಡಲಿಕ್ಕೆ ಬರುವುದಿಲ್ಲ. ಬಿಜಾಪುರ ಜಿಲ್ಲೆಯಲ್ಲಿ ಯಾವತ್ತಿಗೂ ಅತ್ಯಂತ ದುಷ್ಕಾಲ ಬೀಳತಕ್ಕದ್ದು. ಅದಕ್ಕೆ ಆ ಭಾಗದ ಭೂಮಿಯನ್ನು ಏಳನೇ ವರ್ಗದಲ್ಲಿ ತರಕೂಡದು. ಮುಖ್ಯವಾಗಿ ಇಂಡಿ, ಸಿಂದಗಿ ತಾಲ್ಲೂಕುಗಳಲ್ಲಿ, ಎಂಟನೇ ವರ್ಗದಲ್ಲಿ ತರಬೇಕು. ಗುಲ್ಬರ್ಗ, ಬೀದರ್, ಬಿಜಾಪುರ, ಬಳ್ಳಾರಿ, ಚಿತ್ರದುರ್ಗ, ಕೋಲಾರ ಇಂಥ ಜಿಲ್ಲೆಗಳಲ್ಲಿ ಯಾವತ್ತಿಗೂ ಮೈಸೂರು ರಾಜ್ಯದಲ್ಲಿ ದುಷ್ಕಾಲ ಬೀಳತಕ್ಕ ಪರಿಸ್ಥಿತಿ ಇದೆ. ಇಲ್ಲಿ ಯಾವ ವರ್ಗಕ್ಕೆ ಭೂಮಿಯನ್ನು ಹಾಕಿದ್ದಾರೆನ್ನುವುದು ಗೊತ್ತಿಲ್ಲ. ದುಷ್ಕಾಲ ಬೀಳತಕ್ಕ ಭಾಗಗಳಲ್ಲಿ ಎಂಟನೇ ವರ್ಗದ ಭೂಮಿ ಎಂದು ಮಾಡಿ 100 ಎಕರೆ ಮಾಡಬೇಕು ಎಂದು ಹೇಳುತ್ತೇನೆ.

12 ಸಾವಿರ ರೂಪಾಯಿಗಳ ವರಮಾನವಿರುವವರಿಗೆ ಭೂಮಿ ಇರಬಾರದು ಎಂದು ಹೇಳಿದ್ದಾರೆ. ಇದು ನಿವ್ವಳ ವರಮಾನವೇ ಹೇಗೆ ಎನ್ನುವುದು ಗೊತ್ತಿಲ್ಲ. ಉತ್ಪನ್ನ ಎಂದು ಹೇಳಿದ್ದಾರೆ. 12,000 ರೂಪಾಯಿ ಉತ್ಪನ್ನ ಇರುವವನಿಗೆ ಭೂಮಿ ಹೋಯಿತು ಎಂದರೆ ನಾಳೆ ಅವನಿಗೆ ಟಿ. ಬಿ. ಆಯಿತು, ಮತ್ತೊಂದು ರೋಗ ಪ್ರಾಪ್ತವಾಯಿತು, ಅಥವಾ ಅಪಘಾತವಾಗಿ ಕೈಕಾಲು ಹೋಯಿತು ಎಂದರೆ ಇಂಥ ಪರಿಸ್ಥಿಯಲ್ಲಿ ಮುಪ್ಪಿನ ಕಾಲಕ್ಕೆ ಮುಂದಿನ ವಂಶಕ್ಕೆ ಏನು ಮಾಡಬೇಕು ಎನ್ನುವುದನ್ನು ಕೂಡ ಯೋಚನೆ ಮಾಡಬೇಕಾಗಿದೆ. ನನ್ನ ಮಗ ಬಿ. ಎ. ಕಲಿಯುತ್ತಿದಾನೆ. ಈ ಕಾಯಿದೆ ಬರುತ್ತದೆ ಎಂದು ತಿಳಿದುಕೊಂಡು ನಾಳೆ ಪ್ರಿಪ್ರಿಲ್ ತಿಂಗಳಲ್ಲಿ ಪರೀಕ್ಷೆ ಆಗುವುದಿದ್ದರೂ ಈಗಲೇ ಬಿಟ್ಟಿಸಿದ್ದೇನೆ. ಗ್ರಾಜ್ಯುಯೇಟ್ ಆಗುವ ಕಾಳಜಿ ಬೇಡ, ಹೊಲ ಭೂಮಿ ನೋಡಿಕೋ ಎಂದು ಹೇಳಿದ್ದೇನೆ. ಒಂದು ಕುಟುಂಬಕ್ಕೆ 50 ಎಕರೆ ನೂರು ಎಕರೆ ಭೂಮಿ ಇದ್ದರೂ ಭೂಮಿಯನ್ನು ಸಲುವಾಗಿ ಕಾಲೇಜಿಗೆ ಹೋಗುವುದಕ್ಕೆ ಸಾಧ್ಯವಿಲ್ಲ. ಡಾಕ್ಟರಾಗುವುದಕ್ಕೆ ಶಕ್ಯವಿಲ್ಲ, ಅವನ ಆರ್ಥಿಕ ಪರಿಸ್ಥಿತಿ ಉತ್ತಮವಾಗಲಿಕ್ಕೆ ಶಕ್ಯವಿಲ್ಲ. ದನಗಳ ಹಾಗೆ ಅವರೂ ದುಡಿಕರಬೇಕಾಗಿರುತ್ತದೆ. ಅವರೂ ಅಸೆಂಬ್ಲಿ ನೋಡುವುದಕ್ಕೆ ಬಂದು ಗ್ಯಾಲರಿಯಲ್ಲಿ ಕುಳಿತು ಪಿಳಿಪಿಳಿ ಕಣ್ಣು ಬಿಟ್ಟುಕೊಂಡು ಇರಬೇಕಾಗುತ್ತದೆ. ಅಧಿಕಾರ ಇದ್ದವರು ಅಧಿಕಾರ ಇಲ್ಲದವರ ಮೇಲೆ ತಮ್ಮ ಅಧಿಕಾರವನ್ನು ತೋರಿಸುತ್ತಿದ್ದಾರೆ. ಶ್ರೀಮಂತರು ಎಷ್ಟು ಜನ ಬಡವರ ಸಲುವಾಗಿ ಮಾತನಾಡುವವರಿದ್ದಾರೆ ? ಎಲ್ಲರೂ ಫಸ್ಟ್ ಕ್ಲಾಸಿನಲ್ಲಿ ಹೋಗುವವರಿದ್ದಾರೆ. ಆದರೆ ನೊಂದವರಿಗೆ ಪ್ರತ್ಯಕ್ಷವಾಗಿ ಸಹಾಯ ಮಾಡುವವರು ಯಾರೂ ಇಲ್ಲ.

3-00 P.M.

ನಾನು ಪ್ರತ್ಯಕ್ಷವಾಗಿ ಅವರನ್ನು ನೋಡಿದ್ದೇನೆ. ಆದರೆ ನನಗೆ ಇಂದಿರಾ ಗಾಂಧಿಯವರ ಪರಿಚಯ ಇಲ್ಲ. ತಾವು ರೈತರ ಕಡೆ ಸರಿಯಾದ ದೃಷ್ಟಿಯಿಂದ ನೋಡಬೇಕು ಎಂದು ನಾನು ಹೇಳಬಯಸುತ್ತೇನೆ. ಒಂದು ವಸ್ತುವನ್ನು ಅಂದರೆ ಭೂಮಿಯನ್ನು ಮತ್ತೊಂದು ಕಡೆಗೆ ಕಸಿದು ಕೊಟ್ಟರೆ ಅದರ ಬೆಳವಣಿಗೆ ಜಾಸ್ತಿ ಆಗುತ್ತದೆ ಎಂದು ಹೇಳುವುದು ಸರಿಯಲ್ಲ. ಅದರ ಬೇನಾಮಿಯ ಮಾಡುವ ರೈತರಿಗೆ ವ್ಯವಸಾಯಕ್ಕೆ ಬೇಕಾದ ಯಂತ್ರೋಪಕರಣ ಸಲಕರಣೆಗಳನ್ನು ಮಾಡಿಕೊಡಿರಿ, ಆ ರೈತರಿಗೆ ಬೇಕಾದ ಬ್ಯಾಂಡಿಂಗ್ ಕೆಲಸ ಮಾಡಿಕೊಡಿರಿ, ನೀರಾವರಿ ಕೆಲಸಗಳನ್ನು ಮಾಡಿಕೊಡಿರಿ, ಆ ಕೆಲಸವನ್ನು ಮಾಡಿಕೊಟ್ಟರೆ ಅವನು ಆ ಭೂಮಿಯಲ್ಲಿ ಹೆಚ್ಚು ಬೆಳೆವಣಿಗೆ ಮಾಡುವುದಕ್ಕೆ ಸಾಧ್ಯ. ಅದನ್ನು ಹೇಳಿದರೆ ಒಪ್ಪೋಣ. ಇಡೀ ಭಾರತ ದೇಶದಲ್ಲಿ ಯಾವ ರೈತ ಬೆಳೆದರೂ ಎಲ್ಲರಿಗೂ ಅನ್ನ ಸಿಕ್ಕುತ್ತದೆ. ಇದರ ಬಗ್ಗೆ ನಾನು ಅನೇಕ ವಿಷಯುಗಳನ್ನು ಹೇಳಬೇಕೆಂದಿದ್ದೆ. ಆದರೆ ಈ ಮನೂದೆ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗುವುದರಿಂದ ಅಲ್ಲಿ ಅನೇಕ ತಜ್ಞರು ಇದನ್ನು ಕೂಲಂಕಷವಾಗಿ ಪರಿಶೀಲಿಸಿ ಸರಿಯಾದ ಒಂದು ತಿದ್ದುಪಡಿ ಮಾಡಲಿ ಎಂದು ಸೂಚನೆ ಬಯಸುತ್ತೇನೆ. ಮತ್ತು ಅದರಲ್ಲಿ 16 ಕಿಲೋಮೀಟರ್ ಅಂತರ ಇರಬೇಕು ಎಂದು ಏನು ಇಟ್ಟಿದ್ದೀರೋ ಅದನ್ನು ತೆಗೆಯಬೇಕು ಎಂದು ಹೇಳುತ್ತೇನೆ. ಮತ್ತು ಈ ಮನೂದೆಯಲ್ಲಿ ಫ್ಯಾಮಿಲಿ ಡೆಫಿನಿಷನ್‌ನಲ್ಲಿ ಏನು ಒಂದು ಮಿತಿ ಇಟ್ಟಿದ್ದೀರೋ ಅದನ್ನು ಸರಿ ಮಾಡಬೇಕು. ಅದರಲ್ಲಿ ಲಗ್ನ ಆದ ಗಂಡು ಮಕ್ಕಳಿಗೆ ಎಷ್ಟು ಇರಬೇಕು ಅನ್ ಮ್ಯಾರೀಡ್ ಹೆಣ್ಣುಮಕ್ಕಳಿಗೆ ಎಷ್ಟು ಇರಬೇಕು ಅದನ್ನು ಸ್ಪಷ್ಟವಾಗಿ ಸೂಚಿಸಬೇಕು. ಬಿಜಾಪುರ ಮತ್ತು ನಾರದರನ್ ಏರಿಯಾದಲ್ಲಿ ಯಾವಾಗಲೂ ಸ್ಕೇರ್ಸಿಟಿ ಇರುತ್ತದೆ. ಅದನ್ನು 8ನೇ ತರಗತಿಗೆ ಸ್ಕೇರ್ಸಿಟಿ ಬೇಕು ಎಂದು ಹೇಳುತ್ತೇನೆ.

(ಶ್ರೀ ಎಸ್. ವೈ. ಪಾಟೀಲ್)

ಬಿಜಾಪುರ, ಬಾಗೇವಾಡಿ, ಇಂಡಿ, ಸಿಂದಗಿ ಮತ್ತು ಜಮಖಂಡಿ ಇವುಗಳನ್ನು ಕ್ಲಾಸಿಫಿಕೇಷನ್ ಆಫ್ ಲ್ಯಾಂಡ್ಸ್‌ನಲ್ಲಿ 8 ನೇ ತರಗತಿಗೆ ಸೇರಿಸಬೇಕು. ನಾನು ಈಗತಾನೇ ಜಮಖಂಡಿ ಮತ್ತು ಹುನಗುಂದ್‌ನಿಂದ ಬರುತ್ತಾ ಇದ್ದೇನೆ. ಅಲ್ಲಿ ಬೆಳೆ ಏನೂ ಆಗಿಲ್ಲ. ಅಲ್ಲಿ ಬೇರೆ ಒಂದು ಇರ್ರಿಗೇಷನ್ ಕೆನಾಲ್ ಇದೆ. ಆ ಕಾಲುವೆಯಲ್ಲಿ ನೀರು ಇಲ್ಲ. ಅದು It is a body without sole ಎಂದ ಹಾಗೆ ಇದೆ. ಆದುದರಿಂದ ನಾನು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ಬಡವರಿಗೆ ಸಾಧಕವಾಗುವಂಥ ಕೆಲಸ ಮಾಡಿ. ಅವರಿಗೆ ಬೇಕಾದರೆ ಸ್ಕಾಲರ್‌ಷಿಪ್ ಕೊಡಿ, ಅವರು ಬಿ.ಎ. ಬಿ.ಟಿ. ಬೇಕಾದ್ದು ಓದಿಕೊಳ್ಳಲಿ. ಅವರಿಗೆ ಇಷ್ಟು ಕೊಡಬೇಕು ಎಂದು ರಿನರ್ವೇಷನ್ ಬೇಕಾದರೆ ಇಟ್ಟುಕೊಳ್ಳಿ. ಅವರಿಗೆ ಯಾವ ವಿದ್ಯಾಭ್ಯಾಸವನ್ನಾದರೂ ಮಾಡಿಸಿ, ಅವರಿಗೆ ಬೇಕಾದರೆ ಸ್ಕೂಲ್ ಟೀಚರ್ ಪೋಸ್ಟ್‌ಗೆ ಕಳುಹಿಸಿ. ಆದರೆ ವ್ಯವಸಾಯದಲ್ಲಿ ಅನುಭವ ಇಲ್ಲದೇ ಇರತಕ್ಕಂಥಾವರಿಗೆ ಜಮೀನು ಕೊಡುವುದಕ್ಕೆ ಹೋಗಬೇಡಿ. ಅನುಭವ ಇಲ್ಲದೇ ಇರತಕ್ಕಂಥಾವನ ಕೈಯಲ್ಲಿ ಜಮೀನು ಕೊಟ್ಟರೆ ಅವನು ಏನು ಬೆಳೆದಾನು ? ಹಳ್ಳಿಗಳಲ್ಲಿ ಎಷ್ಟೋಮಂದಿ ರೈತರು ಭೂಮಿಗಾಗಿ ಅವರ ಪ್ರಾಣವನ್ನೇ ಕಳೆದುಕೊಂಡಿದ್ದಾರೆ. ಅವರು ಭೂಮಾತೆ ಎಂದು ಹೇಳುತ್ತಾರೆ. ಅವನು ಎಲ್ಲರಿಗೂ ಅವಶ್ಯಕವಾದ ಆಹಾರವನ್ನು ಬೆಳೆಯುತ್ತಾನೆ. ಇದರಲ್ಲಿ ಪ್ಲಾನಿಂಗ್ ಕಮೀಷನ್ ನವರೂ ಇರುವುದರಿಂದ ಅವರು ಈ ರೀತಿ ಮಾಡಿದ್ದಾರೆ, ಆದುದರಿಂದ ಅವರಿಗೆ ನೀವು ಹೇಳಬೇಕು. ಇದರಲ್ಲಿ ಮಹತ್ತರವಾದ ಬದಲಾವಣೆ ಮಾಡಬೇಕು, ಸಾಗುವಳಿಗೆ ಭೂಮಿಯನ್ನು ಹಂಚುವುದರಿಂದ ಅನೇಕರಿಗೆ ಅದರ ಹಕ್ಕು ಹೊರಟು ಹೋಗುತ್ತದೆ. ಇದರಿಂದ ಏನಾಗುತ್ತದೆ ಎಂದರೆ ಇಲ್ಲದೇ ಇದ್ದವರನ್ನು ಇದ್ದವರನ್ನಾಗಿ ಮಾಡುವುದೇ ಹೊರತು ಇದ್ದವರಿಗೆ ಅವರಿಗೆ ಬೇಕಾದಂಥ ಸಹಾಯ ಸವಲತ್ತುಗಳನ್ನು ಕೊಟ್ಟು ಅವರನ್ನು ಮುಂದಕ್ಕೆ ತರುವಂತೆ ಮಾಡಬೇಕು ಎಂದು ಹೇಳಬೇಕು. ವ್ಯವಸಾಯದಲ್ಲಿ ಅನುಭವ ಇಲ್ಲದೇ ಇರತಕ್ಕಂಥವರಿಗೆ ಭೂಮಿಯನ್ನು ಕೊಡುವುದಕ್ಕೆ ಹೋಗಬೇಡಿ. ನೀವು ಕಾರವರ ತರಹ ನಡವಳಿಕೆ ಮಾಡಬೇಡಿ. ಬೇಕಾದರೆ ಭೂಮಿ ಇಲ್ಲದೇ ಇರುವವರಿಗೆ ಯಾವುದಾದರೂ ಒಂದು ಇಂಡಸ್ಟ್ರೀಸ್ ಮಾಡಿಕೊಡಿರಿ, ಒಂದು ಮಿಲ್‌ಓಪನ್ ಮಾಡಿರಿ, ಆ ಕಾರ್ಖಾನೆಗೆ ಬೇಕಾಯವರನ್ನು ತೆಗೆದುಕೊಳ್ಳಬೇಡಿ, ಭೂಮಿ ಇಲ್ಲದೇ ಇರುವವರನ್ನೇ ತೆಗೆದುಕೊಳ್ಳಿ ಎಂದು ಮಾಡಿರಿ. ಇದರ ಬಗ್ಗೆ ಏನಾದರೂ ಕಾಯಿದೆ ಮಾಡಿದ್ದೀರಾ ?

ಶ್ರೀ ಕೋಣಂದೂರು ಲಿಂಗಪ್ಪ.--ಹಾಗಾದರೆ ಬಡವರಿಗೆ ಜಮೀನು ಕೊಡಬಾರದು ಎಂದು ನಿಮ್ಮ ಅಭಿಪ್ರಾಯವೇ ?

ಶ್ರೀ ಎಸ್. ವೈ. ಪಾಟೀಲ್.—ಅವರಿಗೆ ಕೊಡಬಾರದು ಅಂತಲ್ಲ, ಅವರು ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸುವುದಕ್ಕಾಗುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಹಾಗಾದರೆ ದೇಶದಲ್ಲಿ ದೊಡ್ಡ ಶ್ರೀಮಂತರಾಗಿರುವ ಟಾಟಾ ಬಿರ್ಲಾರವರಿಗೆ ಮಾರಾಟ ಮಾಡಿ ಬಿಟ್ಟರೆ ಈ ಪ್ರಾಬ್ಲೆಮ್ಮೇ ಬರುವುದಿಲ್ಲ ಅಲ್ಲವೇ ?

ಶ್ರೀ ಎಸ್. ವೈ. ಪಾಟೀಲ್.—ಸಾಮಾನ್ಯವಾದ ರೈತನಿಗೂ ಟಾಟಾ ಬಿರ್ಲಾರವರಿಗೂ ಇದರಲ್ಲಿ ಏನು ಸಂಬಂಧ ಇದೆ.

ಶ್ರೀ ಎಂ. ಎಸ್. ಕೃಷ್ಣನ್.--ಜಮೀನು ಇಲ್ಲದೇ ಇರುವವರಿಗೆ ಕೊಡಬೇಕಾದರೆ ಜಮೀನು ಇರುವವರ ಹತ್ತಿರ ತೆಗೆದುಕೊಂಡು ಕೊಡಬೇಕಲ್ಲವೇ ? ತೆಗೆದುಕೊಳ್ಳದೇ ಇದ್ದರೆ ಹೇಗೆ ಕೊಡುವುದಕ್ಕಾಗುತ್ತದೆ ?

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್.—ಮಾನ್ಯ ಎಸ್. ವೈ. ಪಾಟೀಲರು ಜನಸಂಘದ ಪಾರ್ಟಿಯೊಂದಿಗೆ ಪ್ಯೂತ್ರಿ ಮಾಡಿದ್ದರಿಂದ ಅವರು ಈ ರೀತಿ ಮಾತನಾಡುತ್ತಾ ಇದ್ದಾರೆ.

ಶ್ರೀ ಎಸ್. ವೈ ಪಾಟೀಲ್.—ಹಿಂದೂಸ್ತಾನದ ಬಡಜನತೆಯ ಕಲ್ಯಾಣಕ್ಕೆ ಈ ರೀತಿ ಒಂದು ಸುಧಾರಣೆ ಮಾಡಬೇಕು ಎಂದು ಹೇಳುತ್ತೇನೆ. ಯಾರೇ ಇರಲಿ ಅನುಭವ ಇಲ್ಲದೇ ಇರುವವರಿಗೆ ಒಬ್ಬ ಮನುಷ್ಯನಿಗೆ 2 ಎಕರೆ 3 ಎಕರೆ ಅಂತ ಜಮೀನು ಹಂಚಿದರೆ ಅವನು ದೇಶದಲ್ಲಿ ಹೆಚ್ಚು ಆಹಾರೋತ್ಪನ್ನ ಮಾಡುವುದಕ್ಕಾಗುತ್ತದೆಯೇ ! ಒಬ್ಬ ಮನುಷ್ಯ ಒಂದು ಗಿರಣಿಯಲ್ಲಿ ಕೆಲಸಕ್ಕೆ ಸೇರಿದರೆ ಅವನಿಗೆ ಸಂಬಳ ಬರುತ್ತದೆ ಅಲ್ಲದೇ ಬೋನಸ್ 400 ರೂಪಾಯಿ ಸಿಕ್ಕುತ್ತದೆ. ಅದೇ ಒಬ್ಬ ಮನುಷ್ಯನಿಗೆ ಜಮೀನು ಕೊಟ್ಟರೆ ಅವನಿಗೆ ಯಾವ ತರಹವಾದ ಫೆಸಿಲಿಟೀಸ್ ಕೊಡುವುದಿಲ್ಲ. ಈಪ್ಪತ್ತಿನ ದಿವಸ ಭೂಮಿ ಇಲ್ಲದೇ ಇರುವವರು ಓದಿಕೊಂಡಂಥಾವರು ಒಬ್ಬರು ಡಾಕ್ಟರ್ ಆಗಲಿ,

ಒಬ್ಬ ಇಂಜಿನೀಯರ್ ಆಗಲಿ ಅವನ ಬ್ಯಾಂಕ್‌ನಲ್ಲಿ ಇಟ್ಟಿರುವ ಎಸ್.ಬಿ. ಲೆಕ್ಕ ತೆಗೆದು ನೋಡಿದರೆ ಎಷ್ಟು ದುಡ್ಡು ಇಟ್ಟಿದ್ದಾನೆ ಎನ್ನುವುದು ಗೊತ್ತಾಗುತ್ತದೆ. ಅದೇರೀತಿ ಯಾವನ ಭೂಮಿ ಒಡೆಯನಾಗಿದ್ದಾನೋ ಅವನ ಲೆಕ್ಕವನ್ನೂ ನೋಡಿ. ನಮ್ಮ ಹತ್ತಿರ 10 ಜನಕ್ಕೂ ಬ್ಯಾಂಕ್‌ನಲ್ಲಿ ದುಡ್ಡು ಇಡುವ ಯೋಗ್ಯತೆ ಇಲ್ಲ. ಅವನು ಯಾವ ಬ್ಯಾಂಕ್‌ನಲ್ಲೂ ಎಸ್.ಬಿ. ಅಕೌಂಟ್ ಇಟ್ಟಿಲ್ಲ. ಅವನು ಚೆಕ್ ಬರೆಯುವ ಸ್ಥಿತಿಗೇ ಹೋಗುವುದಿಲ್ಲ. ಅವನ ಪರಿಸ್ಥಿತಿ ನೋಡಿದರೆ ಬಹಳ ಶೋಚನೀಯವಾಗಿರುತ್ತೆ. ನನಗೇ ಒಂದು ಎಕರೆ ಭೂಮಿಯೂ ಇಲ್ಲ ಆದರೂ ಈ ವಿಷಯದಲ್ಲಿ ಹೇಳಬೇಕಾದರೆ ಇಂತಿಷ್ಟು ಜನರು ಇಂತಿಷ್ಟು ಕೆಲಸವನ್ನು ಮಾಡಬೇಕು ಎಂತ ಮೊದಲಿನಿಂದಲೂ ದೈವದತ್ತವಾಗಿ ಬಂದಿದೆ, ಆದುದರಿಂದ ಈ ಮಾತನ್ನು ಹೇಳಬೇಕಾಗಿದೆ. ಉದಾಹರಣೆಗೆ ಹೇಳುವುದಾದರೆ ಮಹಾತ್ಮಾ ಗಾಂಧೀಜಿಯವರು ಇದ್ದರು ಅವರನ್ನು ಮಹಾತ್ಮಾ ಎಂದು ಕರೆಯುತ್ತಿದ್ದರು, ಅದೇ ರೀತಿ ತಾವೆಲ್ಲಾ ಮಹಾತ್ಮಾ ಗಾಂಧೀಜಿಯವರಂತೆ ಆಗುವುದಕ್ಕೆ ಆಗುತ್ತದೆಯೇ! ಈಗ 10 ಪೈಸೇ ಕೊಟ್ಟು ಒಂದು ಪೋಸ್ಟ್ ಕಾರ್ಡ್ ತೆಗೆದುಕೊಂಡು ವಿಷಯಗಳನ್ನು ಬರೆದು ಪೋಸ್ಟ್ ಆಫೀಸಿಗೆ ಹಾಕಿದರೆ ಪೋಸ್ಟ್ ಅಂಡ್ ಟೆಲಿಗ್ರಾಫ್ ಇಲಾಖೆಯವರು ಅದನ್ನು ಒಯ್ಯುತ್ತಾರೆ. ಅದು ಬಿಟ್ಟು ಈಗ ನನ್ನ ಹತ್ತಿರ ಒಂದು ಪೇಪರ್ ಇದೆ ನೋಡಿ, ಅದನ್ನು ಎಲ್ಲಿ ಹಾಕಬೇಕೋ ಅಲ್ಲಿ ಹಾಕದೆ ಈ ರೀತಿ ಹರಿದು ಚೂರು ಮಾಡಿದರೆ ಅದು ಈ ಬುಟ್ಟಿಗೆ ಹೋಗುತ್ತದೆ. ಆದುದರಿಂದ ಯಾರು ಯಾವ ಕೆಲಸವನ್ನು ಮಾಡಬೇಕೋ ಅವರು ಆ ಕೆಲಸವನ್ನು ಮಾಡಬೇಕು. ಒಬ್ಬ ಡಾಕ್ಟರ್ ಆದರೆ ಒಬ್ಬ ಇಂಜಿನೀಯರ್ ಆದರೆ ನೀವೂ ಆಗುವುದಕ್ಕಾಗುತ್ತದೆಯೆ? ಮತ್ತು ಈಗ ನಮ್ಮ ಅಧ್ಯಕ್ಷರು ಇದ್ದಾರೆ, ಮುಖ್ಯಮಂತ್ರಿಗಳು ಇದ್ದಾರೆ ಆ ಸ್ಥಾನದಲ್ಲಿ ನಾವು ಕೂತುಕೊಳ್ಳುವುದಕ್ಕಾಗುತ್ತದೆಯೇ!

ಶ್ರೀ ಕೋಣಂದೂರು ಲಿಂಗಪ್ಪ.—ಅಧ್ಯಕ್ಷರೇ, ಅವರು ಈರೀತಿ ಉಪಮಾನ ಉಪಮೇಯಗಳನ್ನು ಹೇಳುತ್ತಿದ್ದಾರೆ. ಈ ಬಿಲ್ಲಿಗೆ ಸಂಬಂಧಪಟ್ಟದ್ದು ಹೇಳುತ್ತಾ ಇಲ್ಲ.

ಶ್ರೀ ಎಸ್. ಮೈ. ಪಾಟೀಲ್.—ಮಾನ್ಯ ಸದಸ್ಯರಿಗೆ ಇದನ್ನು ಪತಕ್ಕೆ ಹೇಳುತ್ತಿದ್ದೇನೆ ಎಂದರೆ ಈಗ ಸೇಲ್ಸ್‌ಟ್ಯಾಕ್ಸ್ ಡಿಪಾರ್ಟ್‌ಮೆಂಟ್ ಇದೆ, ಅವರು ವ್ಯಾಪಾರಸ್ಥರಿಂದ ಹಣ ವಸೂಲು ಮಾಡಬೇಕು ಎಂದು ಇದೆ, ಅದು ಅವರ ಕೆಲಸ ಅವರು ಮಾಡಬೇಕು, ಅದು ಬಿಟ್ಟು ಬೇರೆಯವರು ಹೋದರೆ ಹೊಡೆಯುತ್ತಾರೆ. ಆದುದರಿಂದ ಬಡತನಕ್ಕೆ ಬಡವರು ಹೊಣೆಗಾರರಾಗುತ್ತಾರೆಯೇ ವಿನಃ ಬೇರೆಯವರು ಯಾರೂ ಹೊಣೆಗಾರರಾಗುವುದಿಲ್ಲ. ಆದುದರಿಂದ ನನ್ನ ಉತ್ತರವಾದರೂ ಇಷ್ಟೆ. ಕೋಣಂದೂರು ಲಿಂಗಪ್ಪನವರು ನನಗೆ ವಿರೋಧವಲ್ಲ. ನನಗೆ ಈಗ ಒಂದು ಎಕರೆ ಭೂಮಿಯೂ ಇಲ್ಲ. ನನಗೆ ಹಿಂದೆಲ್ಲ ಒಂದು ಎಕರೆ ಭೂಮಿ ಇತ್ತು ಅದು ಕೆರೆಯ ಮಗ್ಗುಲಲ್ಲೆ ಇತ್ತು. ಅದನ್ನು ಒಂದು ಕೆರೆ ಕಟ್ಟುವುದಕ್ಕೆ ನಿಮ್ಮ ಜಮೀನು ಕೆರೆ ಹತ್ತಿರ ಇರುವುದರಿಂದ ಅದನ್ನು ಕೊಡಿರಿ ಎಂದು ಕೇಳಿದರು, ಆವಾಗ ಅದನ್ನು ಕೊಟ್ಟುಬಿಟ್ಟೆ.

ಶ್ರೀ ಎಸ್. ಎಂ. ಶೀರನಾಳ ಚಂದ್ರಶೇಖರ್.—ತಮಗೆ ಒಂದು ಎಕರೆ ಭೂಮಿ ಇಲ್ಲದೇ ಇದ್ದರೂ ಕೂಡ ಜಮೀನು ಇದ್ದವರಿಗೇನೇ ಜಮೀನು ಕೊಡಿ ಎಂದು ಅವರ ಪರವಾಗಿಯೇ ವಾದ ಮಾಡುತ್ತಿದ್ದೀರಲ್ಲಾ, ಅವರ ಪರವಾಗಿ ಏನಾದರೂ ವಕಾಲತ್ತು ವಹಿಸಿದ್ದೀರಾ!

ಶ್ರೀ ಎಸ್. ಮೈ. ಪಾಟೀಲ್.—ಈಗ ನೋಡಿರಿ ಈ ವಿಷಯದಲ್ಲಿ ಜನರಿಗೆ ಒಂದು ಕಲ್ಪನಾ ಭಾವನೆ ಬಂದಿದೆ. ಮಂತ್ರಿಗಳು ಅಧ್ಯಕ್ಷರಾದಿಯಾಗಿ ನಮ್ಮ ಪಗಾರ 400 ರೂಪಾಯಿಯನ್ನು ಸೈರ್ಸಿಟಿ ಕಂಡೀಷನ್‌ಗೆ ಕೊಡಿರಿ ಎಂದರೆ ಕೊಡುತ್ತಾರೆಯೇ? ಹಿಂದೆ ಗಾಂಧಿ ಟೋಪಿಯನ್ನು ಕಾಕಿ ಕೊಂಡು ಹೋಗುತ್ತಿದ್ದರೆ ನಮ್ಮನ್ನೆಲ್ಲಾ ಪೂಜೆ ಮಾಡುತ್ತಿದ್ದರು. ಈಗ ಆದೇ ಗಾಂಧಿ ಟೋಪಿಯನ್ನು ಹಾಕಿಕೊಂಡು ಹೋದರೆ ಹೊಡೆಯುವುದಕ್ಕೆ ಬರುತಾರೆ, ಬಯ್ಯುವುದಕ್ಕೆ ಬರುತ್ತಾರೆ. ಪತಕ್ಕೆ ಈ ರೀತಿ ಆಯಿತು? ಇದನ್ನು ಯೋಚನೆ ಮಾಡಬೇಕು. ಈಗ ತಾವು ಅಧ್ಯಕ್ಷರಾಗಿದ್ದೀರಿ. ಆ ಜಾಗದಲ್ಲಿ ನಾವು ಕೂತರೆ ನಮಗೆ ನಡೆಸುವುದಕ್ಕೆ ಬರುವುದಿಲ್ಲ. ದಯವಿಟ್ಟು ಕ್ಷಮಿಸಿ ಹೇಳುತ್ತೇನೆ. ಇದು ಭೂಮಿ ಪ್ರಶ್ನೆ. ಸಂಸಾರ ಬಿಡಬೇಕು ಎಂದು ಶ್ರೀ ಶಂಕರಾಚಾರ್ಯರು ಹೇಳಿದ್ದಾರೆ. ಎಲ್ಲರೂ ಹೆಂಡತಿ ಬಿಟ್ಟಿದ್ದಾರೆಯೇ? ಅದರ ನಲುವಾಗಿ ವೇದಾಂತ ಬೇರೆ, ಸಿದ್ಧಾಂತ ಬೇರೆ. ದಯವಿಟ್ಟು ನಾನು ಹೇಳಿದಂತಹ ಪಾಯಿಂಟು ಪಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ನನ್ನ ದೃಷ್ಟಿಯಿಂದ ಸುಧಾರಣೆಯಾಗಬೇಕು. ಅದರ ನಲುವಾಗಿ ಭೂ ಮಾಲೀಕ ಸಣ್ಣ ಸಣ್ಣ ರೈತ ಅನಾದಿ ಕಾಲದಿಂದ ಭೂಮಿಯನ್ನು ಜೋಪಾನ ಮಾಡಿಕೊಂಡು ಜನರಿಗೆ ಅನ್ನ ಸಹಾಯ ಮಾಡಿದ್ದಾನೆ. ಪುಣ್ಯಾತ್ಮ ಎಂದು ತಿಳಿದರೆ ಸಾಕು ಎಂದು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

‡ಶ್ರೀ ಪಿ. ಸಿ. ಶೆಟ್ಟರ್ (ಹಾನಗಲ್).—ಸ್ಪೀಕರ್ ಸರ್, ಇವತ್ತಿನ ದಿವಸ ಮಾನ್ಯ ಕಂದಾಯ ಮಂತ್ರಿಗಳು ಮಂಡಿಸಿರುವ ಮಸೂದೆಯನ್ನು ಸಂಪೂರ್ಣವಾಗಿ ಬೆಂಬಲಿಸಿ ನಾನು ಇಲ್ಲಿ ಕೆಲವೊಂದು ಸೂಚನೆಗಳನ್ನು ಮಾಡಬಯಸುತ್ತೇನೆ. ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಪೂರ್ವದಲ್ಲಿ ಈ ಸಭೆಯಲ್ಲಿ ವ್ಯಕ್ತವಾದಂತ ಅಭಿಪ್ರಾಯಗಳ ಬಗ್ಗೆ ಮಾತನಾಡದೆ ಹೋದರೆ ನಾವೂ ಇವತ್ತು ಗೊಂದಲಕ್ಕೆ ಈಡಾಗಬಹುದು ಎಂದು ತಿಳಿದು ಕೆಲವೊಂದು ವಿಷಯಗಳನ್ನು ಮಾತನಾಡಬಯಸುತ್ತೇನೆ. ಈ ಸಭೆಯಲ್ಲಿ ನಾವು ಎಲ್ಲರೂ ಯಾವುದೇ ಪಕ್ಷದವರಾಗಲಿ, ಪ್ರತಿಯೊಬ್ಬರೂ ಬಡವನ ಬಗ್ಗೆ ಹಾಗು ರೈತನ ಬಗ್ಗೆ ಮಾತನಾಡಿದ್ದಾರೆ. ಆದರೆ ಈ ಮಸೂದೆಯನ್ನು ಬೆಂಬಲಿಸಿದ್ದಾರೋ ಇಲ್ಲವೋ ಮಾತ್ರ ಖಚಿತವಾಗಿ ವ್ಯಕ್ತವಾಗುತ್ತಿಲ್ಲ. ಏಕೆ ಹೀಗಾಗುತ್ತದೆ ಎಂದರೆ ಈ ಮಸೂದೆಯನ್ನು ನಾವು ಸರಿಯಾಗಿ ಅರ್ಥಮಾಡಿಕೊಂಡು ಈ ಮಸೂದೆ ಯಾರಿಗಾಗಿ ಮಂಡಿಸಲ್ಪಟ್ಟಿದೆ ಎನ್ನುವುದನ್ನು ತಿಳಿದುಕೊಂಡರೆ ನಾವು ಇಲ್ಲಿ ಗೊಂದಲಕ್ಕೆ ಬೀಳುವ ಅವಶ್ಯಕತೆ ಇಲ್ಲವೆಂದು ನನ್ನ ಅಭಿಪ್ರಾಯ. ಇವೊತ್ತು ಸಂಸ್ಥಾ ಕಾಂಗ್ರೆಸ್ ಆಗಲಿ, ಸೋಷಲಿಸ್ಟ್ ಪಕ್ಷವಾಗಲಿ, ಕಮ್ಯೂನಿಸ್ಟ್ ಪಕ್ಷವಾಗಲಿ ಅಥವಾ ನಾವೇ ಆಗಲಿ ಸಾಮಾನ್ಯವಾಗಿ ಎಲ್ಲರೂ ವೇರೆ ವೇರೆ ವಿಶದಿಂದ ಬಡವನ ಬಗ್ಗೆ ಮಾತನಾಡಿದ್ದಾರೆ. ಆದರೆ ಈ ಬಡವನ ಬಗ್ಗೆ ನಮ್ಮ ಶ್ರೀಮಾನ್ ಪಾಟೀಲರು ಮಾತನಾಡಿದ್ದನ್ನು ನೋಡಿದರೆ ಬಡ ರೈತರ ಬಗ್ಗೆ ಎಷ್ಟು ಕಳಕಳಿಯಿಂದ ಮಾತನಾಡಿದ್ದಾರೆ ಎಂದು ನನಗೆ ಒಂದು ಕಡೆ ಸಮಾಧಾನ ಆದರೂ ಕೂಡ ಕಡೆಗೆ ಮಸೂದೆಯನ್ನು ವಿರೋಧ ಮಾಡುವ ವಿಚಾರ ನೋಡಿದರೆ "ಏತಕ್ಕೆ ಹೀಗೆ ಆಗುತ್ತದೆ ಎಂದು ನನಗಂತು ಅರ್ಥವಾಗುವುದಿಲ್ಲ. ಇವೊತ್ತು ನಾವು ಹೊಸದಾಗಿ ಮಸೂದೆ ತಯಾರು ಮಾಡುತ್ತಾ ಇಲ್ಲ. ಈಗ ಇದ್ದ ಶಾಸನಕ್ಕೆ ತಿದ್ದುಪಡಿಯನ್ನು ಮಾಡುತ್ತಿದ್ದೇವೆ ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಈ ಮಸೂದೆ ಸಮಂಜಸವಾದ ಕಾರ್ಯಾಚರಣೆಯಲ್ಲಿ ನಮ್ಮ ಪಕ್ಷ ಒಪ್ಪಿಕಾರ್ಯಾಚರಣೆಯಲ್ಲಿ ಇದು ಒಂದು. ನಾವು ನೀವು ತಿಳಿದುಕೊಳ್ಳಬಹುದು. ಉಳುವವನಿಗೆ ನಾವು ಭೂಮಿಯನ್ನು ಸ್ಥಿರಪಡಿಸುತ್ತೇವೆ. ಎರಡನೆಯದು ಭೂಮಿ ವಾಲ್ಕಿನ ಹಕ್ಕನ್ನು ನಾವು ದೇಶದಲ್ಲಿ ಆಯಾ ರಾಜ್ಯದಲ್ಲಿ ಇರತಕ್ಕ ವ್ಯವಸಾಯವನ್ನು ಸರಿಯಾಗಿ ತಿಳಿದುಕೊಂಡು ಆರ್ಥಿಕ ವ್ಯವಸ್ಥೆಯ ತಳಹದಿಯಮೇಲೆ ಸ್ಥಿಮಿತಗೊಳಿಸುತ್ತೇವೆ ಎನ್ನುವುದು ಎರಡನೆಯದು. ವಿಚಿತ್ರ ಅನಿಸುತ್ತದೆ ಕೆಲವೊಂದು ಜನರು ಸರ್ಕಾರ ರೈತರ ಭೂಮಿಯನ್ನು ಕಸಿದುಕೊಂಡು ಕಿಸೆಯಲ್ಲಿ ಇಟ್ಟುಕೊಂಡು ಓಡಿ ಹೋಗುತ್ತಾರೋ ಎನ್ನುವ ಅರ್ಥದಲ್ಲಿ ಮಾತನಾಡುತ್ತಿರುತ್ತಾರೆ. ಒಂದು ಸಮಂಜಸವಾದ ಕಾರ್ಯಾಚರಣೆಯಲ್ಲಿ ನಾವು ಒಂದು ಮೂಲಭೂತ ತತ್ವವನ್ನ ಒಪ್ಪಿಕೊಂಡು ಮುಂದೆ ಹೋಗುವುದಾದರೆ ಅಂಕಿಅಂಶಗಳ ಆಧಾರದ ಮೇಲೆ ವಿರೋಧ ಅಥವಾ ಪರವಾಗಿ ಮಾತನಾಡುವುದು ಸೂಕ್ತ. ಸುಮ್ಮನೆ ಜೇಜವಾಬ್ದಾರಿ ಮತ್ತು ಭಾವನಾ ಪರವಾಗಿ ಯಾತಕ್ಕೆ ಮಾತನಾಡುತ್ತಾರೆ ಎಂಬುದು ಅರಿಯದು. ಇವೊತ್ತು ನಾವು ಈ ಸದನದಲ್ಲಿ, ರಾಜ್ಯದಲ್ಲಿ ಅಧಿಕಾರ ವಹಿಸಿಕೊಂಡಿದ್ದಕ್ಕೆ ಬಡವ ಮತ್ತು ರೈತರು ನಮಗೆ ಬೆಂಬಲ ಕೊಟ್ಟಿದ್ದಕ್ಕೆ ನಾವು ಅಧಿಕಾರ ವಹಿಸಿಕೊಂಡಿದ್ದೇವೆ. ಈ ಅಧಿಕಾರ ಅವರಿಗಾಗಿ ವಿನಿಯೋಗವಾಗುವುದು ನ್ಯಾಯವಾದುದು ಮತ್ತು ಅದನ್ನು ಮಾಡದೆ ಹೋದರೆ ನಮ್ಮಿಂದ ಅವ್ಯವಹಾರಗಳು ಅಥವಾ ಎಂದು ನಂಬಿಕೆ ವಿಶ್ವಾಸ ಇಟ್ಟಂತ ಜನರಿಗೆ ದ್ರೋಹ ಬಗೆದಂತಾಗುತ್ತದೆಯೆಂದು ಹೇಳದ ಇರಲಾರೆ. ಇವೊತ್ತು ಶಾಸನದಲ್ಲಿ ಇರತಕ್ಕ ವಿಷಯಗಳನ್ನು ನಾವು ನೋಡಿದರೆ ನನ್ನ ವೈಯಕ್ತಿಕ ಅಭಿಪ್ರಾಯದಲ್ಲಿ ಹೆಳಬೇಕಾದರೆ ಸಮಾಜವಾದ ಕಾರ್ಯಾಚರಣೆಯಲ್ಲಿ ಬಹಳವಾದ ಮತ್ತು ಉಗ್ರವಾದ ಕ್ರಮಗಳನ್ನು ಕೈಗೊಂಡಿದ್ದೇವೆ ಎಂದು ಈ ಒಂದು ಶಾಸನವನ್ನು ಓದಿದಾಗ ನಮಗೆ ಅರ್ಥವಾಗುತ್ತಾ ಇಲ್ಲ. ಆ ದಿಸೆಯಲ್ಲಿ ಒಂದು ಹೆಜ್ಜೆ ಇಟ್ಟಾಗ ಬಾಯಿ ಮಾತಿನಲ್ಲಿ ಸಮಾಜವಾದವನ್ನು ಒಪ್ಪಿಕೊಂಡು ಇಷ್ಟು ಗದ್ದಲ ಏತಕ್ಕೆ ಎಬ್ಬಿಸಿದ್ದಾರೆ ಎಂದು ಒಂದು ಸಾರಿ ವಿವೇಚನೆ ಮಾಡಬೇಕಾಗಿದೆ ಮತ್ತು ಬಹಳ ದುಃಖಪಡಬೇಕಾಗಿದೆ. ಈ ಒಂದು ಭೂಸುಧಾರಣೆ ಕಾನೂನು ಮೊದಲು ಇದ್ದ ಕಾನೂನೆ. ಈ ಒಂದು ತಿದ್ದುಪಡಿಯನ್ನು ಸೇರಿಸಿದಾಗ ಯಾವ ಒಂದು ಪರಿಣಾಮವಾಗುತ್ತಿದೆ ಭೂಮಿ ಮಿತಿ ಏನು ಆಗುತ್ತಾ ಇವೆ ಅದನ್ನು ತಿಳಿದುಕೊಂಡು ಅಂಕಿಸಂಖ್ಯೆಗಳ ಮೇಲೆ ನಾವು ವಿಚಾರ ಮಾಡಬೇಕು. ಇವೊತ್ತು ನಾವು ಎರಡ್ಮೂ ಕಡೆ ನೋಡಿದ್ದೇವೆ. ದಿನ ರಾತ್ರಿ, ಮಂಜಾನೆ, ಹಗಲು ಎನ್ನದೇ ಪ್ರತಿನಿಧಿಗಳು ಬರುತ್ತಾರೆ. ಭೂಸುಧಾರಣೆ ಕಾನೂನಿಂದ ರೈತ ಹಾಳಾಗುತ್ತಿದ್ದಾನೆ ಎಂದು. ಹಾಗಾದರೆ ಇದನ್ನು ಪರಿಶೀಲನೆ ಮಾಡಿದರೆ ಏತಕ್ಕೆ ಇಷ್ಟೊಂದು ಗದ್ದಲ ಎದ್ದಿದೆ ರೈತರ ಈ ಬಗ್ಗೆ ಏಕೆ ತೀವ್ರ ವಿರೋಧ ಮಾಡುತ್ತಾರೆಯೋ ನನಗಂತು ಗೊತ್ತಿಲ್ಲ. ಈ ರೀತಿ ಗದ್ದಲ ಎಬ್ಬಿಸಿ ರೈತರ ಮನೋಭಾವವನ್ನು ಮತ್ತೊಂದು ಕಡೆಗೆ ಎಳೆಸುವ ಹವ್ಯಾಸದ ಪ್ರಯತ್ನ ನಡೆಯುತ್ತಿದೆ ಎಂದು ಅರ್ಥವಾಗುತ್ತಿದೆ. ಏತಕ್ಕೆಂದರೆ 10 ಯೂನಿಟ್ಸ್‌ಗಳೊಳಗೆ ಇರತಕ್ಕ ಜನ 96 ಪರ್ಸೆಂಟ್ ಇದ್ದಾರೆ. 100 ಕ್ಕೆ 96 ಜನ 10 ಯೂನಿಟ್ಸ್ ಒಳಗೆ ಇದ್ದಾಗ ನಾವು ರೈತರ ಜಮೀನನ್ನು ಕಸಿದುಕೊಂಡು ಹೋಗುತ್ತೇವೆ ಅವರನ್ನು ಬಡವರನ್ನಾಗಿ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಇದು ಹೇಗೆ ಎಂದು

ಪ್ರಶ್ನೆ ಕೇಳಬೇಕಾಗಿದೆ. ನಾವು ಇಲ್ಲಿ ಕೂತುಕೊಂಡಂತಹ ಶಾಸನ ಸಭಾ ಸದಸ್ಯರು ತಿಳಿದುಕೊಳ್ಳಬೇಕು, ಪಕ್ಷದ ಹೊರಗೆ ಮತ್ತು ಒಳಗೆ ಬೊಮ್ಮ ಬೊಡ್ಡ ಹಿಡುವಳಿದಾರರು ರೈತರ ಹೆಸರಿನಲ್ಲಿ ಬೊಬ್ಬೆ ಎಬ್ಬಿಸಿದ್ದಾರೆ. ಸರಿಯಾದ ತಿಳುವಳಿಕೆ ಇಲ್ಲದೆ ಗೊಂದಲಕ್ಕೆ ಬೀಳುವ ಪರಿಸ್ಥಿತಿ ಇದೆ. ಸಮಾಜವಾದವನ್ನು ಒಪ್ಪಲಿ, ಒಪ್ಪದೆ ಇರಲಿ ಈ ಒಂದು ಶಾಸನದಿಂದ ಆಗುವ ಪರಿಣಾಮ ಸರಿಯಾಗಿ ತಿಳಿದುಕೊಂಡು ವಿರೋಧಮಾಡಬೇಕು. ಇವೊತ್ತು ನನ್ನ ದೃಷ್ಟಿಯಲ್ಲಿ ಭೂಸುಧಾರಣೆ ಕಾನೂನಿನಲ್ಲಿ ನಾವು ಜಮೀನನ್ನು ಹೆಚ್ಚು ಉತ್ಪಾದಕಕ್ಕಿಂತ ಜಮೀನು ಪಡೆದಂತ ರೈತನಿಗೆ ಹಕ್ಕನ್ನು ಕಾಯಂ ಮಾಡುವ ವ್ಯವಸ್ಥೆ ಹೆಚ್ಚು ದೂರ ಉಳಿದಿದೆ. ಇವೊತ್ತು ಜಮೀನು ಹಂಚುವ ವ್ಯವಸ್ಥೆ ಹೆಚ್ಚಿಗೆ ನಡೆಯುತ್ತಾ ಇಲ್ಲ. ಸ್ವಾತಂತ್ರ್ಯ ಪೂರ್ವದಲ್ಲಿ ಪಂಡಿತ ಜವಹರ್‌ಲಾಲ್ ನೆಹರೂರವರು ಮತ್ತು ಮಹಾತ್ಮಗಾಂಧಿಯವರು ಹೇಳಿದ ಮಾತುಗಳು ನಮ್ಮನ್ನು ಬಿಟ್ಟು ಹೋಗಿ 25 ವರ್ಷಗಳು ಆದರೂ ಕೂಡ ಆ ತತ್ವಗಳು ಕಾನೂನಿಕ್ಷ ಸ್ವಲ್ಪಮಟ್ಟಿಗೆ ಆದರೂ ಕಾರ್ಯಾಚರಣೆಯಲ್ಲಿ ನಡೆದಿಲ್ಲ. ಆದರೆ ಕೊನೆಯಲ್ಲಿ ನೆಹರೂರವರ ಹೆಸರನ್ನು ತೆಗೆದುಕೊಂಡು ವಿರೋಧ ಮಾಡುವ ಕೆಲಸ ಮಾತ್ರ ನಡೆಯುತ್ತಿದೆ ಎಂದು ಸ್ಪಷ್ಟವಾಗಿ ಹೇಳಬೇಕಾಗಿದೆ. ಅವತ್ತು ಗಾಂಧೀಜೀಯವರು ಹೇಳಿದ್ದಾರೆ, "ನಬ್ ಭೂಮಿ ಗೋಪಾಲಕ" ಎಂದು. ಯಾವನು ಹೊಲವನ್ನು ಉಳುತ್ತಾನೆಯೋ ಹೊಲವನ್ನು ಉತ್ತು ಬೆಳೆದು, ಜೀವನ ಮಾಡುತ್ತಿದ್ದಾನೆಯೋ ಮತ್ತು ಅದರ ಮೇಲೆ ವಿಶ್ವಾಸ ಇಟ್ಟುಕೊಂಡಿರುತ್ತಾನೆಯೋ ಅವನಿಗೆ ಜಮೀನು ಒದಗಿಸಿದ್ದರೆ ಸ್ವಲ್ಪದರಲ್ಲಿ ಅವನೇ ಜಮೀನನ್ನು ತೆಗೆದುಕೊಳ್ಳುತ್ತಾನೆ. If you don't give it, the ryot will take it. ಅದರ ಅರ್ಥ ಏನೆಂದರೆ, ಸನ್ನಿವೇಶ ಒಪ್ಪಲಿ, ಒಪ್ಪದೆ ಇರಲಿ, ಪರಿಸ್ಥಿತಿ ತಿಳಿದುಕೊಂಡು ಕೂಡ ನಮ್ಮ ಮನೋಭೂಮಿಕೆಯನ್ನು ಬದಲಾವಣೆ ಮಾಡಿಕೊಳ್ಳಬೇಕಾಗಿದೆ. ಇವತ್ತು ಭೂಮಿಯನ್ನು ರೈತರಿಗೆ ಒದಗಿಸದೇಹೋದರೆ, ಅದರ ಪರಿಣಾಮ ಏನು ಎನ್ನುವುದರ ಬಗ್ಗೆ ಗಾಂಧಿಯವರು ಎಚ್ಚರಿಕೆ ಕೊಟ್ಟಿದ್ದಾರೆ. ಸಮಾಜವಾದದ ಪೂರ್ಣ ಕಾರ್ಯಾಚರಣೆ ಈ ಭೂಸುಧಾರಣೆಯಿಂದ ಆಗುತ್ತದೆಂದು ನಾನು ಒಪ್ಪಲಾರೆ. ಆದರೆ ಆ ದಿಸೆಯಲ್ಲಿ ಒಂದು ಪರಿಣಾಮಕಾರಿಯಾದ ಹೆಜ್ಜೆಯನ್ನು ನಮ್ಮ ಸರ್ಕಾರ ಇಡುತ್ತಿದೆ ಎಂದು ಹೇಳಬೇಕಾಗಿದೆ. ಕೆಲವೊಂದು ಜನ ಈ ಸದನದಲ್ಲಿ ಭೂಸುಧಾರಣೆ ಕಾಯಿದೆಯನ್ನು ಮಂಡಿಸಿದ ನಂತರ ನಾವು ನಾಗಮಂಗಲ ಚುನಾವಣೆಗಳಲ್ಲಿ ಸೋಲನ್ನು ಒಪ್ಪಬೇಕಾಯಿತು ಎನ್ನುವ ಅಭಿಪ್ರಾಯ ಬಂತು. ಅವರು ಭವನೆಯಲ್ಲಿ ಹಾಗೆ ಇರಬಹುದು. ದೇಶದಲ್ಲಿ 1971 ಹಾಗೂ 72ರಲ್ಲಿ ಚುನಾವಣೆ ನಡೆದ ವಿಚಾರವನ್ನು ಮನಸ್ಸಿನಲ್ಲಿಟ್ಟುಕೊಂಡರೆ ನಮಗೆ ಸ್ವಲ್ಪ ಅಡಚಣೆ ಆದರೂ ಕೂಡ, ಈ ಭೂಸುಧಾರಣೆ ಬೇಡಿಕೆಯನ್ನು ಈ ಒಳಗಾಗಿ ಜಾರಿಗೆ ತರುವಿದ್ದರೆ ಆ ಚುನಾವಣೆಯಲ್ಲಿ ಪರಿಣಾಮ ನೆಟ್ಟಗೆ ಆಗಬಹುದಾಗಿತ್ತು. ಇವತ್ತು ಗೊಂದಲ ಪರಿಸ್ಥಿತಿ ನಿರ್ಮಾಣವಾಗಿದೆ. ರೈತರ ಜಮೀನನ್ನು ಕಸಿದುಕೊಂಡು ಎಲ್ಲಾ ರೈತರನ್ನು ಓಡಿಸಿಬಿಡುತ್ತಾರೆ ಎನ್ನುವ ಭೀತಿ ಮತ್ತು ಭಾವನೆ ಭೂಮಾಲಿಕರು ಹುಟ್ಟಿಸಿದ್ದಾರೆ. ಆ ಭೀತಿಗೆ ಒಳಗಾಗುವ ಅವಶ್ಯಕತೆ ಇಲ್ಲ. ನಾವು ಭೂಮಿಯನ್ನು ಹಂಚುವುದಾರೆ ಕೇವಲ ಸಾಲ್ಕು ಪರ್ಸೆಂಟ್ ಜನರಲ್ಲಿರತಕ್ಕ ಭೂಮಿಯನ್ನು ಹಂಚುವುದಕ್ಕೆ ಸಾಧ್ಯವಿದೆಯೇ ಹೊರತು ಭೂಸುಧಾರಣೆ ಕಾಯಿದೆಯಲ್ಲಿ ಹೆಚ್ಚಿನದನ್ನು ಹಂಚುವುದಕ್ಕೆ ಸಾಧ್ಯವಿಲ್ಲ, ಇವತ್ತು ನಾವು ಅದಕ್ಕೆ ಅಂಕಿ ಸಂಖ್ಯೆ ಕಡೆ ಹೋದಾಗ ಐದು ಎಕರೆ ಒಳಗೆ ಇರತಕ್ಕ ಜನ 47% ಇದ್ದಾರೆ. ನಮ್ಮ ರಾಜ್ಯದಲ್ಲಿ ಸುಮಾರು 38 ಲಕ್ಷ ಹಿಡುವಳಿದಾರರು ಇದ್ದಾರೆ. 38 ಲಕ್ಷ ಜನರ ಹೆಸರಿನಲ್ಲಿ ಖಾತೆ ಇದೆ. ಅವರ ಒಂದು ಎಕರೆ, ಎರಡು ಎಕರೆ, ಹತ್ತು ಎಕರೆ ಸಾಗುವಳಿ ಮಾಡುತ್ತಿದ್ದಾರೆ. 1955-56ರಲ್ಲಿ ನಮ್ಮ ರಾಜ್ಯದಲ್ಲಿ ಸುಮಾರು 25 ಲಕ್ಷ ಹಿಡುವಳಿದಾರರು ಇದ್ದರು. ಕೇವಲ 10 ವರ್ಷ ಅವಧಿಯಲ್ಲಿ 38ಲಕ್ಷ ಜನರು ಹಿಡುವಳಿದಾರರಾಗಿದ್ದಾರೆ. ಅದಕ್ಕೆ ಕಾರಣ ಏನು ಎಂದರೆ, ನಮ್ಮ ದೇಶದಲ್ಲಿ 1939ನೇ ಇಸವಿಯಿಂದ (ಮುಂಬೈ ಪ್ರದೇಶದಲ್ಲಿ) ಈ ಭೂಸುಧಾರಣೆಯ ಒಂದು ವಿಚಾರ ಸರ್ಕಾರದಲ್ಲಿ ಬಂತು. ಅವತ್ತಿನಿಂದ ಇಲ್ಲಿಯವರೆಗೂ ನಾವು ಏನು ಮಾಡಿದ್ದೀವೆ ಎಂದರೆ ಭೂಸುಧಾರಣ ಕಾಯಿದೆ ಬರುತ್ತಾ ಇದೆ ಎಂದು ಹೇಳಿ ದೊಡ್ಡ ದೊಡ್ಡ ಹಿಡುವಳಿದಾರರು ಸಣ್ಣ ಸಣ್ಣ ಹಿಡುವಳಿದಾರರಾಗಿ ಪರಿವರ್ತಿಸಿ ಈ ಕಾಯಿದೆಯ ಕಕ್ಷೆಯಲ್ಲಿ ಬರುವ ರೀತಿಯಲ್ಲಿ ವ್ಯವಸ್ಥೆ ಮಾಡಿದ್ದೀವೆ. ಎಂದು ಹೇಳಬಹುದು. 25 ಲಕ್ಷ ಜನ ಹಿಡುವಳಿದಾರರು 38ಲಕ್ಷಕ್ಕೆ ಬರಬೇಕಾದರೆ ಈ ಕಾರಣದಿಂದಲೇ ಈ 38ಲಕ್ಷ ಹಿಡುವಳಿದಾರರಲ್ಲಿ 190ಕ್ಕೆ 4 ಜನ ಐದು ಎಕರೆಯೊಳಗೆ ಇದ್ದಾರೆ. ಸುಮಾರು 21-22ಪರ್ಸೆಂಟ್ 10 ಎಕರೆಯೊಳಗೆ ಇದ್ದಾರೆ. ಹತ್ತು ಎಕರೆಯಿಂದ ಹೆಚ್ಚು ಇರುವವರು ಎರಡು ಪರ್ಸೆಂಟ್ ಇದ್ದಾರೆ. ಇಂಥ ಒಂದು ಪರಿಸ್ಥಿತಿಯಲ್ಲಿ ರೈತರ ಹೆಸರನ್ನು ತೆಗೆದುಕೊಂಡು ಭೂಮಾಲೀಕರು ಬೊಬೆ ಹಾಕುತ್ತಾರೆ ಇದು "ಏನು"? ಸಮಾಜವಾದದ ಕಾರ್ಯ ಆಚರಣೆಯಾಗಬೇಕಾದರೆ, ನಮ್ಮ ದೇಶ ಸಮೃದ್ಧಿ

(ಶ್ರೀ ಪಿ. ಸಿ. ಶೆಟ್ಟರ್)

ಆಗಬೇಕಾದರೆ, ರವೀಂದ್ರನಾಥ ಠಾಗೂರ್‌ರವರು 1930ರಲ್ಲಿ ಏನು ಹೇಳಿದ್ದಾರೆ ಎಂದರೆ, "The country will prosper only when the vulgour concpet of wealth disappears." ನಮ್ಮ ದೇಶ ಮುಂದೆ ಬರಬೇಕಾದರೆ, ನಮ್ಮದೇಶದಲ್ಲಿ ಇರತಕ್ಕ ಆಸ್ತಿಮೇಲಿನ ಹಲಕಾ ಭಾವನೆ ಏನು ಇದೆ, ಅದು ಮಾಯ ಆಗದ ಹೊರತು ಈ ದೇಶಕ್ಕೆ ಭವಿಷ್ಯತ್ತು ಇಲ್ಲ; ಒಂದು ರೀತಿಯಲ್ಲಿ ನಮ್ಮವರೇ ಆದ ರವೀಂದ್ರನಾಥ ಠಾಗೂರ್ ಅವರು ಹೇಳಿರುವುದ ನಿಜ. ನಾವು ಒಂದು ಗ್ರಹಿಕೆಯಲ್ಲಿ ಮಾತನಾಡುತ್ತಿದ್ದೇವೆ. ಏನು ಎಂದರೆ, ಜಮೀನು ಮಾಲಕತ್ವ ನನ್ನದು, ಆ ಜಮೀನನ್ನು ಇಟ್ಟುಕೊಳ್ಳುವ ಅಧಿಕಾರ ನನ್ನದು ಬಿಟ್ಟು ಬೇರೆಯವರದ್ದು ಅಲ್ಲ. ಎಂದು. ಈ ರೀತಿ ನಾವು ಮಾತನಾಡುತ್ತಿದ್ದೇವೆಯೇ ಹೊರತು ಅದನ್ನು ಯಾವರೀತಿ ಬದಲಾಯಿಸಿ ಕೊಂಡು ಬರಬೇಕು ಎಂದು ಮಾತನಾಡುತ್ತಾ ಇಲ್ಲ. ಆದಕ್ಕೆ ನಾನು ವಿನಂತಿಮಾಡಿಕೊಳ್ಳುವುದು ಏನೆಂದರೆ ಇವತ್ತು ಭೂಸುಧಾರಣೆಗೆ ಕಾನೂನಿಗೆ ತಂದಂಥ ತಿದ್ದುಪಡಿಯಲ್ಲಿರುವ ಅಂಶಗಳನ್ನು ನೋಡಿದರೆ, ಇವತ್ತು ಈ ತಿದ್ದುಪಡಿಗೆ ವಿರುದ್ಧವಾಗಿ ಮಾತನಾಡುವಂಥ ಜನಕ್ಕೆ ನಾನು ಒಂದು ಪ್ರಶ್ನೆಯನ್ನು ಕೇಳುತ್ತೇನೆ. ಯಾವ ವಾದಕ್ಕೂ ಹೋಗುವುದು ಬೇಡ. ಇವರೇ ಪಾಸ್ ಮಾಡಿದಂಥ ಭೂಸುಧಾರಣೆ ಕಾನೂನಿಗೆ ಈ ತಿದ್ದುಪಡಿ ತರಲ್ಪಟ್ಟಿದೆ. 15 ಎಕರೆ ಆಗಬೇಕೋ, 10 ಎಕರೆ ಆಗಬೇಕೋ 1 ಎಕರೆ ಆಗಬೇಕೋ ಈ ವಿಷಯದಲ್ಲಿ ಮಾತ್ರ ನಮ್ಮ ನಡುವೆ ಒಂದು ಭಿನ್ನಾಭಿಪ್ರಾಯ ಇರಬಹುದು. ಪ್ರಗತಿಪರ ಶಾಸನವನ್ನು ಅಮಲನಲ್ಲಿ ಕೊಡುವುದಕ್ಕೆ ಅಡ್ಡಿ ಇಲ್ಲ. ನನಗೆ ತಿಳಿದ ಮಟ್ಟಿಗೆ ಹೇಳಬೇಕು ಎಂದರೆ, ನನ್ನದು ಯಾವ ಭಿನ್ನಾಭಿಪ್ರಾಯವೂ ಇಲ್ಲ. ಈಗ 18 ಎಕರೆ ಇರಬೇಕೋ, 15-12-10 ಎಕರೆ ಇರಬೇಕೋ ಎನುವ ಪ್ರಶ್ನೆ ಇದೆ. ಈಗ ಇರುವ ಭೂಸುಧಾರಣಾ ಗೊಂದಲದಲ್ಲಿ, ನಾವು ಪ್ರಗತಿಪರವಾದ ಕಾನೂನನ್ನು ಜಾರಿಗೆ ಕೊಡುತ್ತೇವೆ ಎಂದು ಭಾವಿಸಿ ಕೊಟ್ಟು ಜನ ಎಂದ ಈ ಅಧಿಕಾರವನ್ನು ಪಡೆದು ಇಲ್ಲಿ ಕೂತಿದ್ದೇವೆ. ಅಂದಮೇಲೆ ಹಿಂದೆ ಇರತಕ್ಕ ಭೂಸುಧಾರಣೆಗೆ ಸ್ವಲ್ಪ ಒಂದು ಹೆಜ್ಜೆ ಮುಂದೆ ಹೋಗುವ ವಿಚಾರವನ್ನು ನಾವು ಇಟ್ಟುಕೊಳ್ಳಬೇಕಾದದು ನಮ್ಮ ಕರ್ತವ್ಯ. ಇವತ್ತು 10 ಎಕರೆ 18 ಎಕರೆ ಎಂದು ಹೇಳುತ್ತಾ ಹೋದರೆ ನನಗನ್ನಿಸುತ್ತದೆ. ಭೂಸುಧಾರಣೆಗೆ ತಿದ್ದುಪಡಿ ತರುವುದಕ್ಕಿಂತ ಮೊದಲು ಇದ್ದ ಕಾನೂನನ್ನು ಹಾಗೆಯೇ ಮುಂದುವರಿಸುವುದು ಒಳಿತು ಎಂದು. ಹತ್ತು ಎಕರೆಗಿಂತಲೂ ಹೆಚ್ಚು ಮಾಡಿದರಾದರೆ, ನಾವು 10 ಕ್ಕೆ 100 ಮಂದಿಗೂ ರಕ್ಷಣೆ ಕೊಟ್ಟಹಾಗೆ ಆಯಿತು. ಇದನ್ನು ಪಾಸ್ ಮಾಡಿ "ವಿಶ್ವೇಶ್ವರಯ್ಯ ಮ್ಯೂಸಿಯಂ" ಗೆ ಒಯ್ದು ಇಂಥ ಕಾನೂನು ಆಯಿತು ಎಂದು ಹೇಳಿ ಪ್ರದರ್ಶನಕ್ಕೆ ಇಡುವುದಕ್ಕೆ ಅಲ್ಲ. ಕಾನೂನು ಮಾಡಿದ ನಂತರ ಸರಿಯಾಗಿ ಪರಿಣಾಮ ಕಾರಿಯಾಗಿ ದೇಶದ ಜನಕ್ಕೆ ಮುಟ್ಟುವ ಉದ್ದೇಶದಿಂದ ಮಾಡುವುದಾದರೆ ಹತ್ತು ಎಕರೆಗಿಂತ ಹೆಚ್ಚು ಮಾಡಿದರೆ ಅದರ ಪರಿಣಾಮ ಏನು ಎಂದು ನಾವು ಸರಿಯಾಗಿ ತಿಳಿಯಬೇಕಾಗಿದೆ ಮಾನ್ಯ ಸದಸ್ಯರಾದ ಪಾಟೀಲರು ಹೇಳಿದ ಹಾಗೆ ನನಗೆ ಜಮೀನು ಇಲ್ಲ, ಯಾವುದೂ ಇಲ್ಲ ಎಂದು ಹೇಳಿದರು ನನ್ನ ಮನೆತನಕ್ಕೆ ಜಮೀನು 119 ಎಕರೆ ಇದೆ., ಅದರಲ್ಲಿ 92 ಎಕರೆ ಗದ್ದೆ ಜಮೀನು ಇದೆ. ನಾನು ಟ್ರಾಕ್ಟರು ಇಟ್ಟು ಜಮೀನು ಸಾಗುವಳಿ ಮಾಡುತ್ತಾ ಇದ್ದೇನೆ ನಮ್ಮ ಮಧ್ಯೆಯಲ್ಲಿ ಈ ವಿಷಯದಲ್ಲಿ ಭಿನ್ನಾಭಿಪ್ರಾಯ ಬಂದಾಗ ನಾನು ಏನು ಹೇಳಿದೆ ಎಂದರೆ, ನಾವು ಜಮೀನು ಸಾಗುವಳಿ ಮಾಡುವುದಕ್ಕೆ ಎಷ್ಟು ಸಾಧ್ಯವೋ ಅದರ ಮೇಲೆ ಮಾತನಾಡಬೇಕೇ ವಿನಃ ಇಷ್ಟು ಇಟ್ಟು ಕೊಳ್ಳಬೇಕು ಎಂದು ಮಾತನಾಡುವುದು ಅವಶ್ಯಕವಲ್ಲ. ಇದನ್ನು ನನ್ನ ಅನುಭವದಿಂದ ಹೇಳುತ್ತಾ, ಇದ್ದೇನೆ. ನಮ್ಮ ವ್ಯವಸಾಯದಲ್ಲಿ ನಾವು ಮಿಸ್ ಮ್ಯಾನೇಜ್‌ಮೆಂಟ್ ಕಡೆಗೆ ಹೆಚ್ಚು ಲಕ್ಷ್ಯ ಕೊಡುತ್ತಾ ಇಲ್ಲ. ಒಂದು ಪ್ರಶ್ನೆ ಕೇಳುತ್ತಿದ್ದೇನೆ. 10 ಎಕರೆ ಅಂದರೆ ನೀರಾವರಿ ಎರಡು ಬೆಳೆ ಬೆಳೆಯುವ ಜಮೀನು ಒಂದು ಫ್ಯಾಮಿಲಿಗೆ ಇರಬೇಕು, ಫ್ಯಾಮಿಲಿ ಡೆಫೆನಿಷನ್ ಮೊದಲಾದಂತಿಲ್ಲ. ಇದನ್ನು ತಿಳಿಯ ಬೇಕು. ಗಂಡ ಹೆಂಡತಿ ಮತ್ತು ಮೂರು ಮಕ್ಕಳಿರುವ ಸಂಸಾರಕ್ಕೆ ಎರಡು ಬತ್ತದ ಪೀಕು ಬರುವ ಸುಮಾರು 10 ಎಕರೆ ಇಟ್ಟುಕೊಂಡು ಮ್ಯಾನೇಜ್ ಮಾಡಲು ಸಾಧ್ಯವೇ? ನಾನು ಈ ದಿವಸ ಬೇಸಾಯಗಾರನಾಗಿರುವುದರಿಂದ ಹೇಳುವುದು. ಎಷ್ಟೋ ಜನ ತಮ್ಮ ಹೆಸರಲ್ಲೇ ಖಾತೆ ಇಟ್ಟುಕೊಂಡು ಮೂರು ಎಕರೆ ಬೇರೆಯವರಿಗೆ ಕೊಟ್ಟು 5 ಎಕರೆ ಮಾಡಿಕೊಂಡಿದ್ದಾರೆ. ಕೇವಲ ಸೀಲಿಂಗ್ ಎಂಬ ದೃಷ್ಟಿಯಿಂದ ನೋಡಬಾರದು. ಫ್ಯಾಮಿಲಿ ಎನ್ನುವುದರ ಜೊತೆಗೆ ಸೀಲಿಂಗ್ ಎಂಬುದನ್ನೂ ಇಟ್ಟುಕೊಂಡು ಓದಬೇಕು. ಹಾಗೆ ಮಾಡಿದಾಗ 18 ಎಕರೆ ಸೀಲಿಂಗ್ ಇಟ್ಟರೂ ಫ್ಯಾಮಿಲಿ ವ್ಯಾಖ್ಯೆ ನೋಡಿದ್ದಾಗ ಇನ್ನೂ ಕಡಮೆಯಾಗುವುದು ಎಂಬುದು ನನ್ನ ಅಭಿಪ್ರಾಯ. ನುಮ್ಮನೆ ಇಲ್ಲ ಕುಳಿತು ಮಾತನಾಡುವುದರಿಂದ ಸೀಲಿಂಗ್ ಬಹಳ ಕಡಮೆಯಾಗಿ ನಮ್ಮನ್ನು ಎಲ್ಲಗೋ ಒಯ್ಯುತ್ತಿದ್ದಾರೆ ಎಂದು ಹೇಳಬಾರದು. ಫ್ಯಾಮಿಲಿ ವ್ಯಾಖ್ಯೆ ಪರಿಗಣಿಸುವುದಾದರೆ

ಒಂದು ಸಂಸಾರದಲ್ಲಿ ಗಂಡ—ಹೆಂಡತಿ ಮತ್ತು 3 ಮಕ್ಕಳು ಅಪ್ರಾಪ್ತವಯಸ್ಕರಿದ್ದರೆ ಅವರಿಗೆ 10 ಯೂನಿಟ್ ದೊರೆಯುವುದು. ಇನ್ನೊಬ್ಬರು ವಯಸ್ಕರಾದಾಗ ಹೆಚ್ಚಾಗಿದ್ದರೆ ಮತ್ತೆ 10 ಯೂನಿಟ್ ಪಡೆಯುವರು. ಈ ಎಲ್ಲಾ ವಿಷಯಗಳನ್ನೂ ನೋಡಿದರೆ ಅಷ್ಟೇ ಸಮಾಜವಾದಿಗಳು ಇದರ ಬಗ್ಗೆ ವ್ಯಥೆ ಪಡುವರು. ಸ್ವಲ್ಪ ಆಸ್ತಿ ಇದ್ದವರು ಎಂದು ಹೇಳುವವರು ಈ ಕಾನೂನಿಗೆ ವಿರೋಧ ಮಾಡುವುದು ಸರಿಯಲ್ಲ.

3.30 P.M

ಇನ್ನು ಒಟ್ಟಿನಲ್ಲಿ ಹೇಳಿದಂತೆ ಈ ಕಾನೂನು ಸೆಲೆಕ್ಟ್ ಕಮಿಟಿಗೆ ಹೋಗುವುದೆಂದು ತಿಳಿದು ಬರುವುದು, ನನಗೆ ಆಷ್ಟು ಗೊತ್ತಿಲ್ಲ. ಹೋದರೂ ಹೋಗಬಹುದು. ಆದುದರಿಂದ ನಾನು ಹೆಚ್ಚು ಹೇಳಲು ಇಷ್ಟ ಪಡುವುದಿಲ್ಲ, ತಂದಿರುವ ಮಸೂದೆಯಲ್ಲಿ ಯಾವುಯಾವ ಬದಲಾವಣೆ ಆಗಬೇಕು, ಯಾವಯಾವ ಸೂಚನೆ ಅಳವಡಿಸಬೇಕು ಎಂಬುದರ ಬಗ್ಗೆ ತಪಶೀಲು ಈಗಾಗಲೆ ಮಂತ್ರಿಗಳಿಗೆ ಕೊಟ್ಟಿದ್ದೇನೆ. ಮೊದಲಿದ್ದ ಭೂಸುಧಾರಣೆ ಕಾನೂನು ಮತ್ತು ಈಗ ತಂದಿರುವ ತಿದ್ದುಪಡಿ ಮಸೂದೆ ಪೂರ್ಣವಾಗಿ ಓದಿ ನಾವು ಚುನಾವಣೆಯಲ್ಲಿ ಹೇಳಿದ ತತ್ವದ ಆಧಾರದಮೇಲೆ ಏನಾಗಬೇಕು ಎಂಬ ವಿವರವನ್ನು ಬರೆದು ಮಂತ್ರಿಗಳಿಗೆ ಕೊಟ್ಟಿದ್ದೇನೆ: ಅದರ ಬಗ್ಗೆ ಹೆಚ್ಚು ಚರ್ಚೆ ಮಾಡಬೇಕಾಗಿಲ್ಲ, ಏಕಂದರೆ ಸೆಲೆಕ್ಟ್ ಕಮಿಟಿಯಲ್ಲಿ ಪರಿಶೀಲನೆ ನಡೆಯಬಹುದು.

ಇನ್ನು ಮುಖ್ಯವಾಗಿ ಹೇಳುವುದಾದರೆ ನನಗೆ ತಿಳಿದಮಟ್ಟಿಗೆ ಸೀಲಿಂಗ್ ಇದುವರಿಗೆ ಮನೆಯವರಿಗೆ ಆಸ್ತಿ ಹೆಚ್ಚಾಗಿದ್ದರೆ ಎಷ್ಟು ಜಮೀನಿರಬೇಕು ಎಂಬ ವಿಷಯದಲ್ಲಿ ತಳಿಬೇಕು. 10 ಎಕರೆ ಅಥವಾ 10 ಯೂನಿಟ್ ಗಿಂತ ಹೆಚ್ಚು ಪಡೆಯಲು ಸಾಧ್ಯವಿಲ್ಲ. ಈಗಲೇ ಕೆಲ ಜನರ ಒತ್ತಡವಿದೆ. ಪ್ರಜಾತಂತ್ರ ಒಪ್ಪಿಕೊಂಡಾಗ ದೇಶದಲ್ಲಿ ಬಹಳ ಬಡವರಿರುವಾಗ ಬಡವರಿಗೆ ಅನುಕೂಲಮಾಡುವಾಗ ಶ್ರೀಮಂತರಿಗೆ ತೊಂದರೆಯಾಗಲೇಬೇಕು. ಈಗ ತಂದಿರುವ ಕಾನೂನನ್ನು ಜನತೆ ಒಪ್ಪದಿದ್ದರೆ ಇದಕ್ಕಿಂತ ಕಡಮೆ ಸೀಲಿಂಗ್ ಮಾಡುವ ಕಾಲ ಬರಬಹುದು. ಹೆಚ್ಚು ಮಾಡುವ ಕಾಲ ಬರುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ನಾನು ವಿನಂತಿ ಮಾಡುವುದು ಈ ಸೀಲಿಂಗ್ ಅತ್ಯವಶ್ಯಕವಾದ ಇಡಬಾರದು. ಫ್ಯಾಮಿಲಿ ವ್ಯಾಖ್ಯೆ ನೋಡಿದರೆ ಬಹಳ ಸಿಕ್ಕುತ್ತದೆ ಎಂದು ಹೇಳಬಹುದು. ಸೀಲಿಂಗ್ ಏರಬೇಕೆಂದರೆ ಭೂಮಿತಿ ಹೆಚ್ಚು ಮಾಡಬೇಕೆಂಬ ವಾದ ಎರಡುಮೂರು ಕಾರಣದಿಂದ ಬರುತ್ತಿದೆ, ಏಕೆಂದರೆ ಮಳೆ ಸರಿಯಾಗಿ ಬರುತ್ತಿಲ್ಲ ಎಂಬುದು ಒಂದು ಕಾರಣ. ನೂರು ಎಕರೆ ಇದ್ದರೂ ಮಳೆ ಹೋದರೆ ಹೆಚ್ಚು ಕ್ಷೇತ್ರವಿದ್ದರೂ ನಷ್ಟ ಹೆಚ್ಚುತ್ತದೆ ಹೊರತು ಲಾಭ ಬರುವ ಪ್ರಶ್ನೆಯೇ ಇಲ್ಲ. ನವಗೆ ಟ್ರಾಕ್ಟರಿನ ಅನುಕೂಲವಿಲ್ಲ, ಅಭಾವ ಪರಿಸ್ಥಿತಿ ಇದೆ, ಅದಕ್ಕಾಗಿ ಹೆಚ್ಚು ಕ್ಷೇತ್ರ ಕೊಡಿ ಎಂದು ಹೇಳುತ್ತಿದ್ದಾರೆ. ಎರಡನೆಯದಾಗಿ ಬಡವರಿಗೆ ಜಮೀನು ಹಂಚಬಾರದು; ಸರಿಯಾಗಿ ಬೆಳೆ ತೆಗೆಯುವುದಿಲ್ಲ ಎಂದು ಹೇಳುತ್ತಿದ್ದಾರೆ. ಅಂದರೆ ಉತ್ಪತ್ತಿ ಕಡಮೆಯಾಗುವ ಪಂಥವಪಿದೆ. ಇದರ ಸಲುವಾಗಿ ಸೀಲಿಂಗ್ ಏತ್ತರಿಸಿ, ಭೂಮಿಯಿಲ್ಲದಿರುವವರಿಗೆ ಹಂಚಬಾರದು ಎಂದು ಹೇಳುತ್ತಿದ್ದಾರೆ. ಇದು ಬಹಳ ಗೂಢವಾದ ಮಾತು. ಹೇಗೆ ಅರ್ಥ ಮಾಡುತ್ತಿದ್ದಾರೆಂದರೆ ಬಡತನ ನೀಗಿಸಲು ಸಾಧ್ಯವಿಲ್ಲ, ಏಕೆಂದರೆ ಜನರು ಬಡವರು ಎಂದು ಹೇಳಿದಹಾಗೆ, ಆಗಿದೆ. ಇಂದು ಯಾವುದಾದರೂ ಒಂದು ವಿಷಯವನ್ನು ಇದಕ್ಕೆ "ಟ್ಯಾಗ್" ಮಾಡಿ ಇವನ್ನು "ಸ್ಯಾಬೊಟೈಸ್" ಮಾಡಬಾರದು: ಭೂಮಿಯಲ್ಲಿ ಬರುವ ಉತ್ಪತ್ತಿಯನ್ನು ಸಮಾಜೀಕರಣ ಮಾಡುವುದಾದರೆ ಒಳ್ಳೆಯದಾದೀತು, ಇಲ್ಲದಿದ್ದರೆ ಇಲ್ಲ. ಇಂದು ನೂರು ಎಕರೆ ಅಭಾವ ಪ್ರದೇಶದಲ್ಲಿ ನಿಗದಿಮಾಡಿದರೆ ಅಲ್ಲಯವರ ಆರ್ಥಿಕ ಪರಿಸ್ಥಿತಿ ಬೆಳೆಯುತ್ತದೆಯೇ? ಇದು ಡೈರೆಕ್ಟ್ ರೇಷಿಯೋ (Direct ratio) ಹೀಗೆ ಮಾಡಿದರೆ ಕಷ್ಟ ಬರುತ್ತದೆ. ರೈತರಿಗೆ ಬೇಕಾದ ಬಂಡವಾಳ ಸೌಲಭ್ಯ ಕೊಡುವುದು ಬೇರೆ ವಿಷಯ ಸೀಲಿಂಗ್ ಮಾಡುವುದು ಬೇರೆ ವಿಷಯ. ಹಿಡುವಳಿ ಹೆಚ್ಚಾದಾಗ ಒಂದು ತೀರ್ಮಾನ ಯಾವ ಆಧಾರದಮೇಲೆ ಆಗುವುದೆಂದರೆ ಸಾಧ್ಯವಾದಷ್ಟು ಜಮೀನಿನಮೇಲೆ ಅವಲಂಬಿಸಿರುವ ಜನರಿಗೆ ಆ ಉದ್ಯೋಗದ ಅವಕಾಶ ಕೊಡಬೇಕು ಎಂಬ ದೃಷ್ಟಿಯಿಂದ ಪರಿಶೀಲಿಸುತ್ತೇವೆ. ಆದರೆ ಎಷ್ಟು ಹೆಚ್ಚಿಸಿದರೂ ಬಹು ಜನ ಭೂ ರೈತರನ್ನು ಅಥವ ಭೂಮಿಯನ್ನವಲಂಬಿಸಿರುವ ಕಾರ್ಮಿಕರನ್ನು ತೃಪ್ತಿಪಡಿಸಲು ಸಾಧ್ಯವಿಲ್ಲ. ಇದಕ್ಕೆ ಯಾವರೀತಿ ಭೂಮಿ ಉಪಯೋಗ ಮಾಡಬೇಕೆಂದರೆ ಇರುವ ಉತ್ಪತ್ತಿ ಹೆಚ್ಚಿಸಬೇಕು, ಅದಕ್ಕೆ ತಕ್ಷಣ ಕ್ರಮ ಕೈಕೊಳ್ಳಬೇಕು. ಅದು ಬೇರೆ. ಇಂದು ಸರಕಾರ ಸುಮ್ಮನಿರುವುದಿಲ್ಲ. ಸರಕಾರವನ್ನು ಎಚ್ಚರಿಸಬೇಕಾಗಿದೆ. ಇಂದು ನಾವೇನು ಪ್ರಗತಿಯ ಹಾದಿಯನ್ನು ಮುಟ್ಟಿಲ್ಲ; ಆ ದೆಸೆಯಲ್ಲಿ ಹೆಜ್ಜೆ ಇಟ್ಟಿದ್ದೇವೆ ಎಂದು ಹೇಳಬಹುದು. ಈ ಕಾನೂನು ಜಾರಿಗೆ ಬಂದನಂತರ ರೈತರಿಗೆ ಅಧಿಕಾರವನ್ನು ಸಂಪೂರ್ಣವಾಗಿ ಕೊಟ್ಟು ಅವನನ್ನು ಉತ್ತಮವಾದ ಬೆಳೆ ಬೆಳೆಯಲು ಸಹಾಯ ಮಾಡಬೇಕು. ಪ್ರತಿಯೊಬ್ಬ ರೈತರಿಗೂ ಜಮೀನು

(ಶ್ರೀ ಪಿ. ಸಿ. ಶಟ್ಟರ್)

ಹಂಚಿದನಂತರ ಸರಿಯಾಗಿ ಬೆಳೆಯುವಂತೆ ಅರ್ಥಿಕ ನೆರವು ನೀಡಬೇಕಾಗಿದ್ದು ಕರ್ತವ್ಯ. ಏಕೆಂದರೆ ಜಮೀನನ್ನು ಕೊಟ್ಟರೆ ಇವರು ಬೀಳು ಬಿಡುತ್ತಾರೇನೋ ಎಂದು. ಅಂಥ ಜನರಿಗೆ ಜಮೀನನ್ನು ಕೊಟ್ಟರೆ ಅದನ್ನು ಕೊಟ್ಟನಂತರ ಸರ್ಕಾರ ಸುಮ್ಮನೆ ಕೈಕಟ್ಟಿ ಕುಳಿತುಕೊಳ್ಳುವುದಿಲ್ಲ. ಹಾಗೆ ಅವರು ತಿಳಿದಿದ್ದರೆ ಅದು ಸರಿಯಲ್ಲ. ರೈತನು ತನ್ನ ಭೂಮಿಯನ್ನು ಸಾಗು ಮಾಡಿಕೊಳ್ಳುವುದಕ್ಕೆ, ಅದರಲ್ಲಿ ಒಳ್ಳೆ ಉತ್ಪನ್ನ ಬರುವಂತೆ ಮಾಡಿಕೊಳ್ಳುವುದಕ್ಕೆ ಮತ್ತು ಅದಕ್ಕೆ ಬೇಕಾಗತಕ್ಕ ನೀರಾವರಿ ಸೌಕರ್ಯ, ಪಂಪ್‌ಸೆಟ್ ಇತ್ಯಾದಿಗಳನ್ನೆಲ್ಲಾ ಸರ್ಕಾರದವರು ಒದಗಿಸುತ್ತಾರೆ. ಭೂಮಿಯಿಲ್ಲದವರಿಗೆ ಭೂಮಿಯನ್ನು ಕೊಡುತ್ತಾರೆ, ಆದರೆ ಮಳೆ ಇಲ್ಲದಿದ್ದರೇನು ಮಾಡಬೇಕು ಅತ! ಎಂದು ಕೇಳತಕ್ಕವರಿದ್ದಾರೆ. ಮಳೆ ಬರುವುದು ಬಾರದಿರುವುದು ಬೇರೆ ಪ್ರಶ್ನೆ. ಮಳೆ ಬಾರದಿದ್ದರೆ ಬೆಳೆ ಆಗುವುದಿಲ್ಲ ಎಂದು ಯಾರೂ ಕೈಕಟ್ಟಿ ಕುಳಿತುಕೊಳ್ಳುವುದಿಲ್ಲ. ಅದಕ್ಕೆಲ್ಲಾ ಯಾವ ರೀತಿಯ ಕಾರ್ಯಕ್ರಮ ಹಾಕಿಕೊಳ್ಳಬೇಕೆಂಬುದನ್ನು ಸರ್ಕಾರದವರು ತೀರ್ಮಾನ ಮಾಡಿ ಅದರಂತೆ ಕ್ರಮಗಳನ್ನು ಕೈಕೊಳ್ಳಬೇಕಾಗುತ್ತದೆ. ಆದರೆ ಈ ಸಭೆಯಲ್ಲಿ ಕೆಲವರು ಸಣ್ಣ ಹಿಡುವಳಿಗಳಿಂದ ಹೆಚ್ಚು ಉತ್ಪನ್ನ ಬರುವುದಿಲ್ಲವೆಂದು ವಾದ ಮಾಡಿದ್ದು ಸರಿಯಲ್ಲ. ನಾನು ಅದರ ಬಗ್ಗೆ ನನ್ನ ವಿಷಾದವನ್ನು ವ್ಯಕ್ತಪಡಿಸಬೇಕಾಗಿದೆ. ಇಂಥಾ ಕಾನೂನನ್ನು ದೇಶದಲ್ಲಿ ಜಾರಿಗೆ ತಂದರೆ ಜನರು ಭೂಮಿಯ ಸಾಗುವಳಿಯನ್ನೇ ಕೈಬಿಡುತ್ತಾರೆ. ಮುಂದೆ ದೇಶದಲ್ಲಿ ಜನರಿಗೆ ತಿನ್ನುವುದಕ್ಕೆ ಆಹಾರವಿಲ್ಲದಂತೆ ಆಗುತ್ತದೆಂದು ಹೇಳಿದ್ದು ಬಹಳ ವಿಷಾದಕರ. ಅವರು ಹೇಳತಕ್ಕದ್ದು ನಿಜವಿದ್ದಭಾಗದಲ್ಲಿ ನಾನು ಹೇಳುತ್ತೇನೆ ಖಂಡಿತ ಅಂಥಾ ಜನರ ಕೈಲಿ ಭೂಮಿ ಇರತಕದ್ದು ಸರಿಯಲ್ಲ. ಭೂಮಿ ಯಾರದು? ವ್ಯಕ್ತಿಯ ಸ್ವತ್ತಲ್ಲ. ಅದು ದೇಶದ ಆಸ್ತಿ. ಇಂಥ ಕಾನೂನು ಬರುತ್ತದೆಂದು ಯಾರೋ ಒಬ್ಬ ತನ್ನ ಟಾಕ್ಟರನ್ನೂ ಮತ್ತು ಪಂಪ್‌ಸೆಟ್ಟನ್ನೂ ಮಾರಾಟ ಮಾಡಿದ ಎಂದು ಹೇಳಿದರು. ನಾನು ಹೇಳುತ್ತೇನೆ ಅದು ಖಂಡಿತ ಒಂದು ಅಪರಾಧ ಹಾಗೆ ಮಾಡಿದ್ದು. ಅಂಥವರ ಬಗ್ಗೆ ಸರ್ಕಾರದವರು ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಹೇಳುತ್ತೇನೆ. ನಿಜವಾಗಿಯೂ ಅಂಥವರ ಕೈಲಿ ಭೂಮಿ ಇರಬಾರದು ಅಂಥ ದೃಷ್ಟ ಶಕ್ತಿಗಳನ್ನು ಶಿಕ್ಷೆಮಾಡಬೇಕು. ಯಾವ ಕಾರಣದಿಂದಲೂ ಸರ್ಕಾರದವರು ಈ ಭೂಸುಧಾರಣೆಯನ್ನು ಹಿಂದಕ್ಕೆ ತೆಗೆದುಕೊಳ್ಳಬಾರದೆಂದು ಒತ್ತಾಯ ಮಾಡುತ್ತೇನೆ. ತನ್ನ ಸ್ವಂತ ಅನುಭವದ ಕೆಲವು ಮಾತುಗಳನ್ನು ಇಲ್ಲೀಗ ಹೇಳಬೇಕಾಗಿದೆ ಕೆಲವರು ಏರಿಯಾ ಆಫ್ ಆಪರೇಷನ್ ಹೆಚ್ಚಾದಷ್ಟೂ ಉತ್ಪತ್ತಿ ಹೆಚ್ಚಾಗಿ ಬರುತ್ತದೆಂದೂ ಅದು ಕಡಿಮೆಯಾದಷ್ಟೂ ಉತ್ಪತ್ತಿ ಕಡಿಮೆ ಬರುತ್ತದೆಂದೂ ಹೇಳುತ್ತಿದ್ದಾರೆ. ಇದು ಸರಿಯಾದುದಲ್ಲ. ನನಗೆ 72 ಎಕರೆ ಗದ್ದೆ ಜಮೀನಿದೆ. ನನ್ನ ಹತ್ತಿರ ಯಾವಾಗಲೂ ಬಂತಕ್ಕ ನನ್ನ ಮಿತ್ರನೊಬ್ಬನಿಗೆ 9 ಎಕರೆ ಗದ್ದೆ ಜಮೀನಿದೆ. ಆತನು ಆ 9 ಎಕರೆಗಳಲ್ಲಿ ತನ್ನ ಎರ್ಲಾ ಸಾಮರ್ಥ್ಯವನ್ನೂ ಕೂಲಂಕಷವಾಗಿ ಅದಕ್ಕೆ ಬಳಸುತ್ತಿರುವುದರಿಂದ ನನ್ನ 36 ಎಕರೆಗಳಲ್ಲಿ ಏನು ಉತ್ಪತ್ತಿಯನ್ನು ತೆಗೆದುಕೊಳ್ಳುವೆನೋ ಆ ಉತ್ಪತ್ತಿ ಆತನಿಗೆ ಅವನ 9 ಎಕರೆಗಳಲ್ಲೇ ಬರುತ್ತದೆ. ಆದುದರಿಂದ ನಾವು ನಮ್ಮಲ್ಲಿ ಇರತಕ್ಕ ಸಾಮರ್ಥ್ಯಕ್ಕೆ ತಕ್ಕಷ್ಟು ಭೂಮಿಯನ್ನು ಮಾತ್ರ ಇಟ್ಟುಕೊಳ್ಳಬೇಕೆಂದು ನಾನು ಹೇಳುತ್ತೇನೆ. ಆದರೆ ನಾನೀಗ ಇಲ್ಲಿ ಮಾತನಾಡಬೇಕಾಗಿರುವುದು ನನ್ನ ವೈಯಕ್ತಿಕ ಆಸ್ತಿಯನ್ನು ಹೇಗೆ ನಾನು ರಕ್ಷಣೆ ಮಾಡಿಕೊಳ್ಳಬೇಕು ಅನ್ನುವುದನಲ್ಲ. ನಾವು ಜುನಾಗಢಕ್ಕೆ ಮುನ್ನ ಜನರಿಗೆ ಏನೆಂದು ಆಶ್ವಾಸನವನ್ನು ಕೊಟ್ಟು ಅವರಿದ ಮಕ್ಕಳನ್ನು ಪಡೆದು ಬಂದಿದ್ದೆವೋ ಅದನ್ನು ನಾವೀಗ ಉಳಿಸಿಕೊಳ್ಳಬೇಕಾಗಿದೆ. ನಾನೀ ದಿವಸ ಸಭಾಧ್ಯಕ್ಷರ ಮುಂದೆ ನಿಂತು ಮಾತನಾಡತಕ್ಕ ಈ ಶಕ್ತಿಯನ್ನು ನನಗೆ ಕೊಟ್ಟವರತಕ್ಕವರು ಆ ಜನರು. ಹಾಗೆ ಆ ಸಾರ್ವಜನಿಕರು ಕೊಟ್ಟವರತಕ್ಕ ಅಧಿಕಾರವನ್ನು ನಾವು ನನ್ನ ವೈಯಕ್ತಿಕ ಆಸ್ತಿಯನ್ನು ರಕ್ಷಣೆ ಮಾಡಿಕೊಳ್ಳುವುದಕ್ಕೆ ಇಲ್ಲವೇ ಉಳಿಸಿಕೊಳ್ಳುವುದಕ್ಕೆ ನಾವುಗಳು ಯಾರೂ ಇಲ್ಲಿಗೆ ಬಂದಿಲ್ಲ. ಆಗಲೇ ಮಾತನಾಡಿದ ಕೆಲವು ಮಾನ್ಯ ಸದಸ್ಯರುಗಳು ತಮ್ಮ ವಾದವನ್ನು ಅಂಕಿ ಸಂಖ್ಯೆಗಳ ಆಧಾರದ ಮೇಲೆ ಮಾತನಾಡದೆ ಏನೋ ತಮಗೆ ತೋಚಿದಂತೆ ಮಾತನಾಡಿದ್ದು ನೋಡಿ ನನಗೆ ಖೇದವೆನಿಸಿದೆ. ಅಲ್ಲದೆ ಇನ್ನೂ ಒಂದು ವಿಚಾರ ಎನೆಂದರೆ ನಾವು ಇಲ್ಲಿಂದ ಎದ್ದು ಹೋದ ನಂತರ 'ಓಹೋ ಇವರೆಲ್ಲಾ ಸೋಷ್ಯಲಿಸ್ಟಿಕ್ ಜನರತೆ' ಎಂದು ಟೀಕಾ ಮಾಡುತ್ತಾರೆ, ಆದರೆ ಹೀಗೆಲ್ಲಾ ಇವರು ಸರ್ಕಾರ ಮಾಡಿರತಕ್ಕ ತತ್ವಗಳ ಮೇಲೆ ಟೀಕಾಟಿಪ್ಪಣಿಗಳನ್ನು ಮಾಡತಕ್ಕದ್ದು ಬಹಳ ಕಷ್ಟದ್ದು ಎಂದು ನನಗೆ ಅನಿಸುತ್ತಿದೆ. ದೇಶದಲ್ಲಿ ಇದೇ ನಮೂನೆಯ ವಾದಗಳು ಮುಂದುವರಿದಲ್ಲಿ ಇಲ್ಲಿ ಕ್ರಾಂತಿ ತೆಪ್ಪಿದ್ದಲ್ಲ. ನಾವು ಇದೇ ರೀತಿ ವಾದ ಮಾಡುತ್ತಾ ಹೊಂಟರೆ ಇಲ್ಲಿ ಸಮಾಜವಾದ ಜಾರಿಗೆ ಬರುವುದಾದರೂ ಎಂದು? ಈ ದಿವಸ ಈ ಕಾಂಗ್ರೆಸ್ (ಒ) ನವರು ಇಷ್ಟು ವೀರಾವೇಶದಿಂದ ವಾದ ಮಾಡತಕ್ಕವರು ಏತಕ್ಕೆ ಹಿಂದೆ ಈ ಭೂಸುಧಾರಣಾ ಕಾಯಿದೆಯನ್ನು ಇವರು ಸಭೆಯ ಮುಂದಿಟ್ಟಿದ್ದರು? ಇವರ ತಂದಿದ್ದ

ಕಾಯಿದೆಯಲ್ಲಿ ಹಿಂದಕ್ಕೆ ನುಸುಳಿಕೊಂಡು ಹೋಗುವುದಕ್ಕೆ ಅವಕಾಶವಿದ್ದಂತೆ ಈಗಿನ ಮನೂದೆಯಲ್ಲಿ ಅವಕಾಶ ಇರುವುದಿಲ್ಲ ಎಂದು ಇವರು ಹೀಗೆ ಮಾಡಲಿಕ್ಕೆ ಏನಾದರೂ ಹತ್ತಿದ್ದಾರೆಯೇ? 1965 ರಲ್ಲಿ ಇವರು ತಂದಿದ್ದ ಆ ಭೂಸುಧಾರಣಾ ಶಾಸನದ ಬಗ್ಗೆ ಇವರಿಗೇನಾದರೂ ಒಂದು ''ಸಿನ್‌ಸಿಗಿಟ್'' ಅಥವಾ ವಿಶ್ವಾಸ ಇತ್ತೇ! ನನ್ನನ್ನು ಕೇಳಿದರೆ ಇವರಿಗೆ ಅದು ಯಾವುದೂ ಇರಲಿಲ್ಲ ವೆಂದು ಹೇಳುತ್ತೇನೆ. ಈ ದಿವಸ ನಾವು ಈ ಕಾರ್ಯವನ್ನು ಹೊಸದಾಗಿ ಏನೂ ಮಾಡುತ್ತಿಲ್ಲ. ಭೂಸುಧಾರಣಾ ಕಾರ್ಯಾಚರಣೆ ಬಹಳ ಹಿಂದೆನೇ ಪ್ರಾರಂಭವಾಗಿತ್ತು. ಆದರೆ ಅದರಲ್ಲಿ ಕೆಲವು ಅಡೆತಡೆಗಳಿದ್ದುವು. ಅವುಗಳನ್ನು ನಿವಾರಣೆ ಮಾಡುವುದಕ್ಕೆ ನಾವೀಗ ಕೆಲವು ತಿದ್ದುಪಡಿಗಳನ್ನು ಮಾತ್ರ ತಂದಿದ್ದೇವೆ. ಅಷ್ಟಕ್ಕಾಗಿಯೇ ಈ ಮಾನ್ಯ ಸದಸ್ಯರುಗಳು ಈ ವಿಚಾರದಲ್ಲಿ ಸಾರ್ವಜನಿಕರಲ್ಲಿ ಒಂದು ಗೊಂದಲವೆನ್ನೆಬ್ಬಿಸುವುದು ಸರಿಯಾದುದಲ್ಲ ಎಂಬುದಾಗಿ ನಾನು ಅವರಲ್ಲಿ ಒಂದು ಸಲ್ಲಾವನೆಯಿಂದ ಕೇಳಿಕೊಳ್ಳುತ್ತೇನೆ.

ಹಿಂದೆ ಒಂದು ಸನ್ನಿವೇಶದಲ್ಲಿ ಆ ಶ್ರೀ ಕೆ. ಎಂ. ಮುನಿಷಿಯವರು, ಇವರಿಗೆ ಈ ಸಮಾಜವಾದದಲ್ಲಿ ನಂಬಿಗೆ ಇಲ್ಲದಿದ್ದಾಗೂ ಕೂಡ ಅವರು ಈ ಭೂಮಿಯನ್ನೆಲ್ಲಾ [ನಾವು ಒಂದಾಲ್ಲಾ ಒಂದು ದಿನ ಆ ರೈತರಿಗೆ ಬಿಟ್ಟುಕೊಡಬೇಕಾಗುತ್ತದೆ ಎಂಬುದಾಗಿ ಹೇಳಿದ್ದರು. ಹಾಗಿರುವಾಗ ಕೆಲವರು ಈ ದಿವಸ ಏನೋ ಒಂದು ವಿಚಾರವನ್ನು ಸಾರಲಿಕ್ಕೆ ಹತ್ತಿದ್ದಾರೆ. ಆದರೆ ಇದರಿಂದ ಅವರಿಗೆ ಮುಂದೆ ಅಪವಾದ ತಪ್ಪಿದ್ದಲ್ಲ.

ಇನ್ನು 16 ಕಿರೋ ಮೀಟರ ಬಗ್ಗೆ ಕೂಡ ಬಹಳ ಚರ್ಚೆ ನಡೆದಿದೆ. ಆ ಕಲಮನ್ನು ಬಿಟ್ಟು ಕೊಡಬೇಕೆಂದು ಒಂದು ವಾದವೆದ್ದಿದೆ. ಅದನ್ನು ಬಿಟ್ಟುಕೊಡಬೇಕೇ ಬೇಡವೇ ಅನ್ನುವುದು ಪ್ರತ್ಯೇಕ ವಿಚಾರ. ಬೇಸಾಯಗಾರರ ತನ್ನ ಜಮೀನಿಗೆ ನಾನು ವಾಸ ಮಾಡಕಕ್ಕ ಜಾಗ 10 ಮೈಲಿ ಒಳಗೇ ಇರಬೇಕು ಅನ್ನುವ ವಾದದಲ್ಲಿ ಒಂದು ತತ್ವ ಅಡಕವಾಗಿದೆ ಅದನ್ನು ಅನೇಕ ಮಾನ್ಯ ಸದಸ್ಯರು ತಿಳಿದೂ ತಿಳಿದೂ ವಿರೋಧ ಮಾಡುತ್ತಿರುವುದು ಸರಿ ಅಲ್ಲ ಹತ್ತು ಮೈಲಿ ಬೇಡ ಒಂದುವೇಳೆ ಮೂರು ಮೈಲಿಗಳ ದೂರದಲ್ಲಿದ್ದರೆ ರೈತನಾದವನು ಪ್ರತಿ ದಿನವೂ ಅಷ್ಟು ದೂರ ಹೋಗಿ ವ್ಯವಸಾಯ ಮಾಡಿಕೊಂಡು ಬರುವುದಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ! ಈ ವಿಚಾರದಲ್ಲಿ ಕೆಲವರು ಹೇಳಿದ್ದನ್ನು ಕೇಳಿ ನನಗೆ ಬಹಳ ಖೇದ ಆನಿಸಿದೆ. ಈ ದಿವಸ ಇದರಲ್ಲಿ ಹಾಕಿರುವಕ್ಕ 14ನೇ ಕಲಂ ಏನಿದೆ ಅದರ ಪ್ರಕಾರ ಭೂಮಾಲೀಕನಿಗೆ ಆತನ ಸ್ವಂತ ಸಾಗುವಳಿಗೆ ಭೂಮಿಯನ್ನು ರೈತನಿಂದ ಬಿಡಿಸಿಕೊಡಬೇಕೆಂದಿದೆ. ಹಿಂದೆ ಒಂದು ಕಾಲಕ್ಕೆ ಮಂಬ್ಯೆನಲ್ಲಿದ್ದ ಕೆಲವರಿಗೆ ಭೂಮಿ ಬೇಕೆಂದುದಕ್ಕೆ ಇಲ್ಲಿ ಭೂಮಿಯನ್ನು ಬಿಡಿಸಿಕೊಟ್ಟಿದ್ದಾರೆ. ಹಾಗಿರುವುದರಿಂದ ನಾವು ಈ ದಿವಸ ದೇಶದಲ್ಲಿ ಪ್ರಗತಿಪರ ಕಾನೂನುಗಳನ್ನು ಮಾಡುತ್ತಿರುವಾಗ ಅವುಗಳನ್ನು ಕೋರ್ಟುಗಳು ಯಾವರೀತಿಯ ಲ್ಲಿ ಜಾರಿಗೆ ಕೊಡುತ್ತಿವೆ ಅನ್ನುವುದರ ಕಡೆಗೂ ಸಹಾ ನಾವು ಲಕ್ಷ ಕೊಡಬೇಕಾಗಿದೆ. ಇದಕ್ಕೂ ಸ್ವೆತಾ ನಾವು ಒಂದು ಸೂಕ್ತ ನಿಯಂತ್ರಣವನ್ನು ಮಾಡಬೆ ಕಾಗಿದೆ. ಬೆಂಗಳೂರಲ್ಲಿ ಇರತಕ್ಕ ಭೂ ಮಾಲೀಕ ರೊಬ್ಬರು ತಮಗೆ ಸ್ವಂತ ಬೇಸಾಯಕ್ಕೆ ಧಾರವಾಡದಲ್ಲಿರತಕ್ಕ ಭೂಮಿ ಬೇಕೆಂದು ಬೇಡಿ ಬಿಡಿಸಿ ಕೊಂಡಿದಾರೆ. ಅವರು ಅಲ್ಲಿಗೆ ಹೋಗಿ ಬೇಸಾಯವನ್ನು ಮಾಡುವುದಕ್ಕೆ ಸಾಧ್ಯವುಂಟೇ? 16 ಕಿರೊ ಮೀಟರ್ ಡಿಸ್ಟೆನ್ಸ್ ಏತಕ್ಕೆ ಇಟ್ಟುಕೊಂಡಿದ್ದೀರೋ ಗೊತ್ತಿಲ್ಲ. ಸರ್ಕಾರ ಆ ರೀತಿಯಾಗಿಯೇ ನಿಗದಿಮಾತ್ರೋಣ ಎಂಬ ದೃಷ್ಟಿಯಿಂದ ಇರಬಹುದೆಂದು ನನಗೆ ಕಾಣುತ್ತಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಹಿಂದೆ ಬ್ರಿಟಿಷರು 6 ಸಾವಿರ ಮೈಲಿಗಳ ದೂರದವರಿಗೂ ಜಮೀನು ಇಟ್ಟುಕೊಂಡಿರಬಹುದೆಂಬ ಕಾನೂನನ್ನು ಜಾರಿಗೆ ಕೊಟ್ಟು ಆಡಳಿತ ನಡೆಸುತ್ತಿದ್ದರು. ಅದೇ ರೀತಿಯಲ್ಲಿ ಇವರೂ ಸಹ ಆಡಳಿತ ನಡೆಸಬೇಕೆಂದು ಇದ್ದಾರೆ.

ಶ್ರೀ ಪಿ. ಸಿ. ಶೆಟ್ಟರ್.—10 ಮೈಲಿಗಳ ದೂರದಲ್ಲಿರತಕ್ಕ ಬೇಸಾಯಗಾರರು ಸಾಮಾನ್ಯವಾಗಿ ಯಾರು ಅಂದರೆ, ಬೇಸಾಯದಲ್ಲಿ ನಂಬಿಕೆ ಇಲ್ಲದೇ ಇರುವ ಮನುಷ್ಯ. ಅಂತಹವರು ರೈತರ ವಿಚಾರದಲ್ಲಿ ಏನು ಬೇಕಾದರೂ ಮಾಡಿಬಿಡಬಹುದು. ರೈತರ ಬುಡವನ್ನೇ ಕಿತ್ತುಹಾಕಿಬಿಡುತ್ತಾರೆ. ಆದರೆ ಆ ರೀತಿಯಾಗಿ 16 ಕಿರೊಮೀಡರ್ ದೂರದಲ್ಲಿ ಇರತಕ್ಕ ಜನರು ಅಂದರೆ ಕೇವಲ ಐದಾರು ಜನರಷ್ಟೇ ಅಂತಹವರು ರೈತರಲ್ಲಿರತಕ್ಕ ಉತ್ಪನ್ನವನ್ನು ಪಡೆದು ಇನ್‌ಕಂಟ್ಯಾಕ್ಸಿಗೆ ಮೋಸಮಾಡುವ ದೃಷ್ಟಿಯಿಂದ ನಾವೂ ಸಹ ಒಕ್ಕಲುತನದಲ್ಲಿದ್ದೇವೆಂದು ಹೇಳಿಕೊಂಡು ಬೇಕಾದಷ್ಟು ಜಮೀನುಗಳನ್ನು ಇಟ್ಟುಕೊಂಡಿದ್ದಾರೆಯೇ ಹೊರತು ಬೇರೆ ಏನೂ ಇಲ್ಲ. ಈ ಕಾರಣದಿಂದ ನಾನು ಯಾವ ಒಂದು '' ಹೈಪೊಥೆಟಿಕ್ '' ಇಟ್ಟುಕೊಂಡು ಮಾತನಾಡುತ್ತಾ ಇಲ್ಲ. 16 ಕಿರೊ ಮೀಟರ್ ದೂರದ ಪರಿಮಿತಿ ಇಟ್ಟಿರುವುದರಿಂದ ಎಷ್ಟು ಜನರಿಗೆ ತೊಂದರೆ ಬರುತ್ತದೆಂಬುದನ್ನು ನೋಡಬೇಕು. ನಾನು ಹೇಳಿದಂಥ ವಿಷಯದಲ್ಲಿ ಸತ್ಯವಿದೆಯೋ ಇಲ್ಲವೋ ಎಂಬುದನ್ನು

(ಶ್ರೀ ಪಿ. ಸಿ. ಶೆಟ್ಟರ್)

ಸರ್ಕಾರದವರು ವಿಚಾರಮಾಡಬೇಕು. ಇದನ್ನು ಒಪ್ಪಿಕೊಂಡು ಇದರ ಬಗ್ಗೆ ಸರ್ಕಾರ ನೂಕ್ತ ಕ್ರಮವನ್ನು ತೆಗೆದುಕೊಂಡರೆ, ಇನ್‌ಕಂಟ್ಯಾಕ್ಸ್ ಆಫೀಸಿಗೆ ನಿಜವಾಗಿ ಹೆಚ್ಚು ಲಾಭವಾಗುತ್ತದೆ ಯೆಂದು ನಾನು ಅಂಕಿಅಂಶಗಳಿಂದ ಹೇಳಬಹುದು.

ಶ್ರೀ ಸಿ. ಬೈರೇಗೌಡ.—ಕೆಲವರು ಭೂಮಿಯಲ್ಲಿದ್ದು ಸಾಗುವಳಿ ಮಾಡುವುದಿಲ್ಲ ಅಂತಹವರಿಗೆ ಜಮೀನು ಕೊಡುವುದಿಲ್ಲವೇ ?

ಶ್ರೀ ಪಿ. ಸಿ. ಶೆಟ್ಟರ್.—ನಾನು ಹೇಳುತ್ತಾ ಇರುವುದು "ಡೆಫಿನಿಷನ್ ಆಫ್ ಪರ್ಸನಲ್ ಕಲ್ಟಿವೇಷನ್" ಬಗ್ಗೆ. ಅಲ್ಲಿ 16 ಕೆಟಗರಿಸ್ ಹಾಕಿದ್ದಾರೆ. ಅದನ್ನು ತೆಗೆದು ಹಾಕಬೇಕೆಂಬ ವಿಧಿಗೆ ನಾನು ಉತ್ತರ ಕೊಡುತ್ತಿದ್ದೇನೆ. ನಾನಿನ್ನೂ ಸೆಕ್ಷನ್ 14ರ ಬಗ್ಗೆ ಇನ್ನಷ್ಟಕ್ಕೆ ತಿಮ್ಮಪ್ಪಡಿಯನ್ನು ಟಚ್ ಮಾಡುವುದಕ್ಕೇ ಹೋಗಿಲ್ಲ. ಆದರೂ ಇದರಿಂದ ಬಹಳ ಅನಾಹುತವಾಗುತ್ತಿದೆ. ಇವತ್ತು ಯಾವ ಮನುಷ್ಯ ಜಮೀನನ್ನು ಸಾಗುವಳಿ ಮಾಡುತ್ತಿದ್ದಾನೋ ಅವನಿಗೆ ಜಮೀನಿನ ಮೂಲಹಕ್ಕನ್ನು ಕೊಡಬೇಕು. ನಾನು ಹೇಳುವುದೇನೆಂದರೆ, ಈ 14ನೇ ಸೆಕ್ಷನ್ನನ್ನು ತೆಗೆದು ಹಾಕಿ ಯಾರ್ಯಾರಿಗೆ ಅವಶ್ಯಕತೆ ಇದೆಯೋ ಅವರಿಗೆ ಮಾತ್ರ ರಕ್ಷಣೆ ಕೊಡಬೇಕು. ಜನರಲ್ಲಾಗಿ ಆ ರೀತಿ ಈ ಸೆಕ್ಷನ್ನನ್ನು ಈ ಮನೂದೆಯಲ್ಲಿಡುವುದು ನೂಕ್ತವಲ್ಲವೆಂದು ನನ್ನ ಅಭಿಪ್ರಾಯ. ಹೇಗೆಂದರೆ, ಯಾರೋ ಫಿಸಿಕಲ್ ಡಿಸೇಬಲ್‌ರಾಗಿರುತ್ತಾರೆ, ಮತ್ತು ಆರ್ಮಿಯಲ್ಲಿರುತ್ತಾರೆ, ಮೈನರುಗಳಾಗಿ ಇರುತ್ತಾರೆ, ಅಂತಹವರ ಬಗ್ಗೆ ಜಮೀನು ರಿಸ್ಯೂಂ ಮಾಡಬೇಕು. ಅದಕ್ಕಾಗಿ ಒಂದು ತಾರೀಖಿನನ್ನು ನಿಗದಿಮಾಡಬೇಕು. ಆರು ತಿಂಗಳ ಅವಧಿಯನ್ನಾದರೂ ನಿಗದಿಮಾಡಬೇಕು. ಮುಂಬೈಯಲ್ಲಿ ಮಾಡಿದ ಹಾಗೆ ಮಾಡುವುದು ಒಳ್ಳೆಯದು. ಡಿಸೆಂಬರ್ ಒಂದನೇ ತಾರೀಖಿನಿಂದ ಆರು ತಿಂಗಳು ಅಂದರೆ, ದಿನಾಂಕ 1—5—1973ರಂದು "ಜೆನೆಂಟ್ಸ್ ಡೆ" ಎಂಬುದಾಗಿ ಡಿಕ್ಲೇರ್ ಮಾಡಿ ಸರ್ಕಾರ ಜಮೀನು ತೆಗೆದುಕೊಂಡು ರೈತನಿಗೆ ಕೊಡಬೇಕು. ಅದಾದನಂತರ ಕೂಡಲೇ ಹೆಚ್ಚು ವೇಳೆಯನ್ನು ವ್ಯಯಮಾಡದೆ ಯಾವನಿಗೆ ಜಮೀನು ಇದೆಯೋ ಅವನು ಡೀಮ್ಡ್ ಟು ಬಿ ಆಕ್ಯುಪೆಂಟ್, (Deemed to be occupant) ಡೀಮ್ಡ್ ಟು ಬಿ ಓನರ್ (Deemed to be owner) ಎಂಬುದಾಗಿ ಒಂದು ತೀರ್ಮಾನವನ್ನು ಸರ್ಕಾರದವರು ತೆಗೆದುಕೊಳ್ಳಬೇಕು. ಒಂದು ವೇಳೆ ಮೈನರ್ಸ್ ಫಿಸಿಕಲ್ ಡಿಸೇಬರ್ಡ್ ಆಗಿದ್ದರೆ, ಅಂತಹವರಿಂದಲೂ ಅರ್ಜಿಗಳನ್ನು ಸರ್ಕಾರ ಪಡೆದು ಅವರ ಜಮೀನುಗಳನ್ನು ಸಹ ಅದೇ ರೀತಿಯಲ್ಲಿ ಡಿಕ್ಲೇರ್ ಮಾಡಿ ಒಂದು ಶಾಸನವನ್ನು ಮಾಡಬೇಕೆಂದು ನನ್ನ ಸೂಚನೆ.

ಇನ್ನು ಭೂಮಿಯನ್ನು ಬಿಡಿಸಿಕೊಳ್ಳುವ ವಿಚಾರ. ಈ ಭೂಸುಧಾರಣೆಯ ಕಾನೂನು ಬರುವ ಪೂರ್ವದಲ್ಲಿ ಎಷ್ಟು ಜನ ರೈತರಿಂದ ಜಮೀನನ್ನು ಪಡೆಯುತ್ತಿದ್ದರೆಂದರೆ, ನೋಡಬೇಕು. ಇದುವರೆಗೆ ಆ ರೀತಿಯಾಗಿ ಏನೂ ಪಡೆಯುತ್ತಾ ಇಲ್ಲ ಈ ಕಾನೂನು ಈಗ ಬರುತ್ತದೆ ಅಂದಮೇಲೆ ಎಲ್ಲರಿಗೂ ಜಮೀನು ಪಡೆಯಬೇಕೆಂಬ ಹವ್ಯಾಸ ಪ್ರಾರಂಭವಾಗಿ ಹೋಗಿದೆ. ನಾವು ಬೇಸಾಯವನ್ನು ಒಪ್ಪಿಕೊಳ್ಳಬೇಕೆಂಬ ದೃಷ್ಟಿಯಿಂದಲೇ ಈಗ ಅವರ ಬಗ್ಗೆ ನಾನು ಮಾತನಾಡುತ್ತಾ ಇಲ್ಲ. 1939ರ ಹಿಂದೆ ಈ ಭೂಸುಧಾರಣೆ ಬರುವ ಪೂರ್ವದಲ್ಲಿ ರೈತರಿಂದ ಜಮೀನು ಪಡೆಯಲು ಭೂ ಮಾಲೀಕರಿಗೆ ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಕಾಯಿದೆಯಲ್ಲಿ ಅವಕಾಶವಿತ್ತು. ಜಮೀನು ಹಿಂದಕ್ಕೆ ಪಡೆಯುವ ಕೆಲಸ, ಮುಂತಾದುವುಗಳ ಬಗ್ಗೆ ಒಂದೆರಡು ಕೋರ್ಟಿಗೆ ಕೇವಲ ಒಂದೆರಡು ಕೇಸುಗಳೂ ಸಹ ಇರಲಿಲ್ಲ. ಆಗ ಒಂದು ರೀತಿಯ ಅಭಿಪ್ರಾಯವಿತ್ತು. ಭೂಮಿ ಇದ್ದರೆ ಅವರಿಗೆ ಜೀವನಕ್ಕೆ ಒಂದು ಸಕ್ಯೂರಿಟಿ ಇದ್ದ ಹಾಗೆ. ಅದರಿಂದಲೇ ಅನೇಕರು ಉತ್ಪನ್ನ ಮಾಡಬೇಕೆಂಬ ಉದ್ದೇಶದಿಂದ ಜಮೀನನ್ನು ಪಡೆಯಲಿಲ್ಲ. ನಿಜವಾಗಿ ಭೂಮಿಯನ್ನು ಇಟ್ಟುಕೊಂಡರೆ, ಸಮಾಜದಲ್ಲಿ ಅಂತಹವರಿಗೆ ಒಂದು ದೊಡ್ಡ ಜನರು, ಹೆಚ್ಚಿನ ಗೌರವ ಉಂಟಾಗುತ್ತದೆಂಬ ಭಾವನೆ ಇತ್ತು. ಒಂದು ರೀತಿಯಲ್ಲಿ ಅದೊಂದು ಫ್ಯಾಷನ್ ಆಗಿಯೂ ಅನೇಕ ಜನರು ಇಟ್ಟುಕೊಂಡಿದ್ದರು. ನಿಜವಾಗಿ ಜಮೀನನ್ನುಮಾಡಿ ಜೀವನ ಮಾಡಬೇಕು, ಜಮೀನಿನಲ್ಲಿ ಯಾವುದಾದರೂ ಉದ್ಯೋಗ ಪಡೆಯುವ ಉದ್ದೇಶದಿಂದ ಜಮೀನನ್ನು ಪಡೆಯಲಿಲ್ಲ. ಆದ್ದರಿಂದ ಈಗ 14ನೇ ಕಲಂನೊಳಗೆ ಇದಕ್ಕೆ ಅವಕಾಶ ಮಾಡಿಕೊಡುವುದು, ಜಮೀನನ್ನು ಬಿಡಿಸಿಕೊಳ್ಳುವ ಅವಕಾಶವನ್ನು ಕಲ್ಪಿಸಿಕೊಡುವುದು ಇವನ್ನು ಬಿಟ್ಟು ಬಿಡಬೇಕು ಹಾಗೆ ಮಾಡದೆ ಏನೋ ಒಂದು ಫ್ಯಾಷನ್ನಾಗಿ, ಪ್ರಿಯವಾಗಿ ಜಮೀನು ತೆಗೆದು ಕೊಳ್ಳಿ ಎಂದು ಹೇಳುವುದು ಬೇಡ. ಆ ದೃಷ್ಟಿಯಿಂದ ಈ 14ನೇ ಕಲಮನ್ನು ತೆಗೆದುಹಾಕಬೇಕು. ಈ ಸನ್ನಿವೇಶದಲ್ಲಿ ಈ ಸಭೆಯ ಲಕ್ಷ್ಯವನ್ನು ಒಂದು ವಿಚಾರದ ಕಡೆಗೆ ಸೆಳೆಯಬಯಸುತ್ತೇನೆ.

ಈಗಾಗಲೇ ಅನೇಕ ಜನರು ಬೇರೆಬೇರೆ ಪ್ರದೇಶಗಳಲ್ಲಿ ಜಮೀನನ್ನು ಸ್ವಂತ ಸಾಗುವಳಿಗೆ ಬೇಕೆಂದು ಹೇಳಿ ಅದನ್ನು ಪಡೆದಾದಮೇಲೆ ಮತ್ತೊಬ್ಬರಿಗೆ ಕೊಟ್ಟಿದ್ದಾರೆ. ಸುಮಾರು ಸೇಕಡ 60ರಷ್ಟು ಜನರು ಆ ರೀತಿಯಾಗಿ ಬೇರೆಯವರಿಗೆ ಮಾರಿಕೊಂಡು ಹೋಗಿದ್ದಾರೆ ಅಂತಹವರಿಗೆ ಮತ್ತಷ್ಟು ದೃಷ್ಟಿಯಿಂದ ಈಗ ಈ ಭೂಸುಧಾರಣೆಯ ಕಾನೂನನ್ನು ಜಾರಿಮಾಡುವಾಗ ನಿಜವಾಗಿ ಆ ರೀತಿ ಜಮೀನನ್ನು ಪಡೆದಂಥ ಜನರೂ ಸಹ ಸ್ವಂತ ಸಾಗುವಳಿ ಮಾಡದಿದ್ದರೆ, ಅಂತಹ ಜಮೀನನ್ನು ಸರ್ಕಾರ ಫರ್‌ಫೀಟ್ ಮಾಡಲು ತಕ್ಕ ಕಾನೂನನ್ನು ಈ ಮಸೂದೆಯಲ್ಲಿ ಮಾಡಬೇಕೆಂದು ನಾನು ಸೂಚನೆ ಮಾಡುತ್ತೇನೆ. ಇನ್ನು ಸೆಕ್ಷನ್ 25ರ ಬಗ್ಗೆ ಸ್ವಲ್ಪ ಹೇಳಬಯಸುತ್ತೇನೆ. 1947ನೇ ಇಸವಿಯಿಂದ ಇಲ್ಲಿಯವರೆಗೂ ನಮ್ಮ ದೇಶದಲ್ಲಿ ಈ ಭೂಸುಧಾರಣಾ ಕಾನೂನನ್ನು ಬುಟ್ಟಿಗೆ ಹಾಕುವುದಕ್ಕೆ ಕಾರಣ ಇದು ಒಂದೇ ಎಂದು ಹೇಳಬಹುದು. ಕಾನೂನಿನಲ್ಲಿ ಇಷ್ಟೊಂದು ಹಕ್ಕು ಬಾಧ್ಯತೆಗಳನ್ನು ಕೊಡುವಾಗ ಬಿಟ್ಟುಕೊಡುವುದಕ್ಕೆ ರೈತನ ಮನಸ್ಸು ಒಪ್ಪುವುದೇ ಎಂದು ಕೇಳುತ್ತೇನೆ. ಇದರಿಂದ ನಾವು ಇವತ್ತು ರೈತನಿಗೆ ಮೋಸ ಮಾಡಿ, ಅಥವಾ ಇನ್ನಿತರ ಉಪಾಯವನ್ನು ಮಾಡಿ ಅವನಿಂದ ಜಮೀನನ್ನು ಪಡೆಯುವುದಕ್ಕೆ ಒಂದು ಅವಕಾಶವನ್ನು ನಾವಾಗಿಯೇ ಕಲ್ಪಿಸಿಕೊಟ್ಟಂತಾಗುತ್ತದೆ. ಉದಾಹರಣೆಗೆ ಅಣ್ಣ ತಮ್ಮಂದಿರ ಜಗಳವಾಗಿ ಅಣ್ಣನ ಹೆಸರಿನಲ್ಲಿ ಎಂಟ್ರಿ ಇದ್ದರೆ ತಮ್ಮನಿಗೆ ಮೋಸ ಮಾಡುವ ಪ್ರಶ್ನೆ ಬರುತ್ತದೆ. ಆದ್ದರಿಂದ ಯಾವುದಾದರೂ ರೈತನು ಸೆ ನ್ 25ರ ಪ್ರಕಾರ ಭೂಮಿಯನ್ನು ಬಿಟ್ಟುಹೋಗುವ ಹಾಗೆ ಏಕೆ ಮಾಡಿದರೆಂದು ನನಗೆ ಅರ್ಥವಾಗುವುದಿಲ್ಲ. ಅವನಿಗೆ ಏನಾದರೂ (Incapacity) ಇನ್‌ಕೆಪಾಸಿಟಿ ಇದ್ದರೆ ಅವನು ಬಿಟ್ಟು ಹೋಗುವ ಪರಿಸ್ಥಿತಿ ಬರುತ್ತದೆ; ಇಲ್ಲದಿದ್ದರೆ ಇಲ್ಲ.

4-00 P.M.

ಇನ್ನು 12 ಸಾವಿರ ರೂಪಾಯಿ ವರಮಾನದ ಬಗ್ಗೆ ಹೇಳುವುದಾದರೆ, ಇದರ ಉದ್ದೇಶ ಏನಿದೆ ಇದು ಸರಿಯಾದುದು ಎಂದು ನಾನು ಹೇಳುತ್ತೇನೆ. ಇದರಲ್ಲಿ ಎಫೆಕ್ಟ್ ಆಗುವ ಜನ ಬಹಳ ಇಲ್ಲ. ಅದ್ದರಿಂದ ಅದರ ಬಗ್ಗೆ ಗೊಂದಲ ಮಾಡುವ ಅವಶ್ಯಕತೆ ಇಲ್ಲ. ಕೆಲವರು ಇದು ನೆಟ್ ಪ್ರಾಫಿಟ್ಸೇ ಅಥವಾ ಗ್ರಾಸ್ ಪ್ರಾಫಿಟ್ಸೇ ಎಂದು ಕೇಳಿದರು. ಯಾವಾಗಲೂ ಇನ್‌ಕಂಟ್ಯಾಕ್ಸಿನವರು ಪ್ರಾಫಿಟನ್ನು ಇತ್ಥರ್ಥ ಮಾಡುವಾಗ ಅದು ನೆಟ್ ಪ್ರಾಫಿಟ್ಸೇ ಆಗಿರುತ್ತದೆ. ಅಂದರೆ ಖರ್ಚು ಎರಾಳ ಹೋಗಿ ನೆಟ್ ಪ್ರಾಫಿಟ್ ಎಂದು ಮಾಡುತ್ತಾರೆ. ಇವತ್ತು 12 ಸಾವಿರ ರೂಪಾಯಿ ಹಾಕಿದರೂ, ಇನ್‌ಕಂಟ್ಯಾಕ್ಸಿನ ಕಕ್ಷೆಯೊಳಗೆ ಬಾರದ ಜನರು ಲಕ್ಷೋಪಲಕ್ಷ ಇದ್ದಾರೆ. ಈ 12 ಸಾವಿರರೂಪಾಯಿ ಹಾಕಿದರೂ, ಇನ್‌ಕಂ ಫ್ರಮ್ ನಾನ್ ಅಗ್ರಿ ಕಲ್ಚರಲ್ (Income from non-agriculture) ಎಂಬುದನ್ನು ಏಕೆ ಒಪ್ಪಿಕೊಳ್ಳಬೇಕಾಗಿದೆ. ಆದರೆ, ಇವತ್ತು 10 ಯುನಿಟ್ ಕ್ಷೇತ್ರ, ನಿಗದಿ ಮಾಡುವಾಗ, ಅದರಲ್ಲಿರತಕ್ಕ ಇನ್‌ಕಂ ಸುಮಾರು 12 ಸಾವಿರ ಎಂದು ಹೇಳಬಹುದು. ಆದ್ದರಿಂದ ಒಬ್ಬನಿಗೆ ಬೇರೆ ರೀತಿಯಲ್ಲಿ 12 ಸಾವಿರ ಇನ್‌ಕಂ ಇದ್ದಾಗ ಇದನ್ನು ಮಾಡಿ ಈ ರೀತಿ ಕಾನೂನಿನಲ್ಲಿ ಮಾಡಿರುವುದು ಸರಿಯೆಂದು ಹೇಳುತ್ತೇನೆ. ಇಪ್ಪತ್ತಿನ ದಿವಸ 12 ಸಾವಿರದ ಮೇಲೆ ಇನ್‌ಕಂ ಇದ್ದು, ಇನ್‌ಕಂಟ್ಯಾಕ್ಸ್ ಅಸೆಸ್ಸೀಸ್ ಸುಮಾರು 9 ಸಾವಿರ ಜನ ಇರಬಹುದು. ಆದ್ದರಿಂದ ಈ 9 ಸಾವಿರ ಜನರ ಬಗ್ಗೆ ಈ ರೀತಿಯಲ್ಲಿ ಮಾತನಾಡುವುದರಲ್ಲಿ ಅರ್ಥವಿಲ್ಲ. ಈ 12 ಸಾವಿರಕ್ಕಿಂತ ಮೇಲೆ ನಾನ್ ಅಗ್ರಿಕಲ್ಚರಲ್ ಇನಕಂ ಇದ್ದು ಬೇಸಾಯವನ್ನೇ ಹೊಂದಿಕೊಂಡಿರತಕ್ಕವರು ಎಷ್ಟು ಜನ ಎಂದು ಲೆಕ್ಕ ಇಲ್ಲ. ಒಟ್ಟಿನಲ್ಲಿ ನಾನು ಹೇಳುವುದು ಈ 12 ಸಾವಿರ ರೂಪಾಯಿ ನಿಗದಿ ಏನು ಮಾಡಿದ್ದಾರೆ, ಅದು ಸೂಕ್ತವಾಗಿದೆ ಮತ್ತು ಶಾಸ್ತ್ರೀಯವಾಗಿದೆ. ಆದ್ದರಿಂದ ಅದನ್ನು ಈ ಸಭೆ ಒಪ್ಪಿಕೊಳ್ಳಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಈ ಕಾನೂನನ್ನು ಅಮಲು ಬಜಾವಣೆ ಮಾಡುವ ಬಗ್ಗೆ ಹೇಳುತ್ತೇನೆ. ಈ ಕಾನೂನನ್ನು ಅಮಲು ಬಜಾವಣೆ ಮಾಡಬೇಕಾದರೆ, ನಾವು ಅಧಿಕಾರಿಗಳಿಗೆ ತಿಳಿದ ಹಾಗೆ ಮಾಡುವುದಕ್ಕೆ ಅವಕಾಶವನ್ನು ಕೊಡಬಾರದು; ಮತ್ತು ಆ ರೀತಿಯ ಶಾಸನವನ್ನು ನಾವು ಇಲ್ಲೇ ಮಾಡಬಾರದು. ಇವತ್ತು ಎರಡು ಮತ್ತು ಎರಡು ಕೂಡಿಸಿದರೆ ನಾಲ್ಕು ಆಗುತ್ತದೆ ಎಂದೇ ನಾವು ಶಾಸನವನ್ನು ಮಾಡಬೇಕಲ್ಲದೆ, ದೀಮ್ ಟು ಬೀ ಈಫ್ ಇಟ್ ಈಸ್ (Deemed to be if it is)—ಇಂತಹ ಪದಗಳನ್ನು ಉಪಯೋಗಿಸಿಕೊಂಡು ಕಾನೂನನ್ನು ಮಾಡಬಾರದು. ನಾವು ದೇಶದಲ್ಲಿ ಎಷ್ಟೊಂದು ಸಿನ್ಸಿಯಾರಿಟಿ ಮನೋಭಾವದಿಂದ ಕಾನೂನು ಮಾಡುತ್ತೇವೆಯೋ ಅದು ಕಾರ್ಯಾಚರಣೆಯಲ್ಲಿಯೂ ಹಾಗೆಯೇ ಬರಬೇಕು. ಆದ್ದರಿಂದ ಆ ರೀತಿಯ ಡಿಸ್ಕ್ರಿಶನರಿ ಪೌವರ್‌ಜಿನು ಗಳನ್ನು ತೆಗೆದುಹಾಕಿ ಈ ರೀತಿ ಇದ್ದರೆ, ಈ ರೀತಿ ಮಾಡಬೇಕೆಂದು ಹೇಳಬೇಕು.

(ಶ್ರೀ ಪಿ. ಸಿ. ಶೆಟ್ಟರ್)

ಇನ್ನು ಇಂಡೆಮ್ನಿಟಿ ಕ್ಲಾಸ್ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಅಧಿಕಾರಿಗಳು ಶಾಸನವನ್ನು ಜಾರಿಗೆ ಕೊಡಬೇಕಾದರೆ, ಅವರಿಗೆಲವುರಕ್ಷಣೆಗಳನ್ನು ಕೊಡುತ್ತಾರೆ. ಎಲ್ಲಿಯಾದರೂ ಬಡ ಜನರ ಅನುಕೂಲಕ್ಕೋಸ್ಕರ ತಮ್ಮ ಅಧಿಕಾರವನ್ನು ಉಪಯೋಗಿಸಿಕೊಂಡರೆ ಅವರಿಗೆ ರಕ್ಷಣೆ ಇರಲಿ ಎಂದು ಕಾನೂನಿನಲ್ಲಿ, ಅವಕಾಶ ಮಾಡಿಕೊಟ್ಟಿರುತ್ತಾರೆ. ಆದರೆ ಅದನ್ನು ಜನರ ವಿರುದ್ಧವಾಗಿ ಉಪಯೋಗಿಸಿದರೆ, ಅದರಿಂದ ಜನರಿಗೆ ತುಂಬಾ ಅನ್ಯಾಯವಾಗುತ್ತದೆ. ಆದ್ದರಿಂದ ಅಂತಹ ಅವಕಾಶ ಸಿಗದ ಹಾಗೆ ಆ ಇಂಡೆಮ್ನಿಟಿ ಕ್ಲಾಸನ್ನೇ ತೆಗೆದು ಹಾಕಬೇಕು. ಮತ್ತು ಈ ಶಾಸನದಲ್ಲಿ ಏನಾದರೂ ಅಕ್ರಮವಾದರೆ, ಅದರ (Burden of proof must be shifted to the officer) ಬರ್ಡನ್ ಆಫ್ ಪ್ರೂಫ್ ಮಸ್ಟ್ ಬೀ ಶಿಫ್ಟೆಡ್ ಟುದಿ ಆಫೀಸರ್ ಏಕೆಂದರೆ ಈ ಕ್ಲಾಸಿನಲ್ಲಿ ಅವನು ಏನು ಬೇಕಾದರೂ ಮಾಡಬಹುದು. ಹಾಗೆ ಅವನು ಮಾಡಿದರೆ ಅದನ್ನು ಯಾರೂ ಕೇಳಕ್ಕಕ್ಕ ಪರಿಸ್ಥಿತಿಯಲ್ಲಿ ಇಲ್ಲ. ಆದ್ದರಿಂದ ಈ ಅಧಿಕಾರಿಗಳು ಹೀಗೆ ಅನ್ ಕಂಟ್ರೋರ್ ಆಗಿರುವುದು ಸರಿಯಲ್ಲವೆಂದು ಹೇಳುತ್ತೇನೆ.

ಇಷ್ಟು ನನ್ನ ಸಲಹೆ ಸೂಚನೆಗಳನ್ನು ಕೊಟ್ಟು ನನ್ನ ಭಾಷಣವನ್ನು ಮುಗಿಸುವ ಪೂರ್ವದಲ್ಲಿ ತಮ್ಮ ಮುಖಾಂತರ ಎಲ್ಲಾ ಸದಸ್ಯರನ್ನು ಕೇಳಿಕೊಳ್ಳುವುದೇನೆಂದರೆ, ಇವತ್ತು ಭೂಸುಧಾರಣೆಯ ಕಾನೂನಾಗಲಿ ಅಥವಾ ಸರ್ಕಾರದ ಯಾವುದೇ ಇನ್ನಿತರ ಕಾರ್ಯಕ್ರಮವಾಗಲಿ, ನಮಾಡಿವಾದದ ತಳಹದಿಯ ಮೇಲೆ ಅದನ್ನು ಮಾಡುತ್ತಿರುವಾಗ, ನಾವು ಒಳ್ಳೆಯ ಮನಸ್ಸಿನಿಂದ ಅವುಗಳನ್ನು ಸ್ವೀಕರಿಸಿ ಒಪ್ಪಿಕೊಳ್ಳಬೇಕೆಂದು ಮನವಿ ಮಾಡಿಕೊಂಡು, ಈ ಮಸೂದೆಗೆ ನನ್ನ ಬೆಂಬಲ ಕೊಟ್ಟು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಆಡಳಿತ ಪಕ್ಷದವರು ಈ ಭೂಸುಧಾರಣಾ ಕಾನೂನಿಗೆ ತಂದಿರತಕ್ಕಂತಹ ಈ ತಿದ್ದುಪಡಿ ಮಸೂದೆಯ ಬಗ್ಗೆ ನನ್ನ ಕೆಲವು ಅಭಿಪ್ರಾಯಗಳನ್ನು ವ್ಯಕ್ತಪಡಿಸಬೇಕೆಂದು ಇಚ್ಛೆಪಡುತ್ತೇನೆ. ಈ ತಿದ್ದುಪಡಿ ಮಸೂದೆಯನ್ನು ನಾನು ಕೆಲವು ಶರತ್ತುಗಳ ಆಧಾರದ ಮೇಲೆ ಸ್ವಾಗತ ಮಾಡುತ್ತೇನೆ. ಆ ಶರತ್ತುಗಳು ಯಾವುವು ಮತ್ತು ಆ ಶರತ್ತುಗಳನ್ನು ಆಡಳಿತ ಪಕ್ಷದವರು ಒಪ್ಪಿಕೊಳ್ಳುವುದಾದರೆ ನಾನು ಈ ತಿದ್ದುಪಡಿ ಮಸೂದೆಗೆ ಸಂಪೂರ್ಣವಾದ ಬೆಂಬಲವನ್ನು ವ್ಯಕ್ತಪಡಿಸಬಹುದು. ಈಗತಾನೆ ಮಾತನಾಡಿದ ಶ್ರೀಮಾನ್ ಪಿ. ಸಿ. ಶೆಟ್ಟರನ್ನು ನಾನು ಸಂಪೂರ್ಣವಾಗಿ ಅಭಿನಂದಿಸುತ್ತೇನೆ. ಏಕೆಕ್ಕೆಂದರೆ ಅವರು ಅಪರೂಪವಾಗಿ ಆಡಳಿತ ಪಕ್ಷದಲ್ಲಿದ್ದು ಅವರು ಪಕ್ಷದ ಚಕ್ರಕ್ಕೆ ಸಿಕ್ಕಿ ತೊಂದರೆಪಡತಕ್ಕ ಸಂದರ್ಭ ಇದ್ದರೂಕೂಡ ಅವರು ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ವ್ಯಕ್ತಪಡಿಸತಕ್ಕಂಥಾ ಹಕ್ಕು ಏನಿದೆ ಅದರ ಚರಾವಣೆ ಮಾಡಿದ್ದಾರೆ. ಅದಕ್ಕೆ ನಾನು ಸಂತೋಷಪಡುತ್ತೇನೆ. ಮತ್ತು ಅವತಷ್ಟೇ ಸ್ಪಷ್ಟವಾಗಿ ಅಭಿಪ್ರಾಯವನ್ನು ಕೊಟ್ಟಿರತಕ್ಕ ಗೆಳೆಯರೂ ಕೂಡ ಇದ್ದಾರೆ. ಹೊರಗೆಡೆ ಕೂಡ ಆ ರೀತಿ ಅಭಿಪ್ರಾಯವನ್ನು ವ್ಯಕ್ತಪಡಿಸಿರತಕ್ಕ ಅವರ ಪಕ್ಷದ ಕೆಲವು ಮುಖಂಡರು ಇದ್ದಾರೆ. ಭೂಸುಧಾರಣಾ ಕಾನೂನನ್ನು ಚರ್ಚೆ ಮಾಡತಕ್ಕಂಥಾ ಕಾಲದಲ್ಲಿ ಭಾರಿ ಹಣವನ್ನು ಖರ್ಚು ಮಾಡಿ ಹಲವಾರು ಜನಗಳನ್ನು ಬರಮಾಡಿಕೊಂಡು ಭಾಷಣಗಳನ್ನು ಮಾಡಿ ಬೆಂಗಳೂರಿನಲ್ಲಿ ಭಾರಿ ಪ್ರದರ್ಶನವನ್ನು ಏರ್ಪಾಟು ಮಾಡತಕ್ಕ ಶಕ್ತಿಯನ್ನು ಹೊಂದಿರತಕ್ಕ ಜನ ಅವರ ಪಕ್ಷದಲ್ಲಿ ಇದ್ದಾರೆ ಎಂಬುದನ್ನು ಅವರು ಮರೆಯುವಹಾಗಿಲ್ಲ. ಭೂಸುಧಾರಣೆಯ ವಿಷಯದಲ್ಲಿ ಅಭಿಪ್ರಾಯ ಭೇದ ಇದೆ. ಭೂಪರಿಮಿತಿ 10 ಸ್ಟಾಂಡರ್ಡ್ ಎಕರೆ ಇರಬೇಕೇ, 5 ಎಕರೆ ಇರಬೇಕೇ 15 ಎಕರೆ ಇರಬೇಕೇ 18 ಎಕರೆ ಇರಬೇಕೇ ಪರಿಮಿತಿ ಯಾವುದು ಇರಬೇಕು ಎನ್ನುವ ವಿಷಯದಲ್ಲಿ ಅಭಿಪ್ರಾಯ ಭೇದ ಇದೆ. ಹಲವಾರು ಶತಮಾನಗಳಿಂದ ಒಂದು ವರ್ಗವನ್ನು ಶೋಷಣೆ ಮಾಡಿ, ಹೆಚ್ಚು ಪ್ರತಿಫಲವನ್ನು ಪಡೆಯುತ್ತಾ ಬಂದಿರುವ ಇನ್ನೊಂದು ವರ್ಗ ದೇಶದಲ್ಲಿ ಶಾಶ್ವತವಾಗಿದೆ ಎನ್ನುವುದು ಈ ಮಸೂದೆಯಿಂದಲೋ ಗೊತ್ತಾಗುತ್ತದೆ. ಅಂತವರು ಈ ಕಡೆಯೂ ಇದ್ದರು ಆ ಕಡೆಯೂ ಇದ್ದರು. ಈಗ ತಂದಿರತಕ್ಕ ಭೂಸುಧಾರಣಾ ತಿದ್ದುಪಡಿ ಮಸೂದೆಯಲ್ಲಿ ಕೂಡ ಇನ್ನೂ ಕೂಡ ಊಳಿಗತನ ಶೋಷಣೆಯನ್ನು ಮುಂದುವರಿಸಿಕೊಂಡು ಹೋಗತಕ್ಕಂಥಾ ಕೆಟ್ಟ ಬುದ್ಧಿ ಇದರಲ್ಲಿ ಇದೆ. ಈಗತಾನೆ ಮಾನ್ಯ ಮಂತ್ರಿಗಳು ಹೇಳಿದರು, ಜಮೀನನ್ನು ಉತ್ತು ಬಿತ್ತಿ ಬೆಳೆಯನ್ನು ಬೆಳೆಯುವ ಗೇಣಿ ರೈತ ಒಪ್ಪಿ ಜಮೀನನ್ನು ಬಿಟ್ಟು ಕೊಡುವುದಾದರೆ ಅದನ್ನು ಬಿಡಿಸಿಕೊಳ್ಳಬಹುದು ಎಂದು ಹೇಳಿದರು. ಈ ರೀತಿ ಗೇಣಿ ರೈತನ ಒಪ್ಪಿಗೆ ಪಡೆದು ಜಮೀನನ್ನು ಬಿಡಿಸಿಕೊಳ್ಳತಕ್ಕಂಥಾ ಕೆಟ್ಟ ತಂತ್ರಗಳು ಈ ದೇಶದಲ್ಲಿ ಎಷ್ಟೋ ನಡೆಯುತ್ತವೆ ಮತ್ತು ನಡೆದು ಹೋಗಿವೆ. ನಾನು ವಕೀಲನಾಗಿ ಇಂಥಾ ನಿದರ್ಶನಗಳನ್ನು ನಮ್ಮ ತಿಪಟೂರಿನಲ್ಲಿಯಲ್ಲಿ ನಾನು ಅನೇಕ ನೋಡಿದ್ದೇನೆ.

ಅದರ ಬದಲು ಡಬರ್ ದಿ ಯುನಿಟ್ ಇಟ್ಟುಕೊಂಡು, ಮೇಜರ್ ಸನ್ನಿಗೆ ಕೊಡತಕ್ಕ ಇಂಡಿಪೆಂಡೆಂಟ್ ಯುನಿಟ್ಟನ್ನು ಬಿಡುವಂತೆ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಇದನ್ನು ಯೋಚನೆ ಮಾಡುತ್ತಾರೆಂದು ತಿಳಿಯುತ್ತೇನೆ.

ಇನ್ನು ಕೆಲವರು ಗೇಣಿಗೆ ಕೊಡುವುದನ್ನು ಸಂಪೂರ್ಣವಾಗಿ ತೆಗೆದು ಹಾಕಬೇಕೆಂದು ಹೇಳಿದ್ದಾರೆ. ಕೆಲವು ಸಂದರ್ಭಗಳಲ್ಲಿ ಡಿಪೇಬರ್ಡ್ ಪರ್ಸನ್ಸ್ ಮತ್ತು ಮಿಲಿಟೆರಿಯಲ್ಲಿ ಸೈನಿಕರಾಗಿ ಕೆಲಸ ಮಾಡತಕ್ಕವರು, ಅರ್ಫನ್ಸ್, ಮೈನರ್ಸ್ - ಮುಂತಾದವರ ಬಗ್ಗೆ ಗೇಣಿಗೆ ಕೊಡುವುದು ಇರಬೇಕೇ ವಿನಹ ಬೇರೆ ಯಾವ ಸಂದರ್ಭಗಳಲ್ಲಿಯೂ ಇರಬಾರದೆಂದು ಹೇಳುತ್ತೇನೆ.

ಹೆಚ್ಚುವರಿ ಭೂಮಿಯನ್ನು ತೆಗೆದುಕೊಳ್ಳುವ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಅದಕ್ಕೆ ಕಂದಾಯದ ಇಷ್ಟು ಪಟ್ಟು ಪರಿಹಾರ ರೂಪದಲ್ಲಿ ಕೊಡತಕ್ಕದ್ದು ಎಂದು ಇದೆ. ಸೀಲಿಂಗ್ ಲಿಮಿಟ್ ಮೇಲೆ ಹೆಚ್ಚಾಗಿದ್ದ ಭೂಮಿಯನ್ನು ಸರ್ಕಾರದವರು ಪರಿಹಾರವಿಲ್ಲದೇಯೆ ಏಕೆ ವಶಪಡಿಸಿಕೊಳ್ಳಬಾರದು ಎಂದು ಕೇಳುತ್ತೇನೆ. ಏಕೆಂದರೆ, ಅನೇಕ ವರ್ಷಗಳ ಕಾಲ ರೈತನ ಶೋಷಣೆ ಮಾಡಿ ಅದರ ಉತ್ಪನ್ನವನ್ನು ಅವರು ಪಡೆದಿರುತ್ತಾರೆ. ಆದ್ದರಿಂದ ಅಂತಹ ಸಂದರ್ಭಗಳಲ್ಲಿ ಪರಿಹಾರವಿಲ್ಲದ ಭೂಮಿಯನ್ನು ಪಡೆದುಕೊಳ್ಳಬಹುದು. ಇಲ್ಲದಿದ್ದರೆ ಅಂಥ ಭೂಮಿಯನ್ನು ಬಡ ರೈತರಿಗೆ ಮತ್ತು ಹರಿಜನಗಿರಿಜನರಿಗೆ ಹಂಚುವಾಗ ಅವರಿಂದ ಕಂತಿನ ಮೂಲಕ ಆ ಹಣವನ್ನು ಪಡೆಯಬೇಕಾಗುತ್ತದೆ. ಬಡಜನರು ವ್ಯವಸಾಯ ಮಾಡುವುದರ ಜೊತೆಗೆ ಈ ಕಂತಿನ ಮೂಲಕ ಕೊಡುವ ಹಣ ಸಹ ಒಂದು ಹೊರೆಯಾಗಿ ಇರುತ್ತದೆ. ಇದರಿಂದಾಗಿ ಅವನ ಭಾರ ಇನ್ನೂ ಹೆಚ್ಚಿಗೆ ಆದ ಹಾಗೆ ಆಗುತ್ತದೆ. ಈ ಪ್ರೊವಿಜನನ್ನು ಸಹ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಕೋಆಪರೇಟಿವ್ ಫಾರ್ಮಿಂಗ್ ಬಗ್ಗೆ ಹೇಳುವುದಾದರೆ, ಇವತ್ತು ರಾಜ್ಯದಲ್ಲಿರ ತಕ್ಕಂತಹ ಪ್ರತಿಯೊಂದು ಸಹಕಾರ ಸಂಘಗಳು ಸಹ ಒಂದಲ್ಲ ಒಂದು ರೀತಿಯಲ್ಲಿ ರಾಜಕೀಯದಲ್ಲಿ ಸಿಕ್ಕಿಹಾಕಿಕೊಂಡಿವೆ. ಇವೆಲ್ಲವನ್ನೂ ಅಬಾಲಿಷ್ ಮಾಡಿ, ಈ ಸಹಕಾರ ಸಂಘಗಳನ್ನು ಹೊಸದಾಗಿ ಪುನರುಜ್ಜೀವಗೊಳಿಸಿ, ಬೇರೆ ರೀತಿಯಲ್ಲಿ ಇವಕ್ಕೆ ಉತ್ತೇಜನ ಕೊಟ್ಟು ಸಹಕಾರೀ ಸಂಘಗಳ ಮುಖಾಂತರ ರೈತರಿಗೆ ಕಡಿಮೆ ಬಡ್ಡಿಯ ಸಾಲ, ಮತ್ತಿತರ ಸಲಕರಣೆಗಳನ್ನು ಕೊಟ್ಟು ಈ ಮುನ್ನೆಲೆಂದರ್ಸ್ ಏನಿದ್ದಾರೆ, ಅವರ ಕ್ಲಚನ್ಸ್‌ನಿಂದ ಬಡ ರೈತರನ್ನು ಪಾರು ಮಾಡಬೇಕೆಂದು ಹೇಳುತ್ತೇನೆ. ಇವತ್ತು ರೈತರು ಏನಿದ್ದಾರೆ, ಅವರು ತಮ್ಮ ಜೀವನಕ್ಕೆ ತಕ್ಕಂತೆ ಇರಲು ತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕಾಗಿದೆ. ಅವರಿಗೆ ಸಹಕಾರೀ ಸಂಘಗಳ ಮುಖಾಂತರ ಹಣ ಪಡೆಯುವುದು ಹೇಗೆ, ನವೀನ ಉಪಕರಣಗಳಿಂದ ವ್ಯವಸಾಯ ಮಾಡುವುದು ಹೇಗೆ—ಇವುಗಳ ಬಗ್ಗೆ ತಿಳಿವಳಿಕೆಯನ್ನು ಸಹ ಕೊಡಲು ಸರ್ಕಾರ ಏರ್ಪಾಡು ಮಾಡಬೇಕು.

ಕೊನೆಯದಾಗಿ ಈ ಒಂದು ಭೂಮಸೂದೆ ಏನಿದೆ. ಇದನ್ನು ರಾಜ್ಯಾಂಗದ 9ನೇ ಷೆಡ್ಯೂಲಿನಲ್ಲಿ ಸೇರಿಸಬೇಕು. ಅದಕ್ಕೆ ಕಾರಣ ಇಷ್ಟೆ. ಯಾವ ಕೋರ್ಟ್‌ನಲ್ಲಿಯೂ ಇದನ್ನು ಪ್ರಶ್ನೆ ಮಾಡಬಾರದು. ಇದು ಮೇಜರ್ ಆಕ್ಟ್ ಆದ ಮೇಲೆ ಏನು ಇದರಿಂದ ರೈತನಿಗೆ ಪ್ರಯೋಜನವಾಗುತ್ತದೆ. ಆದು ಶಾಶ್ವತವಾಗಿ ಅವನಿಗೆ ಸಿಗಬೇಕು; ಅವನು ಇದರಿಂದ ಹೊಸ ಜೀವನ ಪ್ರಾರಂಭಿಸಬೇಕು. ಈ ದೃಷ್ಟಿಯಲ್ಲಿ ಇದನ್ನು 9ನೇ ಷೆಡ್ಯೂಲಿನಲ್ಲಿ ಸೇರಿಸಬೇಕೆಂದು ಹೇಳುತ್ತೇನೆ.

ಇಷ್ಟು ಸಲಹೆಗಳನ್ನು ಇಂದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗುವ ಪ್ರಯುಕ್ತ ಕೊಟ್ಟು ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. DEPUTY SPEAKER.—The House will now rise and meet tomorrow at 9-30 A.M.

The House adjourned at Six of the Clock to meet again at Nine of the Clock, on Saturday, the 9th December 1972.

WD 18798—GPB—550—24-1-1974

ಇಂಥಾ ನಿದರ್ಶನಗಳು ಹೆಚ್ಚಾಗಿ ಶಿವಮೊಗ್ಗ, ಕಾರವಾರ, ದಕ್ಷಿಣ ಕನ್ನಡಜಿಲ್ಲೆ, ಧಾರವಾಡ ಜಿಲ್ಲೆಗಳಲ್ಲಿ ಕಾಣುತ್ತಿವೆ. ಬಡ ಗೇಣಿದಾರರು ಅನೇಕ ಶತಮಾನಗಳಿಂದ ಶೋಷಣೆ ಒಳಗಾಗಿದ್ದಾರೆ. ಹೀಗಿರುವಾಗ ಮಸೂದೆಯಲ್ಲಿ ಕೂಡ 'ನರೆಂದರ್ ಆಫ್ ದಿರ್ಯ್ಯಾಂಡ್ ಆಫ್ ಹಿಸ್ ಓನ್ ಅಕಾರ್ಡ್' ಎನ್ನುವುದನ್ನು ಮುಂದುವರಿಸಿ ಎಂದು ಬರೆದಿದ್ದಾರೆ. ಈ ವಿಷಯವನ್ನು ಗ್ರಹಣ ಮಾಡತಕ್ಕ ಶಕ್ತಿ ಇಲ್ಲದೇ ಇರತಕ್ಕ ಮನುಷ್ಯನಿಗೆ ಈ ಒಂದು ಅನ್ಯಾಯ ಈ ದೇಶದಲ್ಲಿ ನಡೆದು ಹೋಗಿದೆ. ಇದನ್ನು ನಾವು ಕಣ್ಣಾರೆ ಕಂಡಿದ್ದೇವೆ. ಕೋರ್ಟಿನಲ್ಲಿ ಬಾಯಿಮುಚ್ಚಿಕೊಂಡು ಕಳಿತುಕೊಂಡಿದ್ದು ಜಮೀನನ್ನು ಬಿಟ್ಟುಕೊಟ್ಟು ಅವನು ಮನೆಗೆ ಹೋದರೆ ಅಲ್ಲಿ ಅವನಿಗೆ ತಿನ್ನುವುದಕ್ಕೆ ಅನ್ನವಿಲ್ಲ. ಇಂಥಾ ಒಂದು ಪದ್ಧತಿಯನ್ನು ಮುಂದುವರಿಸಿಕೊಂಡು ಹೋಗತಕ್ಕಂಥಾ ಕ್ಲಾಜು ಈ ಭೂಸುಧಾರಣಾ ತಿದ್ದುಪಡಿ ಮಸೂದೆಯಲ್ಲಿದೆ. ದೇಶದಲ್ಲಿ ಭೂಸುಧಾರಣೆಯನ್ನು ತರುತ್ತದೆ. ಇದು ಸಮಾಜವಾದದ ಒಂದು ಅಂಶ; ಒಂದು ಹೆಜ್ಜೆ ಎಂದು ಆಡಳಿತ ಪಕ್ಷದವನು ಏನು ಹೇಳುತ್ತಿದ್ದಾರೆ ಇದು ಒಂದು ಭ್ರಮೆ ಎಂದು ನಾನು ಹೇಳಬಯಸುತ್ತೇನೆ.

ರೆನ್ಯೂಮಬರ್ ಲ್ಯಾಂಡ್, ಹೆಚ್ಚುವರಿ ಭೂಮಿ ಏನಿದೆ, ಎಷ್ಟು ಪರ್ಸೆಂಟ್ ಇದೆ ಎಂದು ನಾನು ಲಾಸ್ಟ್ ಸೆಕ್ಷನ್ ಅನ್ನೂ ಅಮೂಲಾಗ್ರವಾಗಿ ನೋಡಿದ್ದೇನೆ. ಈಗ ತಿದ್ದುಪಡಿ ತಂದಿರತಕ್ಕ ಒಂದು ಸೆಕ್ಷನ್ ಬಗ್ಗೆ ನಾನು ಕೂಲಂಕಷವಾಗಿ ಪರಿಶೀಲನೆ ಮಾಡಿದ್ದೇನೆ. ನಾನು ಪುನಃ ಅದನ್ನು ವಿಚಾರ ಮಾಡುವುದಕ್ಕೆ ಹೋಗುವುದಿಲ್ಲ. ಏತಕ್ಕೆಂದರೆ ಅದು ಸ್ಪಷ್ಟವಾಗಿಲ್ಲ. ಎಷ್ಟು ಪರ್ಸೆಂಟ್ ರೆಸೂಮಬರ್ ಲ್ಯಾಂಡ್ ಸಿಕ್ಕುತ್ತದೆ ಎಂಬುದನ್ನು ಮಾನ್ಯ ಕಂದಾಯ ಸಚಿವರು ಹೇಳಿದ್ದಾರೆ. ಅವರು ಹೇಳಿಕೆ ಕೊಟ್ಟ ಪ್ರಕಾರ 2½ ಪರ್ಸೆಂಟ್ ರೆಸ್ಯೂಮಬರ್ ಲ್ಯಾಂಡ್ ಸಿಕ್ಕುತ್ತದೆ ಎಂದು ಅವರು ಹೇಳಿದ್ದು ನನಗೆ ಜ್ಞಾಪಕ ಇದೆ. ಅವರು 10 ಸ್ಟ್ಯಾಂಡರ್ಡ್ ಎಕರೆ ಮಿತಿಯನ್ನು ಹಾಕುವುದಾದರೆ 2 ಚಿಲ್ಲರೆ ಪರ್ಸೆಂಟ್ ರೆನ್ಯೂಮಬರ್ ಲ್ಯಾಂಡ್ ಸಿಕ್ಕುತ್ತದೆ. ಯಾವುದೇ ಒಂದು ಕಾನೂನು ದೇಶದಲ್ಲಿ ಜಾರಿಯಲ್ಲಿದ್ದಾಗ ಆ ಕಾನೂನಿನಿಂದ ಸಮಾಜಕ್ಕೆ ಉಪಯೋಗ, ಸೌಲಭ್ಯಗಳು ದೊರೆಯದಿದ್ದರೆ ಆಗ ಆ ಕಾನೂನಿಗೆ ತಿದ್ದುಪಡಿತರುವಂತಹ ಸಂದರ್ಭ ಬರುತ್ತದೆ. ಈಗ ಈ ಭೂಸುಧಾರಣಾ ತಿದ್ದುಪಡಿ ಮಸೂದೆಯಿಂದ 100 ಕ್ಕೆ 50ಕ್ಕಿಂತ ಹೆಚ್ಚು ಜನಗಳಿಗೆ ಉಪಯೋಗ ಸಿಕ್ಕಿದರೆ ಇದನ್ನು ತಿದ್ದುಪಡಿ ಮಸೂದೆ ಎಂದು ಕರೆಯಬಹುದು. ಇದರ ಸೌಲಭ್ಯಗಳು 1-10 ಕ್ಕೆ 50 ಕ್ಕಿಂತ ಹೆಚ್ಚು ಇರಬೇಕು. ಈ ತಿದ್ದುಪಡಿ ಮಸೂದೆಯಿಂದ ಒಂದೂ ಚಿಲ್ಲರೆ ಪರ್ಸೆಂಟ್ ರೆಸ್ಯೂಮಬರ್ ಲ್ಯಾಂಡ್ ಸಿಕ್ಕುವುದಾದರೆ ಇದು ತಿದ್ದುಪಡಿ ಮಸೂದೆಯೇ ಎಂದು ನಾನು ಕೇಳುತ್ತೇನೆ, ಆದ್ದರಿಂದ ನಾನು ಕೆಲವು ಶಾತ್ರುಗಳ ಆಧಾರದ ಮೇಲೆ ಈ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ ಎಂದು. ನಾನು ಮೊದಲೇ ಹೇಳಿದ್ದೇನೆ: ಈ ಪರತ್ 100ಕ್ಕೆ 50ರಷ್ಟು ಜನರಿಗೆ ಅನುಕೂಲವಾಗಬೇಕಾಗಿತ್ತು. ಆದರೆ ಈಗ ತಂದಿರುವ ತಿದ್ದುಪಡಿ ಮಸೂದೆಯಿಂದ ಯಾವ ಅನುಕೂಲವೂ ಆಗುವುದಿಲ್ಲ ಇವರು ಭೂಸುಧಾರಣೆಯನ್ನು ಜಾರಿಗೆ ತರುತ್ತೇವೆ ಎನ್ನುವ ಕೂಗನ್ನು ಹಾಕಲೇ ಬೇಕಾಗಿದೆ. ಇಲ್ಲದಿದ್ದರೆ ಇವರು ಚುನಾವಣೆಗಳಲ್ಲಿ ಗೆಲ್ಲುವುದು ಕಷ್ಟ. ಮೊನ್ನೆ ನಡೆದ ಚುನಾವಣೆಯ ಸಂದರ್ಭದಲ್ಲಿಯೂ ಸಹ ಇವರು ನಮ್ಮ ನಮೂನೆಯ ವಾದಗಳನ್ನೇ ಜನತೆಯ ಮುಂದಿಟ್ಟು, ಜನತೆಯನ್ನು ನಂಬಿಸಿದರು. ಭೂಸುಧಾರಣೆಯನ್ನು ಜಾರಿಗೆ ತರುತ್ತೇವೆನ್ನುವ ಮಾತನ್ನು ಇವರು ಹೊಸದಾಗಿ ಹೇಳುತ್ತಿಲ್ಲ, ಹಿಂದೆ ಹಲವಾರು ಬಾರಿ ಹೇಳಿವ್ದಾರೆ. ಒಂದೊಂದು ಮೀಟಿಂಗ್‌ನಲ್ಲಿ ನಾಲ್ಕೈದು ಜನ ಮಂತ್ರಿಗಳು ಇದೇ ಮಾತನ್ನು ಹೇಳಿದ್ದಾರೆ. ಕತ್ತಲೆ ಹೋಗಿ ಬೆಳಕಾಗುವದರೊಳಗೆ ಭೂಸುಧಾರಣೆಯನ್ನು ಜಾರಿಗೆ ತರುತ್ತೇವೆನ್ನುವ ಮಾತನ್ನು ಈ ದೇಶದಲ್ಲಿರುವ ಅವಿದ್ಯಾವಂತ ಜನರಿಗೆ ಅರ್ಥವಾಗುವ ಭಾಷೆಯಲ್ಲಿ, ಸಂದರ್ಭೋಚಿತವಾಗಿ ಹೇಳಿ ನಂಬಿಸಿದ್ದಾರೆ. ಅದು ಏನು ದುರಾದೃಷ್ಟವೊ, ಜನರು ಇವರನ್ನು ನಂಬಿ ತಮ್ಮ ಸಂಪೂರ್ಣವಾದ ಬೆಂಬಲವನ್ನು ಕೊಟ್ಟರು. ಅದರ ಒಂದು ಪರಿಣಾಮವಾಗಿ ಈ ಒಂದು ತಿದ್ದುಪಡಿ ಮಸೂದೆಯನ್ನು ತಂದಿದ್ದಾರೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.— ಭೂಸುಧಾರಣೆಯನ್ನು ಜಾರಿಗೆ ತರುತ್ತೇವೆಂದು ಹೇಳಿದ್ದಕ್ಕೆ ಜನರು ಇವರನ್ನು ನಂಬಲಿಲ್ಲ. ಬಡತನವನ್ನು ಹೋಗರಾಡಿಸುತ್ತೇವೆಂದು ಹೇಳಿದ್ದರ ಮೇಲೆ ಜನರು ಇವರನ್ನು ಗೆಲ್ಲಿಸಿದರು.

ಶ್ರೀ ಎಸ್. ಬಂಗಾರಪ್ಪ.—ಸಮಾಜವಾದ ಎಂದರೆ ಅದರಲ್ಲಿ ಎಲ್ಲವೂ ಬರುತ್ತದೆ. ಗರೀಬಿ ಹಠಾವೊ ಕೂಡ ಸಮಾಜವಾದದಲ್ಲಿ ಸೇರುತ್ತದೆ. ಬಡತನವನ್ನು ಹೋಗಲಾಡಿಸುತ್ತೇವೆಂದು ಏನು ಇವರು ಜನರಿಗೆ ಮಾತು ಕೊಟ್ಟು ಬಂದರು, ಅವನ್ನು ಈಗ ಮರೆತುಬಿಟ್ಟಿದ್ದಾರೆ. ಜನರು ಏನಾದರು ಬಂದು ಇವರನ್ನು ಕೇಳಿದರೆ, ಆ ರೀತಿ ನಾವು ಎಲ್ಲ ಹೇಳಿದೆವು ಎಂದು ಕೇಳುತ್ತಾರೋ ಏನೋ?

Sri M. MALLIKARJUNASWAMY.—You must understand that we are spending 900 crores of rupees towards eardication of poverty in this country.

ಶ್ರೀ ಎಂ. ಎಸ್. ಕೃಷ್ಣನ್.—900 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ ಮೇಲೆ ಮೂಲಭೂತವಾದ ಸಮಸ್ಯೆಗಳು ಬಗೆಹರಿದಿವೆಯೇ ಎಂದು ತಮ್ಮನ್ನು ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಲ್ಲಿಕಾರ್ಜುನಸ್ವಾಮಿ ಎಂಬ ಹೆಸರಿನಲ್ಲಿ ಅರ್ಜುನ ಎಂಬ ಹೆಸರು ಕೂಡ ಸೇರಿಕೊಂಡಿದೆ. ಅಂದರೆ ಇವರು ಬೇರೆ ನಮೂನೆಯ ಅರ್ಜುನ ಎಂದು ಹೇಳಬಹುದು.

ಶ್ರೀ ಬಾಪೂಗೌಡ ರಾಯಪ್ಪ.—ಮಲ್ಲಿಕ ಎಂದರೆ 'ರಾಣಿ' ಎಂದು ಅರ್ಥವಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ತಾವು 900 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರಬಹುದು. ಆದರೆ 14 ಸಾವಿರ ಚಿಲ್ಲರೆ ಕೋಟಿ ರೂಪಾಯಿಗಳವರೆಗೆ ಸಾಲ ಎತ್ತಿದ್ದೀರಿ ಎಂಬುದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ತಾವು ಮಾನಮರ್ಯಾದೆ ಬಿಟ್ಟು ಎಲ್ಲೆಲ್ಲಿ ಸಾಲ ಸಿಗುತ್ತದೋ ಆ ದೇಶಗಳಲ್ಲೆಲ್ಲಾ ಸಾಲ ಪಡೆದುಕೊಂಡು ಬಂದು ಅದರ ಹೊರೆಯನ್ನು ಈ ದೇಶದ ಜನರ ಮೇಲೆ ಹಾಕುತ್ತಿದ್ದೀರಿ. ಇಂದು ಹುಟ್ಟಿದ ಮಗುವಿನ ಮೇಲೂ ಸಹ 200 ರೂಪಾಯಿಗಳ ಸಾಲ ಇರುತ್ತದೆ. ಬಡವರು ಉಪಯೋಗ ಮಾಡುವ ಚಿಮಣಿಯೆಣ್ಣೆ, ಬೆಂಕಿಪೊಟ್ಟಣ, ಮಕ್ಕಳು ಧರಿಸುವ ಬಟ್ಟೆಗಳ ಮೇಲೆಲ್ಲಾ ತೆರಿಗೆ ಹಾಕುತ್ತಿದ್ದೀರಿ. ಆರ್ಥಿಕ ತಜ್ಞರು ಲೆಕ್ಕ ಹಾಕಿರುವ ಪ್ರಕಾರ ಇಂದು ನಮ್ಮ ದೇಶದಲ್ಲಿ 9 ಸಾವಿರ ಕೋಟಿ ರೂಪಾಯಿಗಳವರೆಗೆ ಕಪ್ಪು ಹಣ ಇದೆ. ನಮ್ಮ ಒಂದು ಕೆಟ್ಟ ಅಡಳಿತದಿಂದ ಈ ಕಪ್ಪು ಹಣ ದೇಶದಲ್ಲಿ ಇರುವುದಕ್ಕೆ ಕಾರಣವಾಗಿದೆ.

ಉಪಾಧ್ಯಕ್ಷರು.—ತಾವು ಹೇಳತಕ್ಕಂಥ ಅಂಶಗಳು ಈ ಬಿಲ್‌ನಲ್ಲಿ ಬರುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಇದನ್ನು ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಒಂದು ದೇಶದಲ್ಲಿ ಕೇವಲ ಭೂ ಪರಿಮಿತಿಯನ್ನು ಜಾರಿಗೆ ತರುವುದರಿಂದಲಾಗಲೀ ಅಥವಾ ಅದರ ಬಗ್ಗೆ ಮಾತ್ರ ಚರ್ಚೆ ಮಾಡುವುದರಿಂದಲಾಗಲೀ ಆರ್ಥಿಕ ಪ್ರಗತಿಯಾಗುವುದಿಲ್ಲ. ಉದಾಹರಣೆಗಾಗಿ ಹೇಳುವುದಾದರೆ, ಇಂದು ದೇಶದಲ್ಲಿರತಕ್ಕಂಥ 9 ಸಾವಿರ ಕೋಟಿ ರೂಪಾಯಿಗಳ ಕಪ್ಪುಹಣ ತಾತಾ, ಬಿರ್ಲಾ ಮುಂತಾದ ಕೆಲವೇ ಜನ ಬಂಡವಾಳಷಾಹಿಗಳ ಕೈಯಲ್ಲಿರುವುದರಿಂದ, ಆರ್ಥಿಕ ನೀತಿಯ ತೂಕ ಸರಿಸಮಾನವಾಗಿ ಬಾರದೆ, ಅದು ಏರುಪೇರಾಗುತ್ತಿದೆ. ಇಂದು ದೇಶದಲ್ಲಿರತಕ್ಕಂಥ ದೊಡ್ಡ ದೊಡ್ಡ ಪ್ಲಾನ್‌ಟೇಷನ್‌ಗಳು ಕೆಲವೇ ಜನ ಬಂಡವಾಳಷಾಹಿಗಳ ಕೈಯಲ್ಲ ಇದ್ದರೂ ಸಹ, ಅವುಗಳನ್ನು ಈ ಭೂಪರಿಮಿತಿಯ ಒಳಗೆ ಸೇರಿಸದೆ, ಹೊರಗೆ ಇಟ್ಟಿದ್ದಾರೆ. ಈ ರೀತಿ ಹೊರಗೆ ಇಟ್ಟಿರುವುದರಿಂದ ಸಮಾಜವಾದ ಈ ದೇಶದಲ್ಲಿ ಬರುವುದಕ್ಕೆ ಸಾಧ್ಯವೇ ಎಂದು ಕೇಳುತ್ತೇನೆ. ಈ ಭೂಸುಧಾರಣೆಯ ಜೊತೆಯಲ್ಲಿಯೇ ನಗರಾಸ್ತಿಯ ಮೇಲೂ ಸಹ ಮಿತಿ ತರಬೇಕು. ಇಲ್ಲದಿದ್ದರೆ ತಕ್ಕಡಿ ಏರುಪೇರಾಗುತ್ತದೆ. ಭೂಮಿತಿಯ ಮೇಲೆ ನಿಯಂತ್ರಣ ತರುವುದರ ಮೂಲಕ ಈಗಿರ ತಕ್ಕಂಥ ಅಸಮಾನತೆಯನ್ನು ಹೋಗಲಾಡಿಸುತ್ತೇವೆಂದು ಸರ್ಕಾರದವರು ಹೇಳಿದರೆ, ಅದು ತಪ್ಪಾಗುತ್ತದೆ. ಆ ರೀತಿ ಏನಂದರೂ ಅಸಮಾನತೆಯನ್ನು ಹೋಗಲಾಡಿಸುವುದಿದ್ದರೆ, ಶೇಕಡ 55ರಿಂದ 60 ಪರ್‌ಸೆಂಟ್‌ವರಿಗೆ ಭೂಪರಿಮಿತಿಯನ್ನು ಕಡಿಮೆ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಸರ್ಕಾರದವರಿಗೆ ಹೆಚ್ಚು ಜಮೀನು ಹಂಚಿಕೆ ಮಾಡಲು ಸಿಕ್ಕುವುದಿಲ್ಲ. 100 ಎಕರೆ200 ಎಕರೆ ಜಮೀನು ಇದ್ದರೆ ಹೆಚ್ಚು ಉತ್ಪಾದನೆಯಾಗುತ್ತದೆ, ಕಡಿಮೆ ಹಿಡುವಳಿ ಇದ್ದರೆ ಉತ್ಪಾದನೆ ಜಾಸ್ತಿಯಾಗುವುದಿಲ್ಲವೆಂದು ಕೆಲವರು ಹೇಳಬಹುದು. ಆದರೆ ಈಗ ಶ್ರೀಮಾನ್ ಚನ್ನಬಸಪ್ಪನವರು ಕೋ-ಆಪರೇಟಿವ್ ಫಾರ್ಮಿಂಗ್ ರೂಪದಲ್ಲಿ ಹತ್ತಿರ ಹತ್ತಿರ 400 ಎಕರೆಯವರೆಗೆ ಜಮೀನು ಇಟ್ಟುಕೊಂಡಿದ್ದಾರೆ. ಮತ್ತೆ ಕೆಲವರು ಇತರರ ಹೆಸರಿನಲ್ಲಿ ನೂರಾರು ಎಕರೆ ಜಮೀನು ಇಟ್ಟುಕೊಂಡಿರುವವರು ಇದ್ದಾರೆ. ಈ ರೀತಿ ಜಾಸ್ತಿ ಹಿಡುವಳಿ ಇದ್ದೂ ಕೂಡ ಆಹಾರಧಾನ್ಯ ಗಳನ್ನು ಹೆಚ್ಚಾಗಿ ಏತಕ್ಕೆ ಬೆಳೆಯಲಿಲ್ಲ ಎಂದು ನಾನು ಕೇಳುತ್ತೇನೆ. ಅದಕ್ಕೆ ಸರ್ಕಾರದವರು ಉತ್ತರ ಕೊಡಲಿ. ಆ ರೀತಿ ಒಳೆದಿದ್ದರೆ ರಷ್ಯಾ, ಅಮೆರಿಕಾ ದೇಶಗಳಿಂದ ಗೋಧಿ, ಅಕ್ಕಿಯನ್ನು ಏತಕ್ಕೆ ತರಿಸಬೇಕಾಗಿತ್ತು; ಹಾಲಿನಪುಡಿ ಮೊದಲುಗೊಂಡು ಯಾವ ಯಾವ ದೇಶಗಳಲ್ಲಿ ಏನೇನು ಸಿಗುತ್ತದೋ ಅದೆಲ್ಲವನ್ನೂ ತಂದೂ ತಂದೂ ನಾವು ಇಲ್ಲಿಯವರೆಗೆ ತಿಂದು ಹಾಕಿದ್ದಾಯಿತು. ಸಾಲ ಮಾಡಿದ್ದಾಯಿತು. ಈ ದೃಷ್ಟಿಯಿಂದ ನಾನು ಹೇಳುತ್ತಿರುವುದೇನೆಂದರೆ, ಭೂಪರಿಮಿತಿ ಜಾಸ್ತಿ ಇದ್ದರೆ ಆಹಾರಧಾನ್ಯವನ್ನು ಹೆಚ್ಚು ಬೆಳೆಯಬಹುದು ಎಂದು ಹೇಳುವುದು

ತಪ್ಪಾಗುತ್ತದೆ. ಅದು ಸತ್ಯಕ್ಕೆ ದೂರವಾದ ಮಾತಾಗುತ್ತದೆ. ಆದಕಾರಣ ಇಲ್ಲಿಯವರೆಗೆ ನಡೆದು ಕೊಂಡ ಬಂದಿರುವ ಪದ್ಧತಿ ಏನೆನೆ, ಅದನ್ನು ಒಂದು ಸಲ ಬದಲಾವಣೆ ಮಾಡಿ ನೋಡೋಣ. ಭೂಪರಿಮಿತಿಯನ್ನು ಆದಷ್ಟೂ ಕಡಿಮೆ ಮಾಡಿ, ಯಾರು ಯಾರು ಬಡವರು ಜಮೀನನ್ನು ಬೇಕೆಂದು ಕೇಳುತ್ತಿದ್ದಾರೋ ಅವರಿಗೆಲ್ಲಾ ಕೊಟ್ಟು ನೋಡೋಣ. ಅವರಿಗೂ ಒಂದು ಅವಕಾಶ ಮಾಡಿಕೊಡೋಣ. ಆಹಾರಧಾನ್ಯದ ಬೆಲೆಗಳು ಜಾಸ್ತಿಯಾಗಿರಬಹುದು. ಆದಕ್ಕಾಗಿ ಇದನ್ನು ಪ್ರಗತಿಪರವಾಗಿ ಕಡಿಮೆ ಮಾಡೋಣ. ನಮಗೆಲ್ಲಾ ತಿಳಿದಹಾಗೆ ಜಪಾನ್ ದೇಶ ಎಷ್ಟು ಚಿಕ್ಕದು ಎನ್ನುವುದು ಗೊತ್ತಿದೆ. ಎರಡನೇ ಮಹಾಯುದ್ಧವಾದ ಮೇಲೆ ಜಪಾನ್ ದೇಶ ಬಹಳ ಕಷ್ಟಕ್ಕೆ ಸಿಕ್ಕಿ ಬೆಂಗಾಡಾಗಿತ್ತು. ಅಂತಹ ಜಪಾನ್ ದೇಶ ಇಂದು ಬಹು ಬೇಗನೆ ತಮ್ಮಲ್ಲಿದ್ದ ಯಾಂತ್ರಿಕ ಶಕ್ತಿಗಳನ್ನೆಲ್ಲಾ ಉಪಯೋಗಿಸಿಕೊಂಡು ಇಂದು ವ್ಯವಸಾಯದಲ್ಲಿ ಬಹಳ ಮುಂದುವರಿದಿದ್ದಾರೆ, ಅಲ್ಲಿ ಇರುವ ಭೂ ಪರಿಮಿತಿ ನೋಡಿದರೆ ಸುಮಾರು ಐದು ಎಕರೆಗಿಂತಲೂ ಕಡಿಮೆ ಇದೆ ಎಂದು ಕಾಣುತ್ತದೆ. ನನಗೆ ತಿಳಿದಿರುವಂತೆ ಅವರು ಮೂರು ಬೆಳೆಯನ್ನು ಒಂದು ಸಾಲಿನಲ್ಲಿ ತೆಗೆಯುತ್ತಿದ್ದಾರೆಂದು ಕೇಳುತ್ತೇವೆ. ಇದರ ಅರ್ಥ ಒಂದು ಕುಟುಂಬದ ಪರಿಮಿತಿ ಸುಮಾರು ನಾಲ್ಕು ಎಕರೆಗಳು ಎಂದು ಇದ್ದ ಪಕ್ಷದಲ್ಲಿ ಒಂದು ಎಕರೆಗೆ ಮೂರು ಬೆಳೆಯಂತೆ ಮಾಡಿದರೆ ನಾಲ್ಕು ಎಕರೆಗಳಿಗೂ ಸುಮಾರು ಎಷ್ಟು ಕ್ವಿಂಟಾಲ್‌ಗಳಷ್ಟು ಬೆಳೆ ಬರಬಹುದು ಎನ್ನುವುದನ್ನು ನಾವು ಲೆಕ್ಕ ಮಾಡಿ ನೋಡಿದರೆ ಜಪಾನ್ ದೇಶ ಇಂದು ಬಹಳ ಚೆನ್ನಾಗಿ ವ್ಯವಸಾಯ ಮಾಡಿ ಮುಂದಕ್ಕೆ ಬರುತ್ತದೆ ಮತ್ತು ಆ ದೇಶ ಪ್ರಗತಿಯನ್ನು ಸಾಧ್ಯ ಮಾಡುತ್ತಿದೆ. ಇದೂ ಕೂಡ ಎರಡನೇ ಮಹಾಯುದ್ಧವಾದ ಮೇಲೆ ಇಷ್ಟು ಪ್ರಗತಿಯನ್ನು ಬಹಳ ಕಡಿಮೆ ದಿವಸಗಳಲ್ಲೇ ಸಾಧನೆ ಮಾಡಿದೆ. ಇಲ್ಲಿ ನೀರಾವರಿ ಮಾಡಲು ಸಾಕಷ್ಟು ಮಳೆ ಬಾರದಿದ್ದರೂ ಇರುವ ತಾಂತ್ರಿಕ ಸಾಧನಗಳನ್ನೆಲ್ಲಾ ಉಪಯೋಗ ಮಾಡಿಕೊಂಡು ಇಲ್ಲಿನ ಬೇಸಾಯ ಪದ್ಧತಿಯನ್ನು ಬಹಳ ಚೆನ್ನಾಗಿ ಮಾಡುತ್ತಿದ್ದಾರೆ. ಯಾವ ರೀತಿ ಇಲ್ಲಿ ಪ್ರಗತಿಸಾಧನೆ ಮಾಡಿದರು ಎನ್ನುವುದಕ್ಕೆ ಬೇಕಾದರೆ ಆಮೇಲೆ ಸ್ಪಷ್ಟವಾದ ಕಾರಣಗಳನ್ನು ಕೊಡುತ್ತೇನೆ. ಇದಕ್ಕಾಗಿ ನಾನು ಇಲ್ಲಿ ಸ್ಪಷ್ಟವಾಗಿ ಹೇಳುವುದು ನೀರಾವರಿ ಸೌಲಭ್ಯಗಳನ್ನು ಪಯೋಗಿಸಿಕೊಂಡು ಇಲ್ಲಿ ಯಾಂತ್ರಿಕವಾದ ಬೇಸಾಯ ಪದ್ಧತಿಯನ್ನು ಮಾಡಿಕೊಳ್ಳುವುದಕ್ಕೆ ಮುಂಚೆ ಇಲ್ಲಿ ತಂದಿರವ ಹತ್ತು ಎಕರೆಗಳ ಸೀಲಿಂಗು ಲಿಮಿಟ್ಟು ಬಹಳ ಹೆಚ್ಚು ಎಂದು ನನ್ನ ಭಾವನೆ. ಇವನ್ನೇಕೆ ತಾವು ಐದು ಎಕರೆಗಳೆಂದು ಮಾಡಬಾರದು. ನಮಗೆ ಐದು ಎಕರೆಗಳ ಸೀಲಿಂಗು ಎಂದು ಇದ್ದರೆ ಅದು ಸಾಕು. ಹತ್ತು ಎಕರೆ ಎಂದೇಕಿರಬೇಕು ? ಇದು ಟೂ ಅನ್‌ವೀಲ್ಡಿಯಾಗುತ್ತದೆ. ಇದನ್ನು ಕಿತ್ತು ಹಾಕಿ ಐದು ಎಕರೆಗಳಷ್ಟು ಇದರ ಮಿತಿಯನ್ನು ಮಾಡಲು ನಾವು ಅನುವು ಮಾಡಿಕೊಡೋಣ.

4-30 P.M.

ಶ್ರೀ ಬಾಪೂಗೌಡ ರಾಯಪ್ಪ.—ಮಾನ್ಯ ಸದಸ್ಯರು ಹೇಳುವ ಪ್ರಕಾರ ಐದು ಎಕರೆ ಭೂಮಿಗೆ ಎಷ್ಟು ಖರ್ಚು ವ್ಯವಸಾಯ ಮಾಡುವಾಗ ಬರುತ್ತದೆ ಮತ್ತು ಎಷ್ಟು ಆದಾಯ ಬರುತ್ತದೆ ಅದರ ಲೆಕ್ಕಗಳನ್ನೂ ಗಮನದಲ್ಲಿಟ್ಟು ಹೇಳುತ್ತಿದ್ದೀರಾ ?

ಶ್ರೀ ಎಸ್. ಬಂಗಾರಪ್ಪ.—ನನ್ನ ಅಭಿಪ್ರಾಯದ ಪ್ರಕಾರ ತಮ್ಮ ಪ್ರಶ್ನೆಗೆ ಬೇಕಾದರೆ ಎಲ್ಲ ವಿವರಗಳನ್ನೂ ಕೊಡುತ್ತೇನೆ. ಆದರೆ ಇದರ ಬಗ್ಗೆ ಇಲ್ಲಿ ಹೇಳಲು ಕಾಲಾವಕಾಶ ಕಡಿಮೆ ಇರುವುದರಿಂದ ಇದರ ವಿವರಗಳಿಗೆ ಹೋಗುತ್ತಿಲ್ಲ. ನನ್ನ ಭಾವನೆ ಪ್ರಕಾರ ರೈತರಿಗೆ ಷೆಡ್ಯೂಲು ಬ್ಯಾಂಕುಗಳಿಂದ ಸಾಲ ಸಿಗುತ್ತದೆ ಹಾಗೂ ಗೊಬ್ಬರ ಇತ್ಯಾದಿ ಸಹಾಯಗಳು ಸಿಗುತ್ತಿವೆ. ಇದನ್ನು ಚರ್ಚೆ ಮಾಡುವಾಗ ಇಲ್ಲಿ ಒಂದು ಪ್ರಶ್ನೆ ಬಂದಿರುವುದು ಇದರಲ್ಲಿ ಹತ್ತು ಎಕರೆ ಎಂದು ಮಿತಿ ಇರುವುದಕ್ಕಿಂತ ಐದು ಎಕರೆಗಳಷ್ಟು ಮಿತಿ ಸಾಕು. ಇದಕ್ಕೆ ಬೇರೆ ರೀತಿಯಾದ ಎಲ್ಲ ಸೌಲಭ್ಯಗಳೂ ನಮಗೆ ಸಿಗುತ್ತವೆ. ಇದಕ್ಕೆ ಬೇಕಾಗುವ ಟ್ರಾಕ್ಟರುಗಳು ಹಾಗೂ ಇನ್ನಿತರ ಸೌಕರ್ಯಗಳನ್ನು ಕಡಿಮೆ ದರದಲ್ಲಿ ರೈತರಿಗೆ ಒದಗಿಸಿ ಕೊಟ್ಟರೆ ಅವರು ಒಂದಕ್ಕೆ ಎರಡರಷ್ಟು ಬೆಳೆ ಮಾಡಲು ಅವಕಾಶ ಸಿಗುತ್ತದೆ. ಇಂತಹ ಯಾಂತ್ರಿಕ ಸೌಲಭ್ಯಗಳನ್ನು ಕೊಡುವುದರಿಂದ ಸೀಲಿಂಗು ಲಿಮಿಟ್ಟನ್ನು ಐದು ಎಕರೆಗಳಿದ್ದರೆ ಸಾಕು. ಇದನ್ನು ಇನ್ನೂ ಹೆಚ್ಚು ಮಾಡಬೇಕು ಎನ್ನುವ ವಾದ ಇಂದು ಇಲ್ಲಿ ಕಾಣಬರುತ್ತಿದೆ.

ಭೂಸುಧಾರಣೆ ಕಾನೂನು ಮಾಡಿ ತರುವುದರಲ್ಲಿ ಒಂದು ಅನ್ಯಾಯವಾಗಿಹೋಯಿತು. ಶ್ರೀ ನೆಹರೂರವರು ಇದ್ದ ಕಾಲದಲ್ಲೇ ಈ ಭೂಸುಧಾರಣೆ ಕಾನೂನನ್ನು ತರಬೇಕು ಎನ್ನುವ ಚರ್ಚೆ ದೇಶದಲ್ಲೆಲ್ಲಾ ನಡೆಯಿತು. ಇದಕ್ಕೆ ಮೊದಲು ಎಂದರೆ ಸುಮಾರು 1924 ರಲ್ಲಿ ಎಂದು ತೋರುತ್ತೆ, ಮಹಾತ್ಮಗಾಂಧಿಯವರು ಅವರೇ ಮಾಡಿದ ಕಾಂಗ್ರೆಸ್ಸು ಪಕ್ಷದವರ ಒಂದು

(ಶ್ರೀ ಎಸ್. ಬಂಗಾರಪ್ಪ)

ನಮ್ಮೆಳನವನ್ನು ಕೂಡಿಸಿ ರೈತಾಪಿ ಜನರ ಸಂರಕ್ಷಣೆ ಮಾಡಬೇಕು ಅದಕ್ಕೆ ತಕ್ಕ ಪಾಲಸಿಯನ್ನು ಅನುಸರಿಸಬೇಕು ಎಂದು ಆಗಿನಿಂದಲೇ ಹೇಳುತ್ತಾ ಬಂದಿದ್ದರು ಮತ್ತು ಇದನ್ನು ಕಾಂಗ್ರೆಸ್ಸು ಪಕ್ಷದವರೂ ತೀರ್ಮಾನ ಮಾಡಿ ತರಲು ಒಪ್ಪಿದ್ದರು. ಆದರೆ ಆಗಲೇ ಈ ಭೂಸುಧಾರಣೆ ತಂದಿದ್ದರೆ ಅದಕ್ಕೆ ಯಾರೂ ವಿರೋಧ ಮಾಡುತ್ತಿರಲಿಲ್ಲ, ಆದರೆ ಆಗ ಇದ್ದ ಭೂಸ್ವಾಮಿಗಳನ್ನು ರಕ್ಷಿಸ ಬೇಕೆಂದು ಭೂಸುಧಾರಣೆ ಕಾನೂನನ್ನು ಸುಧಾರಿಸಿ ತರಲು ಆಗಲಿಲ್ಲ. ರೈತರ ಹೆಸರಿನಲ್ಲಿ, ಬಡವರ ಹೆಸರಿನಲ್ಲಿ ಭೂಸುಧಾರಣೆ ಮಾಡುತ್ತೇವೆಂದು ಹೇಳಿ ಎಲ್ಲ ಜನರಲ್ಲಿಯೂ ಒಂದು ರೀತಿಯಾದ ನಂಬಿಕೆ ಹುಟ್ಟಿಸಿ ಇಂದು ಒಂದು ರೀತಿಯಾದ ಕಾನೂನನ್ನು ತಂದು ಸರಕಾರ ಜನರು ಕೊಟ್ಟ ಭರವಸೆಗೆ ತಪ್ಪಿ ಇಂದು ಅಧಿಕಾರವನ್ನು ಸಮರ್ಪಕವಾಗಿ ಉಪಯೋಗ ಮಾಡದೇ ದುರುಪಯೋಗ ಮಾಡಿದೆ. ಇದು ಹಲವಾರು ವರ್ಷಗಳಿಂದಲೂ ನಡೆದುಕೊಂಡು ಬರುತ್ತಿದೆ. ನನಗನಿಸುವುದು ದಿವಗಂತ ಶ್ರೀ ನೆಹರೂರವರು ಇಂಡಿಯಾ ದೇಶದ ಡೆವಲಪ್‌ಮೆಂಟ್ ಕಡೆಗೆ ಎಷ್ಟು ಗಮನ ಕೊಟ್ಟರೋ ಅಷ್ಟೇ ಗಮನವನ್ನು ಇಂತಹ ರೈತಾಪಿ ಜನರ ರಕ್ಷಣೆಗೆ ಕೊಟ್ಟಿದ್ದರೆ ಬಹಳ ಒಳ್ಳೆಯ ದಾಗುತ್ತಿತ್ತು. ಶ್ರೀ ವೀರೇಂದ್ರ ಪಾಟೀಲರವರ ಸರಕಾರದಲ್ಲಿ ತಂದು ಇಟ್ಟ ಭೂಸುಧಾರಣಾ ಕಾನೂನು ಹಿಂದೆ ಕಾಂಗ್ರೆಸ್ಸು ಪಕ್ಷದಲ್ಲಿ ಜನರಿಗೆ ಭರವಸೆ ಕೊಟ್ಟಂತೆ ಇಡೀ ಜನಕ್ಕೆ ಅನುಕೂಲ ವಾಗುವಂತೆ ಇಲ್ಲ ಕಾನೂನು ತಂದಿದ್ದಾರೆ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ, ಪ್ರಾಯೋಗಿಕವಾಗಿ ಕಾಂಗ್ರೆಸ್ಸು ಇಂದು ಇಭ್ಭಾಗವಾಗಿ ಎರಡು ಪಕ್ಷದವರಾಗಿದ್ದರೂ ಇಬ್ಬರೂ ಕಾಂಗ್ರೆಸ್ಸು ಪಕ್ಷಕ್ಕೆ ಸೇರಿದವರಾಗಿರುವುದರಿಂದ ಇಲ್ಲಿ ನಾನು ಬರೀ ಕಾಂಗ್ರೆಸ್ಸು ಪಕ್ಷ ಎನ್ನುವ ಪದವನ್ನು ಮಾತ್ರ ಉಪಯೋಗಿಸುತ್ತೇನೆ. ಎರಡು ಕಾಂಗ್ರೆಸ್ಸೂ ಒಂದೇ. ಶ್ರೀ ವೀರೇಂದ್ರ ಪಾಟೀಲರವರ ಸರಕಾರ ಕೂಡ ಒಂದು ಪ್ರೊಗ್ರೆಸಿವ್ ಲ್ಯಾಂಡು ರೆಫಿಸ್ಲೇಷನ್ ತರುತ್ತೇವೆಂದು ಹೊರಟ್ಟಿದ್ದರೂ ಅವರೂ ಕೂಡ ಒಂದು ಸುಧಾರಣೆ ತಂದರು ಅದರಂತೆ ನಾವು ಈ ಸಭೆಯ ಮುಂದೆ ಸುಮಾರು 1967ರಿಂದಲೂ ಒಂದಲ್ಲ ಒಂದು ರೀತಿಯಲ್ಲಿ ಭೂಸುಧಾರಣೆಯ ತಿದ್ದುಪಡಿ ಕಾನೂನು ಬರುತ್ತಲೇ ಇದೆ. ಹಿಂದೆ ವೀರೇಂದ್ರ ಪಾಟೀಲರ ಸರಕಾರ ಇಂತಹ ಕಾನೂನು ತಂದಾಗಲೂ ಕೂಡ ನಾವು ಅದನ್ನು ಖಂಡ ತುಂಡವಾಗಿ ವಿರೋಧ ಮಾಡಿದ್ದೇವೆ. ಶ್ರೀಮಾನ್ ವೀರೇಂದ್ರ ಪಾಟೀಲ ರವರು, ಶ್ರೀ ನಿಜಲಿಂಗಪ್ಪನವರು ಅದಕ್ಕೆ ಹಿಂದೆ ಶ್ರೀ ಜತ್ತಿಯವರ ಸರಕಾರ ಎಂದು ಕಾಣುತ್ತೆ ಹೀಗೆ ಯಾರೇ ಮುಖಂಡತ್ವದಲ್ಲಿ ಇಂತಹ ಒಂದು ಭೂಸುಧಾರಣೆ ಕಾನೂನು ಬಂದಾಗಲೂ ನಾವು ಈ ಕಾನೂನನ್ನು ಟೀಕೆ ಮಾಡುತ್ತಲೇ ಇದ್ದೇವೆ. ಆದರೂ ಇಲ್ಲ ಇಂತಹ ಒಂದು ಕಾನೂನು ಸರಿಯಾಗಿ ಬರಲು ಆಗಲಲ್ಲ ಜನತೆಯ ದೃಷ್ಟಿಯಿಂದ ಸಾಮಾನ್ಯ ಜನರ ದೃಷ್ಟಿಯಿಂದ ಸರಿಯಾದ ಹಾಗೂ ಪ್ರಗತಿಪರವಾದ ಭೂಸುಧಾರಣೆ ಕಾನೂನನ್ನು ನಿಮ್ಮಿಂದ ತರಲು ಆಗಲಲ್ಲ. ನಿಮ್ಮಲ್ಲೇನೋ ಸಾಕಷ್ಟು ಸುಧಾರಣೆಗಳು ಬಂದಿವೆ. ಹಿಂದೆ ವೀರೇಂದ್ರ ಪಾಟೀಲರ ಸರ್ಕಾರದಲ್ಲಿ ಕೂಡ ಇದು ಬದಲಾವಣೆಯಾಗಲಲ್ಲ, ಅದೇ ಕಾನೂನು ಬೇರೆ ರೀತಿಯಲ್ಲಿ ಇಲ್ಲಿ ಈಗ ಬಂದಿದೆ. ಹಿಂದೆ ರಾಜಕೀಯ ಅನ್ಯಾಯಗಳು ವೀರೇಂದ್ರ ಪಾಟೀಲರವರ ಸರಕಾರದಲ್ಲಿ ಎಷ್ಟು ಆಗಿದ್ದವೋ ಅದೇ ಗೊಂದಲಗಳಿಂದ ಇಂದು ಸರಕಾರ ಪಟ್ಟು ಹಿಡಿದು ಯಾವ ಬದಲಾವಣೆಯನ್ನೂ ಮಾಡದೇ ಸುಮ್ಮನೆ ಒಂದು ರೀತಿಯಾದ ಕಾನೂನು ತರುತ್ತಿದ್ದಾರೆ ಎಂದು ನನ್ನ ಭಾವನೆ. ಇದು ಸಹ ಸರಿಯಾಗಿಲ್ಲ. ಶ್ರೀ ನಿಜಲಿಂಗಪ್ಪನವರ ಕಾಲದಿಂದ ಹಿಡಿದು ಇಲ್ಲಿಯವರೆಗೆ ತಂದಿರುವ ಭೂಸುಧಾರಣೆ ಒಂದೇ ರೀತಿಯಾಗಿದ್ದರೂ ಇದರಲ್ಲಿ ನೀವು ಏನು ಮಾಡಿದ್ದೀರಿ ಎಂದರೆ 16 ಕಿಲೋಮೀಟರು ದೂರದೊಳಗೆ ಇರುವ ರೈತರಿಗೆ ಮಾತ್ರ ಎಂದು ಹೇಳಿದ್ದೀರಿ. ಇದು ನಿಮ್ಮ ಸಮಾಜವಾದ ಎಂದು ನನಗನಿಸುತ್ತೆ. ಏತಕ್ಕೋಸ್ಕರ ಪುನಃ ಇದನ್ನು ಇಲ್ಲ ತಂದು ಹೇಳುತ್ತಿದ್ದಾರೆಂದರೆ ಇದರ ಬಗ್ಗೆ ಆಡಳಿತದ ದುರುಪಯೋಗವಾಗುತ್ತದೆ ಮತ್ತು ರಾಜಕೀಯ ಕ್ಕೆವಾಡ ಇದೆ ಎನ್ನುವುದನ್ನು ತೋರಿಸ ಬೇಕಾಗಿ ಇಲ್ಲ ನಮಾಜವಾದದ ಮಾತನ್ನು ತಿಳಿಸಿ ಇದು ಪ್ರಗತಿಪರವಾದ ಸುಧಾರಣೆ ಎಂದರೂ ಇದರಿಂದ ಬಡವರಿಗೆ ಯಾವ ಅನುಕೂಲವೂ ಆಗುವುದಿಲ್ಲ. ನಿಮ್ಮ ನೀತಿ ಪ್ರಗತಿಪರವಾಗಬೇಕಾಗಿದ್ದರೆ ವೀರೇಂದ್ರ ಪಾಟೀಲರವರ ಸರಕಾರಕ್ಕಿಂತ ಒಂದು ಒಳ್ಳೆಯ ಆಡಳಿತ ತಂದಿದ್ದೇವೆ. ಅದಕ್ಕನುಸಾರವಾಗಿ ಇಲ್ಲ ಭೂಸುಧಾರಣೆ ತಂದಿದ್ದೇವೆ ಎಂದು ಹೇಳಿ ಇದರಲ್ಲಿ ರಾಜಕೀಯ ಮಾಡಲು ಏಕೆ ಹೋಗುತ್ತೀರಿ ? ಬಾಯಲ್ಲಿ ಬರೀ ಸುಧಾರಣೆ ಮಾಡುತ್ತೇವೆಂದು ಹೇಳಿ ಇದರಲ್ಲಿ ಎರಡು ಮೂರು ಕಲಂಗಳನ್ನು ತಿದ್ದುಪಡಿ ಮಾಡಿ ಒಂದರಲ್ಲಿ ಹತ್ತು ಎಕರೆ ಮಿತಿ ಇರಬೇಕು ಎಂದು ಇನ್ನೊಂದರಲ್ಲಿ 16 ಕಿಲೋ ಮೀಟರುಗಳ ದೂರದಲ್ಲಿರಬೇಕು ಎಂದು ಮತ್ತು ನರೆಂದರು ಮಾಡುವಾಗ ಒಂದು ರೀತಿ ಇರಬೇಕು ಎಂದು ಇದರಲ್ಲಿರುವ ಕಾನೂನಿಗೆ ತೇಪೆ ಹಾಕಿ ಇಲ್ಲ ತಂದಿದ್ದೀರಿ. ನಿಮ್ಮ ಭೂಸುಧಾರಣೆಯ ನೆಪದಲ್ಲಿ ಭೂ ಒಡೆಯರ ಕೈಕೆಳಗೆ ಇರು ವಂತಹ ಪರಿಸ್ಥಿತಿಯಲ್ಲಿ ನೀವು ಇದ್ದೀರಿ ಎನ್ನುವುದು ಈ ಮಸುದೆಯಲ್ಲಿ ಸ್ಪಷ್ಟವಾಗಿ ಕಾಣುತ್ತದೆ.

[Chairman (SMT. SUMATI MADIMAN) in the Chair.]

ಆದುದರಿಂದ ಇಂದು ಭೂಸ್ವಾಮ್ಯವಿರತಕ್ಕ ಒಂದು ಪಂಗಡ, ಒಂದು ವರ್ಗ ಈ ದೇಶದಲ್ಲಿ ಏನಿವೆ ಈ ವರ್ಗದ ಪರವಾಗಿ ಪುನಃ ಹಿಂಬಾಗಿಲಿನಿಂದ ಸಹಾಯ ಮಾಡತಕ್ಕ ಅಭಿಪ್ರಾಯ ಈ ಭೂಸುಧಾರಣಾ ಮಸೂದೆಯಲ್ಲಿ ಸ್ಪಷ್ಟವಾಗಿ ಗೋಚರ ಮಾಡಿದ್ದಾರೆ. ಕುಟುಂಬಕ್ಕೆ ಸಂಬಂಧಿಸಿದಂತೆ ಇರುವ ವಿವರಣೆಯೇ ಇದಕ್ಕೆ ಸಾಕ್ಷಿ.

ಮಾನ್ಯ ಅಧ್ಯಕ್ಷರೇ, ಭೂಸುಧಾರಣಾ ಮಸೂದೆಯಲ್ಲಿ ಈ ರೀತಿಯ ಕಲಮುಗಳನ್ನು ತಂದಿರುವುದರಿಂದ ಇದು ನಿಜವಾದ ಭೂಸುಧಾರಣೆಯಾಗುತ್ತದೆಯೇ ಎಂದು ನೋಡಿದರೆ, ನನಗನ್ನಿಸುತ್ತದೆ, ಈ ಭೂಸುಧಾರಣಾ ಮಸೂದೆಯಿಂದ ಸಂಪೂರ್ಣ ಉಪಯೋಗ ಯಾವ ರೈತ ವರ್ಗ ಹೆಲವಾರು ವರ್ಷಗಳಿಂದ ನಿರೀಕ್ಷೆ ಮಾಡಿತ್ತು, ಕಳೆದ ಚುನಾವಣೆಯಲ್ಲಿ ತಮ್ಮ ಭಾಷಣವನ್ನು ನಂಬಿದ್ದರು, ಪ್ರಗತಿಪರ ಭೂಸುಧಾರಣೆಯನ್ನು ತರುತ್ತೇವೆ ಎನ್ನುವ ನಂಬಿಕೆಯನ್ನು ಹುಟ್ಟಿಸಿದ್ದಿರಿ. ಅದಕ್ಕೆ ಕಂಟಕಪ್ರಾಯವಾಗಿ ಈ ಭೂಸುಧಾರಣಾ ತಿದ್ದುಪಡಿ ಮಸೂದೆ ಆಗಿದೆ ಎಂದು ಗೋಚರವಾಗುತ್ತದೆ.

ನಾನು ಇನ್ನೊಂದುಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಹೊತ್ತು ಶ್ರೀಮಾನ್ ವೀರಣ್ಣ ಗೌಡರವರ ಮುಖಂಡತ್ವದಲ್ಲಿ ಕಡಿದಾಳ್ ಮಂಜಪ್ಪನವರು, ಎಚ್. ಎಸ್. ರುದ್ರಪ್ಪನವರು ಎಲ್ಲರೂ ಮಾಜಿ ಮಂತ್ರಿಗಳು ಮತ್ತು ಮಾಜಿ ಮುಖ್ಯ ಮಂತ್ರಿಗಳು, ಹೆಚ್ಚು ಭೂಮಿತಿಯನ್ನು ಹೆಚ್ಚು ಮಾಡಬೇಕೆನ್ನುವ ಬಗ್ಗೆ ಚಳುವಳಿ ಮಾಡುತ್ತಿದ್ದಾರೆ. ಈ ಮಸೂದೆಯನ್ನು ಮುಂದನೆ ಮಾಡಿದ ಮೇರೆ ಆಳುವ ಪಕ್ಷದಲ್ಲಿಯೇ ಅಭಿಪ್ರಾಯ ಭೇದಗಳಿವೆ. ಅವರಾದರೂ ಒಗ್ಗಟ್ಟಿನಿಂದ ಇದನ್ನು ತಂದಿದ್ದಾರೆ ಎಂದಿದ್ದರೆ ಸಂತೋಷಪಡಬೇಕಾದ ವಿಷಯವೆಂದು ನಾನು ಅಂದುಕೊಳ್ಳುತ್ತಿದ್ದೆ. ಆದರೆ ಆಳುವ ಪಕ್ಷದಲ್ಲಿಯೇ ಇದರಲ್ಲಿರುವ ಕೆಲವು ಕಲಮುಗಳನ್ನು ವಿರೋಧ ಮಾಡತಕ್ಕ ಪರಿಸ್ಥಿತಿ ಇರಬೇಕಾದರೆ ಎಂಥ ಭೂಸುಧಾರಣೆಯನ್ನು ತಂದಿದ್ದಾರೆ ಎಂದು ಹೇಳಬೇಕಾಗುತ್ತದೆ. ಎ.ಐ.ಸಿ.ಸಿ. ಆದೇಶದ ಪ್ರಕಾರ 1972ರ ಡಿಸೆಂಬರ್ ಅಂತ್ಯದೊಳಗೆ ಎಲ್ಲ ರಾಜ್ಯಗಳಲ್ಲಿಯೂ, ಕಾಂಗ್ರೆಸ್ (ಆರ್) ಸರ್ಕಾರಗಳು ಎಲ್ಲೆಲ್ಲಿವೆ ಅಲ್ಲೆಲ್ಲ ಭೂ ಸುಧಾರಣಾ ಮಸೂದೆಯನ್ನು ಜಾರಿಗೆ ತರಬೇಕು, ಪ್ರಗತಿಪರ ಭೂಸುಧಾರಣಾ ಮಸೂದೆಯನ್ನು ಪಾಸು ಮಾಡಬೇಕು, ಜಾರಿಗೆ ಕೊಡಬೇಕು ಎನ್ನುವ ಕಾರ್ಯಕ್ರಮ ಎಲ್ಲಿ ಹೋಯಿತು ಎಂದು ಕೇಳುತ್ತೇನೆ. ಈಗಾಗಲೇ ಜಾಯಿಂಟ್ ಸೆಲೆಕ್ಟ್ ಸಮಿತಿಗೆ ಕಳುಹಿಸಬೇಕು ಎನ್ನುವ ತೀರ್ಮಾನಕ್ಕೆ ಬಂದಿದ್ದಾರೆ. ಅವರ ಪಕ್ಷದಲ್ಲಿಯೇ ಒಡಕು ಬಂದಿರುವುದರಿಂದ, ಈ ಮಸೂದೆಗೆ ವಿರೋಧ ಬಂದಿರುವುದರಿಂದ ಪುನಃ ಕಾಲ ಪಡೆಯಲು ಪ್ರಯತ್ನಿಸುತ್ತಿದ್ದಾರೆ. ಕಳೆದ ಅಧಿವೇಶನದಲ್ಲಿಯೇ ಇದನ್ನು ಪಾಸ್ ಮಾಡುತ್ತೇವೆಂದು ಹೇಳಿದವರು ಡಿಸೆಂಬರ್ ತಿಂಗಳಿಗೆ ತಂದು ಹಾಕಿದರು. ಈಗ ಡಿಸೆಂಬರ್‌ನಿಂದ ಜನವರಿಗೆ ಹೋಗಿದೆ. ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋದರೆ ಜನವರಿಯಲ್ಲೇ ಆಗಬಹುದು ಅಥವಾ ಅಲ್ಲಿಂದ ಮುಂದೆ ಫೆಬ್ರುವರಿ, ಮಾರ್ಚ್ ತಿಂಗಳಿಗೂ ಹೋಗಬಹುದು. ಕೊನೆಗೆ ಬಜೆಟ್ ಅಧಿವೇಶನದ ನಂತರ ತೆಗೆದುಕೊಂಡು ಹೋಗುತ್ತಾರೆಯೋ ಏನೋ ನೋಡಬೇಕು.

ಮಾನ್ಯ ಅಧ್ಯಕ್ಷರೇ ತಮ್ಮ ಮೂಲಕ ನಾನು ಕೇಳಿಕೊಳ್ಳುವುದೇನೆಂದರೆ ನಿಜವಾಗಿ ಪ್ರಗತಿಪರವಾದ ಭೂಸುಧಾರಣೆಯನ್ನು ತರಬೇಕೆಂಬ ಆಸೆ ಇದ್ದರೆ, ಹೃದಯ ಇದ್ದರೆ, ಕಳಕಳಿ ಇದ್ದರೆ, ಬಡವರ ಬಗ್ಗೆ, ನಿರ್ಗತಿಕರ ಬಗ್ಗೆ ಅನುಕಂಪ ಇದ್ದರೆ, ಈ ರೀತಿಯ ಭೂಸುಧಾರಣಾ ತಿದ್ದುಪಡಿ ಮಸೂದೆಯನ್ನು ತರಬಾರದು. ಇದನ್ನು ಕೂಡಲೇ ಹಿಂತೆಗೆದುಕೊಂಡು ಮತ್ತೊಂದು ಪ್ರಗತಿಪರವಾದ ಮಸೂದೆಯನ್ನು ತೆಗೆದುಕೊಂಡು ಬರಲಿ. ನಾವು ಪುನಃ ಜನವರಿಯಲ್ಲಿ ಅದಕ್ಕಾಗಿ ಸೇರಿದರೂ ಚಿಂತೆ ಇಲ್ಲ. 16 ಕಿಲೋ ಮೀಟರ್ ಇರುವುದನ್ನು ತೆಗೆಯಬೇಕು, ಸ್ಯಾಚುರೇಷನ್ ಡೆಫಿನಿಷನ್ ತಿದ್ದುಪಡಿ ಮಾಡಬೇಕು ಮತ್ತು ನರೆಂದರ್ ಮಾಡುವ ಹಾಗೇ ಇಲ್ಲ, ಆ ರೀತಿಯ ಹೊಸ ಕಲಮುಗಳನ್ನು ತೆಗೆದುಕೊಂಡು ಬರಬೇಕು. ಆಗ ಮಾತ್ರ ಪ್ರಗತಿಪರವಾದ ಭೂಸುಧಾರಣೆಯನ್ನು ತರತಕ್ಕ ಜನ ಆಳುವ ಪಕ್ಷದವರು ಎಂದು ನಾನು ಹೇಳಿದಂಥ ವಿಚಾರಗಳನ್ನು ಘಟ್ಟಿ ಇಳಿಸಿದಾಗ ಮಾತ್ರ ಹೇಳಬಹುದು. ಅಲ್ಲಿಯವರೆಗೂ ಸಾಧ್ಯವಾಗುವುದಿಲ್ಲ.

ಭೂ ಸುಧಾರಣಾ ಮಸೂದೆಯಲ್ಲಿ ರಿಟ್ರಾಸ್ಪೆಕ್ಟಿವ್ ಎಫೆಕ್ಟ್ ಇಲ್ಲ. ಅದರ ಬಗ್ಗೆ ಕೆಲವು ಸದಸ್ಯರು ವಾದ ಹೂಡುತ್ತಿದ್ದಾರೆ. ಏನೋ ಮೋಸ ಮಾಡಿ, ಅನ್ಯಾಯ ಮಾಡಿ, ಬಡವರಿಂದ ಜಮೀನನ್ನು ಬಿಡಿಸಿಕೊಂಡಿದ್ದಾರೆ. 1959ಕ್ಕೆ ಮುಂಚೆ ತಹಸೀಲ್ದಾರರ ಮುಂದೆ ಗೇಣಿದಾರನಾದವನು ತನ್ನ ಭೂಮಿಯನ್ನು ಸರೆಂಡರ್ ಮಾಡುವುದಕ್ಕೆ ಅವಕಾಶವಿತ್ತು. ನಮ್ಮಲ್ಲಿ ಯಾವರೀತಿಯ ತಹಸೀಲ್ದಾರರು ಇದ್ದಾರೆ ಎನ್ನುವುದು ನಮಗೆ ಗೊತ್ತಿಲ್ಲವೇ? ಅವರನ್ನು

(ಶ್ರೀ ಎಸ್. ಬಂಗಾರಪ್ಪ)

ಎಷ್ಟು ಸುಲಭದಿಂದ ಬುಟ್ಟಿಗೆ ಹಾಕಿಕೊಳ್ಳಬಹುದು ಎನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಸಾವಿರಾರು ಗೇಣಿದಾರರು, ಸಾವಿರಾರು ಕುಟುಂಬಗಳು ಇದಕ್ಕೆ ಆಹುತಿಯಾಗಿವೆ; ತಹಸೀಲ್ದಾರರು ಜಮೀನನ್ನು ಬಿಟ್ಟಿದ್ದಾರೆ ಎಂದು ರಾಜು ಹಾಕಿ ಕೊಟ್ಟಿದ್ದಾರೆ. ಇದು 1958ಕ್ಕೆ ಮುಂಚೆ ನಡೆಯಿತು 1958ರ ನಂತರವೂ ಅಲ್ಲಲ್ಲಿ ಆಯಿತು. ಈಗಲೂ ಅದರ ಕೆಲವು ಅಂಶ ಉಳಿದಿದೆ. 1958ಕ್ಕೆ ಮೊದಲು ತಹಸೀಲ್ದಾರರ ಎದುರುಗಡೆ ಆದರೆ 1958ರ ನಂತರ ಕೋರ್ಟಿನಲ್ಲಿ ಆಗುತ್ತಿದೆ. ಒಬ್ಬ ಸಾಮಾನ್ಯ ವ್ಯಕ್ತಿಗೆ ಕೋರ್ಟ್ ಅಥವಾ ತಹಸೀಲ್ದಾರ ಎರಡೂ ಒಂದೇ. ಜಮೀನನ್ನು ಬಿಟ್ಟು ಕೊಟ್ಟಿದ್ದೇನೆ ಎಂಬುದಾಗಿ ಅವನಿಂದ ರಾಜು ಹಾಕಿಸಿಕೊಂಡು ಬಹಳ ಅನ್ಯಾಯಗಳು ನಡೆದು ಹೋಗಿವೆ. ಯಾರಾದರೂ ಸಣ್ಣ ಜಮೀನ್ದಾರರು ಎರಡು ಮೂರು ಎಕರೆ ಇರುವವರು ಜಮೀನನ್ನು ಬಿಡಿಸಿಕೊಂಡಿದ್ದರೆ, ಏನೋ ಅವರಿಗೂ ಕೂಡ ಹೊಟ್ಟೆಗೆ ಅನ್ನವಿರಲಿಲ್ಲ ಬಿಡಿಸಿಕೊಂಡಿದ್ದಾನೆ ಎನ್ನುವ ಮಾತನ್ನು ಹೇಳಬಹುದಾಗಿತ್ತು. ಆದರೆ ಹಲವಾರು ಭಾರಿ ಭಾರಿ ಜಮೀನ್ದಾರರು ಬಡವರಿಂದ ಜಮೀನನ್ನು ಬಿಡಿಸಿಕೊಳ್ಳತಕ್ಕ ಹಪಾಪ್ಯನಕ್ಕೆ ಹೋಗಿ ತಹಸೀಲ್ದಾರರ ಎದುರುಗಡೆ, ಮತ್ತು ಕೋರ್ಟಿನಲ್ಲಿ ಕೂಡ ಜಮೀನನ್ನು ಬಿಡಿಸಿಕೊಂಡಿರುವ ಹಲವಾರು, ಸಾವಿರಾರು ಸನ್ನಿವೇಶಗಳಿವೆ. ಈಗ ತಂದಿರುವ ಭೂಸುಧಾರಣಾ ಕಾನೂನನ್ನು ರಿಟ್ರಾಸ್ಪೆಕ್ಟಿವ್ ಆಗಿ ಜಾರಿಗೆ ಕೊಡದೆ ಇದ್ದರೆ ಯಾರು ಜಮೀನನ್ನು ಬಿಡಿಸಿಕೊಂಡಿದ್ದಾರೆ, ಅದಕ್ಕೆ ಮಾನ್ಯತೆ ಮಾಡದೆ ಇರತಕ್ಕ ಒಂದು ಕಲಮನ್ನು ಇದರಲ್ಲಿ ಸೇರಿಸದೆ ಇದ್ದರೆ ಯಾವ ಬಡವರ್ಗ ನಿಮ್ಮನ್ನು ನಂಬಿ, ಉತ್ತು ಬಿತ್ತಿ, ಬೆವರು ಸುರಿಸಿ ಬೆಳೆಯನ್ನು ತೆಗೆದು ಜೀವನ ಮಾಡತಕ್ಕವನಿಗೆ ರಕ್ಷಣೆ ಸಿಕ್ಕುವುದಿಲ್ಲ. ಅವನಿಗೆ ರಕ್ಷಣೆಯನ್ನು ಕೊಡಲೇ ಬೇಕು. ನ್ಯಾಯವಾಗಿ ಅವರು ಒಂದಾವೇಳೆ ಜಮೀನನ್ನು ಬಿಟ್ಟು ಬಿಟ್ಟಿದ್ದರೆ ಒಪ್ಪಿಕೊಳ್ಳಬಹುದಾಗಿತ್ತು. ಈ ಅನ್ಯಾಯ, ಈ ಶೋಷಣೆ, ಏನು ಬಡವರ್ಗಕ್ಕೆ ನಡೆದಿದೆ, ಹರಿಜನ ಕುಟುಂಬಗಳಿಗೆ, ನಿಮ್ನವರ್ಗದವರಿಗೆ ಮತ್ತು ಇತರರಿಗೆ ಏನು ನಡೆದಿದೆ, ಅವರಿಂದ ಯಾವು ಜಮೀನನ್ನು ಬಿಡಿಸಿಕೊಂಡಿದ್ದಾರೆ ಅಂಥ ಜಮೀನ್ದಾರರಿಂದ ಪುನಃ ಆ ಜಮೀನುಗಳನ್ನು ಬಿಡಿಸಿಕೊಳ್ಳತಕ್ಕ ಕಾನೂನನ್ನು ಸರ್ಕಾರ ತೆಗೆದುಕೊಂಡು ಬರಬೇಕು ಎಂದು ಹೇಳುತ್ತೇನೆ. ಅವಾಗ ಫ್ರೆಂಚ್ ' ಗರೀಬಿ ಹಠಾವೋ ' ಎನ್ನುವುದಕ್ಕೆ ಅರ್ಥ ಬಂದೀತು; ಪ್ರಗತಿಪರ ಭೂ ಸುಧಾರಣೆ ಎನ್ನುವುದಕ್ಕೆ ಅರ್ಥ ಬಂದೀತು. ಅದನ್ನು ಬಿಟ್ಟು ನರೆಂದರ್ ಮಾಡತಕ್ಕ ಕಲಮನ್ನು ತೆಗೆಯದೆ ಇದ್ದರೆ ಭೂಸುಧಾರಣಾ ತಿದ್ದುಪಡಿ ಮನೂದೆ ಎಷ್ಟೂರಮಟ್ಟಿಗೆ ಪ್ರಗತಿಪರವಾಗಿರುತ್ತದೆ ಎನ್ನುವ ಮಾತನ್ನು ನೀವೇ ಯೋಚನೆ ಮಾಡಬೇಕಾಗಿದೆ. ನಾಳೆಯ ದಿನ ಪುನಃ ನೀವೆಲ್ಲಾ ಜನತೆಯ ಎದುರಿಗೆ, ಗೇಣಿದಾರರ ಎದುರಿಗೆ, ರೈತ ವರ್ಗದ ಎದುರಿಗೆ ಹೋಗಿ ನಿಲ್ಲಬೇಕಾದ ಸಂದರ್ಭ ಬರುತ್ತದೆ. ಆ ದೃಷ್ಟಿಯಿಂದ ಅಡಳಿತದಲ್ಲಿರತಕ್ಕ ಪಕ್ಷದವರಿಗೆ ನಾನು ಕೇಳಿಕೊಳ್ಳುವುದೇನೆಂದರೆ, ಸೆಕ್ಷನ್ 25 ಏನಿದೆ ಅದನ್ನು ತೆಗೆದು ಹಾಕಬೇಕು ಮತ್ತು ಯಾರಿಂದ ಹಿಂದೆ ಜಮೀನನ್ನು ಬಿಡಿಸಿಕೊಂಡಿರುತ್ತಾರೆ, ಅಂಥವರಿಗೆ ರಕ್ಷಣೆಯನ್ನು ಕೊಡುವಂತೆ ರಿಟ್ರಾಸ್ಪೆಕ್ಟಿವ್ ಆಗಿ ಜಾರಿಗೆ ಕೊಡಬೇಕು ಎನ್ನುವ ಮಾತನ್ನು ನಿಮ್ಮ ಮುಂದೆ ಇಡುವುದಕ್ಕೆ ಇಚ್ಛೆಪಡುತ್ತೇನೆ.

[MR. DEPUTY SPEAKER in the Chair]

ನಮ್ಮ ದೇಶದಲ್ಲಿ ಈ ಭೂಸುಧಾರಣೆ ನಿಜವಾಗಲೂ ಸರಿಯಾಗುತ್ತದೆಯೆ ಎನ್ನುವುದು ಸಂಶಯ ಇದೆ. ಈ ಭೂಸುಧಾರಣೆಯಿಂದ ಸುಮಾರು 100 ಕ್ಕೆ 18 ಕುಟುಂಬಗಳು ಏನೇನೂ ಜಮೀನು ಇಲ್ಲದೇ ಇರುವವರು ಇದ್ದಾರೆ. ಆ ಕಾರ್ಮಿಕರು ಈ ಜಮೀನಿಗಾಗಿ ಬೆಳಗಿನಿಂದ ಸಾಯಂಕಾಲದವರೆಗೂ ದುಡಿದು ತಮ್ಮ ಬೆವರು ಸುರಿಸಿ ಉತ್ತು ಬಿತ್ತಿ ವ್ಯವಸಾಯ ಮಾಡುತ್ತಿದ್ದಾರೆ. ಮತ್ತು ಹಲವಾರು ಶತಮಾನಗಳಿಂದ ಈ ರೀತಿ ನಡೆಸಿಕೊಂಡು ಬಂದಿರ ತಕ್ಕಂಥ ರೈತರಿಗೆ ಈ ತಿದ್ದುಪಡಿ ಮನೂದೆಯಲ್ಲಿ ಏನೂ ಪ್ರಯೋಜವಾಗುವುದಿಲ್ಲ. ನಿಮ್ಮ ಹತ್ತಿರ hardly 1½ per cent land ಇದೆ. Where is the land to be given to the landless class? ಇದರ ಬಗ್ಗೆ ನನಗೆ ಅನಿಸುವುದು ನಿಮಗೆ ಇರುವ ಮಾರ್ಗ ಎರಡೇ ದಾರಿಗಳು. ಒಂದನೆಯದಾಗಿ ಸರ್ಕಾರದ ಪಶದಲ್ಲಿರತಕ್ಕಂಥ ಜಮೀನು ಮತೊಂದು ಜಮೀನ್ದಾರರಿಂದ ಜಮೀನನ್ನು ಬಿಡಿಸಿಕೊಂಡು ಹಂಚುವದು ಒಂದು. ಅವರೆ ನೀವು ಸರ್ಕಾರೀ ಜಮೀನನ್ನು ಬಿಡುಗಡೆ ಮಾಡುವುದಿಲ್ಲ ಎಂದು ಹೇಳುತ್ತೀರಿ. ನಾನು ಇದರ ಬಗ್ಗೆ ಕೇಳುವುದು ಏನೆಂದರೆ 100 ಕ್ಕೆ 18 ಪರ್ಸೆಂಟ್ ಜನ ಜಮೀನು ಇಲ್ಲದೇ ಇರುವವರು ಏನು ಇದ್ದಾರೆ ಅವರಿಗೆ ಏನು ಉತ್ತರ ಕೊಡುತ್ತೀರಿ? ಅದಕ್ಕಿಂತ ಕಡಿಮೆ ಇರತಕ್ಕಂಥ ಜನರಿಗೆ ಏನು ಉತ್ತರ ಕೊಡತ್ತೀರಿ? ಮತ್ತು ಜಮೀನು ಕಳೆದು

ಕೊಂಡಂಥ ಜನಕ್ಕೆ ಏನು ಉತ್ತರ ಕೊಡುತ್ತೀರಿ ? ಒಂದುವೇಳೆ ಈ ದೇಶದಲ್ಲಿ ಭೂಸುಧಾರಣೆಯಲ್ಲಿ ಪ್ರಗತಿಪರವಾದ ನೀತಿಯಲ್ಲಿ ಜಾರಿಗೆ ತರುವುದಕ್ಕೆ ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹಾಕಿದರೆ ಅದು ಬರುವುದೊರೊಳಗೆ ನಿಮ್ಮ ಮನಸ್ಸು ಪರಿವರ್ತನೆ ಆಗಬೇಕು. ಪ್ರಸಿಯೊಂದನ್ನೂ ಅಡ್ಜೆಸ್ಟ್ ಮೆಂಟ್ ಮಾಡುತ್ತೇವೆ ಅನ್ನುವ ಪ್ರಶ್ನೆ ಹಾಕಿದರೆ ಅದು ನಡೆಹೋಗುವುದಿಲ್ಲ. ಮಾನ್ಯ ಅಧ್ಯಕ್ಷರಾದಿಯಾಗಿ ನಡೆಪೋಷಸಚಿವರು ಈ ನಥಯಲ್ಲರುವುದರಿಂದ ಅವನ್ನು ನಾನು ಕೇಳಿಕೊಳ್ಳುತ್ತೇನೆ. ನಿಮಗೆ ನಿಜವಾಗಿಯೂ ಪ್ರಗತಿಪರವಾದ ಭೂಸುಧಾರಣೆಯಲ್ಲಿ ನಂಬಿಕೆ ಇದ್ದರೆ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗಲಿ, ಅವರೆ ಅದು ಬರುವುದಕ್ಕೆ ಮುನ್ನ ಸಾಧ್ಯವಾದಷ್ಟು ಬೇಗನೆ ಆ ಕಮಿಟಿಯವರು ವರದಿ ಕೊಡುವ ಮುನ್ನ ನೀವು ಒಂದು ನಿರ್ದಿಷ್ಟವಾದ ತೀರ್ಮಾನಕ್ಕೆ ಬಪಬೇಕು. ಈ ಬಗ್ಗೆ ಜನಹೊರಗೆ ಮಾತನಾಡಿ ಕೆಳ್ಳುತ್ತಿದ್ದಾರೆ, ಸಂದರ್ಭ ಬಂದಾಗ ಆ ಜನಕ್ಕೆ ನೀವು ಉತ್ತರ ಕೊಡಬೇಕಾಗುತ್ತದೆ. ನಾನೂ ಕೂಡ ಆ ಸಂದರ್ಭವನ್ನು ಕಾಯುತ್ತಿದ್ದೇನೆ. ನೀವು ಯಾವತ್ತಾದರೂ ಹೊರಗೆ ಹೋಗಲೇ ಬೇಕಾಗುತ್ತದೆ ನನಗೆ ಗೊತ್ತು ಮಾನ್ಯ ಅಧ್ಯಕ್ಷರೇ ಈ ಪ್ರಗತಿ ಪರವಾದ ಭೂಸುಧಾರಣೆಯನ್ನು ಒಂದು ವೇಳೆ ನೀವು ಜಾರಿಗೆ ತರದೇ ಹೋದರೆ ರಕ್ತಕ್ರಾಂತಿ ಆಗುವ ಸಂಭವವಾಗುತ್ತದೆ. ಇನ್ನು ಭೂಸುಧಾರಣೆಗೆ ಸಂಬಂಧಪಟ್ಟ ಜನ ಮತ್ತು ಬೇರೆ ರಂಗವಲ್ಲಿ ಇರತಕ್ಕ ಜನ ಎಲ್ಲರೂ ಈ ಮಾತನ್ನು ಹೇಳುತ್ತಿದ್ದಾರೆ. ಈ ಕಡೆ ಕೂತಿದ್ದವರಿಗೆ ಈ ಮಾತನ್ನು ಹೇಳುವುದಕ್ಕಾಗುವುದಿಲ್ಲ. ಏತಕ್ಕೆಂದರೆ ಅವರು ಈಗ ಅಧಿಕಾರದಲ್ಲಿರುವವರಲ್ಲ. ಮೊದಲು ನೀವು ಈ ಕಡೆ ಕುಳುಳಿತಿದ್ದವರು ಈಪ್ಪೊತ್ತಿನ ದಿವಸ ಆ ಕಡೆ ಕುಳಿತಿದ್ದೀರಿ. ಈಪ್ಪೊತ್ತು ನಿಮ್ಮ ಹತ್ತಿರ ಅಧಿಕಾರ ಇವೆ. ಈ ಭೂಸುಧಾರಣೆ ಬಗ್ಗೆ ನಮಗೆ ನ್ಯಾಯ ಸಿಕ್ಕತ್ತದೆ ಎಂದು ಈ ಮಹಾಚುನಾವಣೆಯಲ್ಲಿ ನಿಮಗೆ ಅವರು ಬೆಂಬಲ ಕೊಟ್ಟರು, ಅದುದರಿಂದ ನೀವು ಅಧಿಕಾರಕ್ಕೆ ಬಂದಿದ್ದೀರಿ. ಆದರೆ ಈಗ ತಂದಿರುವ ಮಸೂದೆ ನೋಡಿದರೆ ಇದರಲ್ಲಿ ಶೋಷಣೆ ಹೆಚ್ಚಾಗಿದೆಯೇ ಹೊರತು ನ್ಯಾಯರೀತಿಯಲ್ಲಿ ತಂದಿಲ್ಲ. ಈ ಮಹಾಚುನಾವಣೆಯಲ್ಲಿ ಗರೀಬಿ ಹಟಾವೋ ಹೇಳಿಕೊಂಡು ಪ್ರಗತಿಪರವಾದ ಘೋಷಣೆ ಮಾಡಿದಿರಿ. ಈ ಮಸೂದೆ ತಂದಿರುವುದನ್ನು ನೋಡಿದರೆ ಇನ್ನು ಮುಂದೆ ಜನ ನಿಮ್ಮನ್ನು ನಂಬುವುದಿಲ್ಲ. ಏತಕ್ಕೆಂದರೆ ಇದುವರೆಗೂ ಅವರಿಗೆ ಕಷ್ಟ ತಪ್ಪಲಿಲ್ಲ. ಒಂದು ಉದಾಹರಣೆ ಹೇಳುವುದಾದರೆ ಕ್ರಾಂತಿ ಆಗುವುದಕ್ಕೆ ಮುನ್ನೆ ಭೂಪತಿಗಳು ಸಾಮಾನ್ಯ ಜನರ ಮೇಲೆ ಫ್ರಾನ್ಸ್ ದೇಶದಲ್ಲಿ ಯಾವ ರೀತಿಯಾಗಿ ದಬ್ಬಾಳಿಕೆ ನಡೆಸುತ್ತಿದ್ದರು ನೋಡಿ: ಅಲ್ಲಿ ಭೂಪತಿಗಳು ಸಾಮಾನ್ಯ ಜನರ ಮೇಲೆ ಶೋಷಣೆ ಮಾಡುತ್ತಿದ್ದರು. ಅದಕ್ಕೆ ಅಲ್ಲಿ ಸೇನಾ ಕ್ರಾಂತಿ ಆಯಿತು. ಆ ಕ್ರಾಂತಿ ಆದ ಮೇಲೆ ಅಲ್ಲಿ ಹದಗೆಟ್ಟಿದ್ದ ಪರಿಸ್ಥಿತಿಯನ್ನು ಯಾವ ರೀತಿಯಾಗಿ ಒಂದು ಹಿಡಿತಕ್ಕೆ ತಂದರೋ ಅವೇ ರೀತಿಯಾಗಿ ಇಲ್ಲೂ ಕ್ರಾಂತಿ ಆದೀತು ಎನ್ನುವ ಒಂದು ದೃಷ್ಟಿಯಿಂದ ನಿಮಗೆ ಈ ಸಂದರ್ಭವಲ್ಲಿ ನಾನು ನೆನಪು ಮಾಡಿಕೊಡ್ತೆ. ಆದರೆ ಜನತೆಗೆ ಒಂದು ಮಿತಿ ಇದೆ. ಎಲ್ಲಿಯವರೆಗೆ ನುಮ್ಮನೆ ಇರಬೇಕೋ ಅಲ್ಲಿಯವರೆಗೆ ನುಮ್ಮನೆ ಇರುತ್ತಾರೆ. ನಿಮ್ಮ ಅನೀತಿ, ಅನ್ಯಾಯ, ಅಧರ್ಮ ಹೆಚ್ಚಾಗುತ್ತಾ ಹೋದರೆ ಕ್ರಾಂತಿ ಮಾರ್ಗ ಬಿಟ್ಟರೆ ಬೇರೆ ಯಾವುದೂ ಇಲ್ಲ. ಆದರೆ ನಿಮ್ಮ ಆಳತೆಗೋಲು ಆ ಮಟ್ಟಕ್ಕೆ ಬರಲಾರದು ಎಂದು ಅಂದು ಕೊಂಡಿದ್ದೇನೆ. ಫ್ರಾನ್ಸ್, ಜೈನಾ, ರಷ್ಯಾ ಈ ದೇಶಗಳಲ್ಲಿ ಯಾವರೀತಿ ಕ್ರಾಂತಿ ಆಯಿತು ಎನ್ನುವುದನ್ನು ನೋಡಿ. 25 ವರ್ಷದಿಂದಲೂ ಕೂಡ ಜನ ನಿಮ್ಮ ರಾಜಕೀಯವನ್ನು ನೋಡುತ್ತಿದ್ದಾರೆ. ಇನ್ನು ಮುಂದೂ ಈ ರೀತಿ ನಡೆಸುವುದಾದರೆ ಜನ ನೋಡಿಕೊಂಡು ನುಮ್ಮನೆ ಕೂತುಕೊಳ್ಳುವುದಕ್ಕಾಗುವುದಿಲ್ಲ. ಭಾರತ ದೇಶದಲ್ಲಿ ಮಹಾತ್ಮಾ ಗಾಂಧೀಜಿಯವರು ಶಾಂತಿ ತಂದಿದ್ದಾರೆ ಎಂದು ಎಲ್ಲರೂ ಹೇಳುತ್ತಿದ್ದರು ಅದೇ ರೀತಿ ನಾವು ಹೇಳುತ್ತಿದ್ದೆವು. ನೀವು ಹೇಳುತ್ತಾ ಇದ್ದಿರಿ. ಆದರೆ ಈಪ್ಪೊತ್ತಿನ ದಿವಸ ಅದಕ್ಕೆ ತದ್ವಿರುದ್ಧವಾಗಿ ಇರುವುದನ್ನು ನೋಡಿದರೆ ರಕ್ತ ಕ್ರಾಂತಿ ಆಗಬಹುದು ಎಂದು ಹೇಳಬಹುದ. ಇದನ್ನು ತಪ್ಪಿಸುವುದಕ್ಕೆ ನಮ್ಮ ಕೈಯ್ಯಲ್ಲೂ ಸಾಧ್ಯ ಇದೆ, ನಿಮ್ಮ ಕೈಯ್ಯಲ್ಲೂ ಸಾಧ್ಯ ಇದೆ ಅದನ್ನು ಸರಿ ಮಾಡಬೇಕು. ಆದುದರಿಂದ ಈಗ ತಂದಿರತಕ್ಕಂಥ ಭೂಸುಧಾರಣೆ ಮಸೂದೆಯಿಂದ ಜನತೆಗೆ ಏನು ಅನ್ಯಾಯ ಆಗಿದೆಯೋ ಅದನ್ನು ಸರಿಪಡಿಸುವ ದೃಷ್ಟಿಯಿಂದ ಇದನ್ನು ಸಮಗ್ರ ತನಿಖೆಗೆ ಒಳಪಡಿಸಿ ಈಗಿನ ಪ್ರಜಾಪ್ರಭುತ್ವದಲ್ಲಿ ನಿಮಗೆ ಬೇಬಲ ಇದೆ ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತೇನೆ. ಆದುದರಿಂದ ಈಗ ತಂದಿರತಕ್ಕ ತಿದ್ದುಪಡಿ ಮಸೂದೆ ಅದು ಸರಿಯಾದ ಮಸೂದೆ ಅಲ್ಲ. ನಾನು ಆದರಲ್ಲಿ ಕಲವು ಮಸೂದೆಗಳನ್ನು ಒಪ್ಪಿದ್ದೇನೆ. ಆದುದರಿಂದ ಈ ತಿದ್ದುಪಡಿ ಮಸೂದೆಯನ್ನು ಹಿಂದಕ್ಕೆ ತೆಗೆದುಕೊಂಡು ಜಪಾನ್ ಮಾದರಿ ರೀತಿಯಲ್ಲಿ ಆ ದೇಶದ ಭೂಪರಿಮಿತಿ ಅಧಾರದ ಮೇಲೆ ಮಾಡಬೇಕೆಂದು ಹೇಳುತ್ತೇನೆ ಮತ್ತು ಆ ರೀತಿ ಮಾಡಿದರೆ ಈ ದೇಶದ ಲಕ್ಷೋಪಲಕ್ಷ ಜನರಿಗೆ ಅದೀತು ಎಂದ ಹೇಳುತ್ತೇನೆ. ಈಗ ಈ ತಿದ್ದುಪಡಿ ಮಸೂದೆ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗುವುದರಿಂದ ಇದಲ್ಲಿರುವ ಅನೇಕ ಲೂಪಾರುಗಳ ಬಗ್ಗೆ

(ಶ್ರೀ ಎಸ್. ಬಂಗಾರಪ್ಪ)

ಹೇಳುವುದಕ್ಕೆ ಹೋಗುವುದಿಲ್ಲ. ಬರೀ ಅದರ ಸೇಲಿಯಂಟ್ ಫೀಚರ್ಸ್ ಬಗ್ಗೆ ನಾನು ಹೇಳುವುದಕ್ಕೆ ಹೋಗುವುದಿಲ್ಲ

ಕೊನೆಯದಾಗಿ ಒಂದು ಮಾತನ್ನು ಹೇಳುತ್ತೇನೆ. ಈ ಬಗ್ಗೆ ಸಮಗ್ರವಾಗಿ ಯೋಜನೆ ಮಾಡಿ ರೈತವರ್ಗಕ್ಕೆ, ಕಾರ್ಮಿಕ ವರ್ಗಕ್ಕೆ ಉಪಯೋಗವಾಗತಕ್ಕಂಥ ಒಂದು ಮಸೂದೆಯನ್ನು ತರದೇ ಹೋದರೆ ದೇಶದಲ್ಲಿ ರಕ್ತಕ್ರಾಂತಿ ಆದೀತು, ಅವಕ್ಕೆ ದಾರಿ ಮಾಡಿಕೊಡಬೇಡಿ ಅನ್ನುವ ಎಚ್ಚರಿಕೆಯ ಮಾತನ್ನು ಈ ಸಭೆಯ ಮುಂದೆ ಇಟ್ಟು, ಮಾನ್ಯ ಅಧ್ಯಕ್ಷರು ಇಷ್ಟು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

5-00 P.M.

†ಶ್ರೀ ಕೆ. ಎಂ. ರುದ್ರಪ್ಪ (ನಕಲೇಶಪುರ).—ಮಾನ್ಯ ಸಭಾಧ್ಯಕ್ಷರೇ, ಈಗ ಮಂಡಿಸಿರತಕ್ಕಂಥ ಈ ಭೂಸುಧಾರಣೆ ಮಸೂದೆಯನ್ನು ನಾನು ಸ್ವಾಗತಿಸುತ್ತಾ ಕೆಲವು ಸಲಹೆಗಳನ್ನು ಈ ಸಮಯದಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ. ಕಾಂಗ್ರೆಸ್ ಪಕ್ಷದವರು ಚುನಾವಣೆ ಸಮಯದಲ್ಲಿ ಜನತೆಗೆ ಏನು ಒಂದು ಆಶ್ವಾಸನೆಯನ್ನು ಕೊಟ್ಟಿದ್ದರು ಅವನ್ನು ಈಡೇರಿಸುವ ದೃಷ್ಟಿಯಿಂದ ಈ ಮಸೂದೆಯನ್ನು ತಂದಿದ್ದಾರೆ. ಇದರಲ್ಲಿ ಬಹಳ ಮುಖ್ಯವಾದ ತತ್ವ ಯಾವುದು ಎಂದರೆ ಯಾರು ಭೂಮಿಯನ್ನು ಉಳುತ್ತಾನೆಯೋ ಅವನು ಭೂಮಿ ಮಾಲೀಕ ಆಗಬೇಕು ಎಂಬ ತತ್ವ ಇದರಲ್ಲಿ ಅಡಕವಾಗಿದೆ ಮತ್ತು ಯಾವುದೇ ಕಾರಣದಿಂದ ಒಬ್ಬ ಮನುಷ್ಯ ತಾನು ಏನು ಇಚ್ಛೆಪಟ್ಟಷ್ಟು ಜಮೀನು ಹೊಂದಿರಬಾರದು ಎನ್ನುವ ತತ್ವ ಇದರಲ್ಲಿದೆ. ಹಾಗೆ ಮಾಡುವಾಗ ಕೆಲವು ವಾಸ್ತವಾಂಶಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ದೇಶದ ಪ್ರಗತಿಯನ್ನು ಮತ್ತು ಬೇಸಾಯದಿಂದ ಬರತಕ್ಕ ಉತ್ಪಾದನಾ ಶಕ್ತಿಯನ್ನು ಗಮನದಲ್ಲಿಟ್ಟುಕೊಂಡು ಈ ಮಸೂದೆಯನ್ನು ಮಾಡಬೇಕಾಗಿದ. ಈಗಾಗಲೇ ಅನೇಕ ಸದಸ್ಯರು ಪ್ರಸ್ತಾಪಮಾಡಿರುವಂತೆ ಇದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗಬೇಕಾಗಿದೆ. ಹಾಗೆ ಹೋಗುವಾಗ ಇಲ್ಲಿ ನ್ಯೂನತೆ ಏನೇನು ಇದೆ ಅದನ್ನು ಚರ್ಚೆಮಾಡಿ ಅಂತಿಮವಾಗಿ ಅಲ್ಲಿ ಪುನಃ ಇದುವುದಕ್ಕೆ ಅವಕಾಶವಾಗುತ್ತದೆ. ಈ ಬಗ್ಗೆ ಹೆಚ್ಚು ಪ್ರಸ್ತಾಪ ಮಾಡದೆ ಹೋದರೂ ಸ್ಥೂಲವಾಗಿ ಕೆಲವು ಅಂಶಗಳನ್ನು ನಾನು ಸಭೆಯ ಮುಂದೆ ಇಡಬಯಸುತ್ತೇನೆ. ನಮ್ಮ ದೇಶದಲ್ಲಿ ಈಗಾಗಲೇ ಎಲ್ಲಾ ಸದಸ್ಯರು ಅಭಿಪ್ರಾಯ ಪಟ್ಟಿರುವಂತೆ ಬಹಳ ಹೆಚ್ಚಿನ ಜನಸಂಖ್ಯೆ ಸೇಕಡ 75—80 ಜನರು ಬೇಸಾಯದಮೇಲೆ ಅವಲಂಬಿಸಿದ್ದಾರೆ. ಆದರೆ ಇತರ ದೇಶಗಳ ಜೊತೆಗೆ ಹೋಲಿಕೆ ಮಾಡಿದಾಗ ಹೆಚ್ಚಿನ ಜನಸಂಖ್ಯೆ ನಮ್ಮ ದೇಶದಲ್ಲಿ ಬೇಸಾಯವನ್ನೇ ಅವಲಂಬನೆ ಮಾಡಿರುವುದಕ್ಕೆ ಕಾರಣ ಏನು ಎಂದರೆ ನಮ್ಮ ದೇಶದಲ್ಲಿ ಇನ್ನೂ ಹೆಚ್ಚು ರೀತಿಯಲ್ಲಿ ಕೈಗಾರಿಕೆಗಳು ಆಗಿಲ್ಲ ಆ ರೀತಿ ಹೆಚ್ಚಿನ ಜನಸಂಖ್ಯೆ ಬೇಸಾಯವನ್ನೆ ಅವಲಂಬನೆ ಮಾಡಿರುವುದರಿಂದ ಜನಗಳಿಗೆ ಜಮೀನು ಬೇಕು ಎಂಬ ಕೂಗು ಕಂಡುಬರುತ್ತದೆ. ಆದರೆ ಉತ್ಪಾದನೆ ದೃಷ್ಟಿಯಿಂದ ನೋಡುವುದಾದರೆ ಮತ್ತು ವಿದ್ಯಾವಂತರು ಹಳ್ಳಿಗಾಡಿನಲ್ಲಿ ವಾಸವಾಡುವುದಕ್ಕೆ ಏತಕ್ಕೆ ಹಿಂತೆಗೆಯುತ್ತಾರೆ ಏತಕ್ಕೆ ವಿದ್ಯಾವಂತರಾದ ತರುಣರು ಸೇವಕರಿ ಹಿಡಿಯಬಯಸುತ್ತಾರೆ ಎಂಬುದು ಅರ್ಥವಾಗುತ್ತದೆ. ಹಿಂದೆ ಸರ್ಕಾರ ನಡೆಸಿದಂತವರು ಬೇಸಾಯಗಾರನಿಗೆ ಹೆಚ್ಚಿನ ಸವಲಭ್ಯವನ್ನು ಕೊಟ್ಟಿಲ್ಲ ಎಂದರೆ ತಪ್ಪಾಗಲಾರದು. ಬಹಳ ಮುಖ್ಯವಾಗಿ ಸೇಕಡ 70ರಷ್ಟು ಜನರು ಬೇಸಾಯವನ್ನು ಅವಲಂಬನೆ ಮಾಡಿರತಕ್ಕ ಜನಸಂಖ್ಯೆಗೆ ಅನುಕೂಲ ಮಾಡಿಕೊಡಬೇಕು. ಹೆಚ್ಚಿಗೆ ಕೈಗಾರಿಕೆಗಳು ಸ್ಥಾಪನೆಯಾಗಬೇಕು ಉತ್ಪಾದನಾ ಶಕ್ತಿ ಹೆಚ್ಚಿಗೆ ಬರಬೇಕಾದರೆ ಬೇಸಾಯಗಾರರು (ಮೆಕೆನೈಜೇಷನ್) ಯಂತ್ರದ ಸಹಾಯದಿಂದ ಬೇಸಾಯ ಮಾಡುವುದಕ್ಕೆ ಹೆಚ್ಚಿನ ಅವಕಾಶ ಇರಬೇಕು ಎಂದು ಈ ಸಮಯದಲ್ಲಿ ಹೇಳಬಯಸುತ್ತೇನೆ. ಒಂದು ಉದಾಹರಣೆ ಹೇಳಬೇಕಾದರೆ ಯುವಕರು ಹಳ್ಳಿಗಳಲ್ಲಿ ಬೇಸಾಯವನ್ನು ಅವಲಂಬನೆ ಮಾಡಿಕೊಂಡು ಸುಖವಾಗಿ ಇರುವುದನ್ನು ಬಿಟ್ಟು ಉದ್ಯೋಗದ ಕಡೆಗೆ ಏಕೆ ಬರುತ್ತಾರೆ ಎಂದರೆ 40—50 ಎಕರೆ ಜಮೀನು ಇಟ್ಟುಕೊಂಡರೆ ಅದರಲ್ಲಿ ಬರತಕ್ಕ ಉತ್ಪತ್ತಿ ಲೆಕ್ಕಹಾಕಿದರೆ ನಿಜವಾಗಿಯೂ ಒಬ್ಬ ಫಸ್ಟ್ ಡಿವಿಜನ್ ಕ್ಲರ್ಕ್ ಅಥವಾ ಪಬ್ಲಿಕ್ ವರ್ಕ್ಸ್ ಡಿಪಾರ್ಟ್‌ಮೆಂಟ್ ಸೂಪರ್‌ವೈಸರ್ ಅಥವಾ ಎಕ್ಷೈಜ್ ಇನ್ಸ್‌ಪೆಕ್ಟರ್ ಇವರುಗಳು ಅವರಿಗಿಂತ ಸುಖವಾಗಿ ಜೀವನ ನಡೆಸುತ್ತಾರೆ. ಅಂತಹ ಸುಖಜೀವನ ಬೇಸಾಯಗಾರ ಹೊಂದುವುದಕ್ಕೆ ಅವಕಾಶವಿಲ್ಲ. ಆ ಕಾರಣದಿಂದ ಹೆಚ್ಚಿನ ಜನ ಸರ್ಕಾರಿ ನೌಕರಿಯನ್ನು ಬಯಸುತ್ತಾರೆ. ಇದನ್ನು ತಪ್ಪಿಸಬೇಕಾದರೆ ಯುವಕರು ಬೇಸಾಯ ಕೈಕೊಂಡು ಹಳ್ಳಿಗಳಲ್ಲಿ ಇರುವುದಕ್ಕೆ ಹೆಚ್ಚು ಅವಕಾಶಗಳನ್ನು ಮಾಡಿಕೊಡಬೇಕು. ಇದನ್ನು ಮಾಡಿಕೊಡಬೇಕಾದರೆ ನಾವು ಭೂಸುಧಾರಣೆ ಮಸೂದೆ

ಅದಕ್ಕೆ ಅನುಕೂಲವಾಗಿದೆಯೇ ಇಲ್ಲವೇ ಎನ್ನುವುದನ್ನು ಯೋಚನೆ ಮಾಡಬೇಕಾಗಿದೆ. ಈಗ ಕೆಲವರು ಪ್ರಸ್ತಾಪ ಮಾಡಿದರು ಜಪಾನ್ ದೇಶಗಳಲ್ಲಿ 5 ಎಕರೆ ಜಮೀನುಗಳನ್ನು ಹೊಂದಿವ್ದಾರೆಂದು. ಆದರೆ ಜಪಾನ್ ಒಂದೇ ಅಲ್ಲ. ಇನ್ನು ಅನೇಕ ಪ್ರಗತಿಪರವಾದ ದೇಶಗಳು ಇವೆ. ಅಮೆರಿಕಾ, ಕೆನಡಾ ಇಂಗ್ಲೆಂಡ್, ಆಸ್ಟ್ರೇಲಿಯಾ, ನ್ಯೂಜಿಲೆಂಡ್ ದೇಶಗಳೂ ಇವೆ. ಅಲ್ಲಿ ಒಬ್ಬರ ಹತ್ತಿರವಿಷ್ಟು ಜಮೀನು ಇದೆ ಎಂದು ಅವರು ಹೇಳಲಿಲ್ಲ. ಅವೆಲ್ಲಾಕಾದ ಉದಾಹರಣೆ ಬೇಕಲ್ಲ ಅಥವಾ ಜಪಾನ ಉದಾಹರಣೆ ಬೇಕಿಲ್ಲ. ನಮ್ಮ ದೇಶಕ್ಕೆ ಯಾವುದು ಅನುಕೂಲವಾಗಿದೆಯೋ ನಮ್ಮ ಸಂಸ್ಕೃತಿಗೆ ಯಾವುದು ಅನುಕೂಲವಾಗಿದೆಯೋ ನಮ್ಮ ದೇಶದಲ್ಲಿ ಬೇಸಾಯದ ಉತ್ಪಾದನೆ ಪಡೆಯುವುದಕ್ಕೆ ಯಾವ ಯಾವ ಮಾರ್ಗ ಅನುಕೂಲವಾಗಿದೆಯೋ ಆ ಮಾರ್ಗವನ್ನು ಅನುಸರಿಸಬೇಕು ಅದಕ್ಕೆ ತಕ್ಕಂತೆ ಮಸೂದೆಯನ್ನು ತರಬೇಕಾಗಿದೆ. ಈ ಮಸೂದೆಯನ್ನು ತಂದಿದ್ದೇವೆ ಅದರಲ್ಲೂ ಸಹ ಕೆಲವು ತಿದ್ದುಪಡಿಗಳು ಅವಶ್ಯಕವೆಂದು ನಾನು ಹೇಳಬಯಸುತ್ತೇನೆ. ಹೇಳಬೇಕು ಎಂದರೆ ಹಳ್ಳಿಗಳಲ್ಲಿ ಇವ್ವವರು ಮತ್ತು ಜಮೀನನ್ನು ಪಡೆಯಬೇಕು 16 ಕಿರೋ ವಿಾಟರ್ ಮೇರೆ ಇದ್ದರೆ ಅಂತಹವರು ಜಮೀನನ್ನು ಬಿಟ್ಟುಕೊಡಬೇಕು ಎಂದು ಇದೆ. ಇದು ಸಮಂಜಸವಾದುದು ಅಲ್ಲ. ಯಾವ ರೀತಿ ಲೆಕ್ಕ ಹಾಕಿದರೂ 16 ಕಿರೋ ವಿಾಟರ್ ಮೇರೆ ಇದ್ದರೂ ಸಹ ಜಮೀನನ್ನು ರಾಭವಾಯಕವಾಗಿ ಹೆಚ್ಚಿನ ದಕ್ಷತೆಯಿಂದ ನಡೆಸುವುದಕ್ಕೆ ಅವಕಾಶವಿದೆ. ಈಗಿನ ಕಾಲದಲ್ಲಿ ಸಂಚಾರ ಸೌಲಭ್ಯ ಬೇಕಾದಷ್ಟು ಇದೆ. ಅನೇಕ ಜನರು ವಿದ್ಯಾಭ್ಯಾಸ ಮತ್ತು ಇತರ ಯಾವ ವೃತ್ತಿಯಲ್ಲಿ ತೊಡಗಿದ್ದರೂ ಮತ್ತು ಯಾವ ವೃತ್ತಿಯನ್ನು ಕೈಗೊಳ್ಳುವ ನಲುವಾಗಿ ಅವರು ದೂರದಲ್ಲಿದ್ದರೂ ಸಹ ಸರಿಯಾದ ಮ್ಯಾನೇಜ್‌ಮೆಂಟ್ ಇಟ್ಟುಕೊಂಡು ಅವರೇ ಆ ಸ್ಥಳಕ್ಕೆ ಹೋಗಿ ಜಮೀನು ಬೇಸಾಯ ಮಾಡುವುದಕ್ಕೆ ಅವಕಾಶವಿದೆ ಅದು ರಿಂದ 16 ಕಿರೋವಿಾಟರ್ ಏನು ಒಂದು ಕಂಡಿಷನ್ ಇದೆ ಅದು ಹೋಗಬೇಕಾದುದು ನ್ಯಾಯವಾಗಿದೆ. ಇಲ್ಲವಾದರೆ ಹೆಚ್ಚು ಜನರಿಗೆ ಮತ್ತು ವಿದ್ಯಾವಂತರಿಗೆ ಬ್ರಹ್ಮ ಒಂದು ಅಡಚಣೆಯನ್ನು ಉಂಟುಮಾಡುತ್ತದೆ. ಇದು ಹೋಗಬೇಕು ಎಂದು ಈ ಸಮಯದಲ್ಲಿ ಸಲಹೆ ಮಾಡಬಯಸುತ್ತೇನೆ. ಅದೇ ರೀತಿ 12 ಸಾವಿರ ರೂಪಾಯಿ ಬೇರೆ ಮೂಲಗಳಿಂದ ಉತ್ಪತ್ತಿ ಇದ್ದರೆ ಅಂತಹವರಿಗೆ ಜಮೀನು ಇರಬಾರದು ಎಂದು ಒಂದು ಕ್ಲಾಜು ಇದೆ ಬೇಸಾಯದಲ್ಲಿ ಹೆಚ್ಚಿನ ಉತ್ಪತ್ತಿ ಬರಬೇಕಾದರೆ ಹೆಚ್ಚಿನ ಬಂಡವಾಳ ಹಾಕಬೇಕು, ಹೆಚ್ಚಿನ ಬಂಡವಾಳ ಹಾಕಬೇಕಾದರೆ ಅವನು ಬಂಡವಾಳಗಾರ ಆಗಿರಬೇಕು. ಬೇರೆ ವೃತ್ತಿಯಲ್ಲಿ ಇದ್ದರೂ ಸಹ ಜಮೀನು ಇಟ್ಟುಕೊಳ್ಳುವುದಕ್ಕೆ ಅವಕಾಶವಿರಬೇಕು. ಆದುದರಿಂದ 12 ಸಾವಿರ ರೂಪಾಯಿ ರಿಸ್ಟ್ರಿಕ್ಷನ್ಸ್ ಏನು ಇವ ಅದು ಸಹ ಹೋಗಬೇಕಾದುದು ಅವಶ್ಯಕವಿದೆ. ಕೆಲವರು ಹೇಳಿದರು ಬ್ಲಾಕ್ ಮನಿಯನ್ನು ವೈಟ್‌ಮನಿ ಮಾಡುವುದಕ್ಕೋಸ್ಕರ ಈ ರೀತಿ ಮಾಡುತ್ತಿದ್ದಾರೆ ಅದುದರಿಂದ ಇದನ್ನು ತಂದಿದ್ದಾರೆ ಎಂದು. ಅಂತವರು ನೂರಕ್ಕೆ ಒಬ್ಬರು ಇರಬಹುದು. ಬೇಸಾಯದಲ್ಲಿ ಅವಕ್ಕೆ ಪಕಸಿ ಹೆಚ್ಚಿನ ಬಂಡವಾಳ ಹಾಕಿ ಉತ್ಪಾದನೆ ಜಾಸ್ತಿ ಮಾಡುವುದ ಕ್ರಿಪ್ಶನ್ ಇ ಬಾರದು. ಅದು ಸಹ ಹೋಗಬೇಕು ಎಂದು ನಾನು ಈ ಸಮಯದಲ್ಲಿ ಅಭಿಪ್ರಾಯ ಪಡುತ್ತೇನೆ. ಈಗ ಪ್ಲಾಂಟೇಷನ್ ವಿಚಾರದಲ್ಲಿ ಕೆಲವರು ತಪ್ಪು ಅರ್ಥ ಮಾಡಿದರು. ಇತರ ಕೈಗಾರಿಕೆಗಳಲ್ಲಿ ಮತ್ತು ಈ ಪ್ಲಾಂಟೇಷನ್ ವಿಚಾರದಲ್ಲಿ ಹೇಳಬೇಕಾಗಿದೆ. ಇದು ಕೇಂದ್ರ ಭೂಸುಧಾರಣೆ ಸಲಹಾ ಸಮಿತಿಯವರು ಪ್ಲಾಂಟೇಷನನ್ನು ಈಗ ಪರಿಶೀಲನೆಗೆ ತೆಗೆದುಕೊಳ್ಳಬಾರದು ಅದನ್ನು ಪ್ರತ್ಯೇಕವಾಗಿ ನಾವು ವಿಚಾರಮಾಡಬೇಕು ಎಂದು ಹೇಳಿದ್ದಾರೆ. ಕಾರಣ ಇಷ್ಟೇ. ಪ್ಲಾಂಟೇಷನ್ ನಮ್ಮ ದೇಶದಲ್ಲಿ 400 ಕೋಟಿ ಫಾರಿನ್ ಎಕ್ಸ್‌ಚೇಂಜ್ ಕೊಡುತ್ತಿದೆ. ಒಂದು ಇಂಡಸ್ಟ್ರೀಸ್ ರೀತಿಯಲ್ಲಿ ಪ್ಲಾಂಟರ್ಸ್ ವ್ಯವಸಾಯವನ್ನು ಮಾಡುತ್ತಿದ್ದಾರೆ ಅದಕ್ಕೆ ಹೆಚ್ಚಿನ ಏವೇಚನೆಬೇಕು. ಕಾಫಿ ತೋಟ ಮಾಡುವುದು ಎಲ್ಲರ ಕೈಯಲ್ಲಿ ಸಾಧ್ಯವಾಗುವುದಿಲ್ಲ. ಕಾಫಿ ಭೂಮಿಯನ್ನು ಹರಿಸಿ ಹಂಚುವುದಕ್ಕೆ ಆಗುವುದಿಲ್ಲ. ಅದು ನ್ಯಾಷನಲೈಸ್ ಮಾಡಬೇಕೇ ಅಥವಾ ಕೆದಕ್ಕೂ ಸೀಲಿಂಗ್ ಇರಬೇಕೇ ಎಂಬುದನ್ನು ಆಮೇಲೆ ಚರ್ಚೆ ಮಾಡಬೇಕು ಎಂದು ನನ್ನ ಅಭಿಪ್ರಾಯವಷ್ಟೆ. ರಾಷ್ಟ್ರೀಕರಣ ಮಾಡುವುದರಿಂದ ಪ್ರಯೋಜನವಾಗುವುದಿಲ್ಲ. ಆ ಕಾಲ ಬಂದಾಗ ಅದನ್ನು ನಡೆಯಾವ ರೀತಿಯಲ್ಲಿ ಸೀಲಿಂಗ್ ಅನ್ವಯ ಮಾಡಬೇಕೋ ಆ ರೀತಿ ಮಾಡಿದರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ. ನಮ್ಮ ದೇಶದಲ್ಲಿ ಕಾಫಿ ತೋಟ ಹೆಚ್ಚು ಎಕರೆಗಿಂತ ಇಟ್ಟುಕೊಂಡಿರತಕ್ಕವರು ಬಹಳ ಕಡಿಮೆ. 25 ಎಕರೆ, 10 ಎಕರೆ, 15 ಎಕರೆ ಮತ್ತು 50 ಎಕರೆಯೊಳಗೆ ಇರುವವರು ಜಾಸ್ತಿ ಇದ್ದಾರೆ. ಇದರ ಲೆಕ್ಕಾಚಾರ ಹಾಕಿದರೆ ಉತ್ಪತ್ತಿ ಏನು ಬರುತ್ತದೆ. ನಮ್ಮ ದೇಶಕ್ಕೆ ವ್ಯವಸಾಯದ ರೀತಿಯಲ್ಲಿ ಏನು ವ್ಯವಸ್ಥೆ ಮಾಡುತ್ತಾರೆ ಅದನ್ನು ಪರಿಗಣನೆಗೆ ತೆಗೆದುಕೊಂಡು ಅದು 400 ಕೋಟಿ ಏನು ಉತ್ಪತ್ತಿ ಕೊಡುತ್ತಿದೆ ಡಾಲರ್ ಎಕ್ಸ್‌ಚೇಂಜ್ ಅದನ್ನು ಹಾಳು ಮಾಡಬಾರದು. ನಮ್ಮ ದೇಶಕ್ಕೆ ಇವರ ಉತ್ಪತ್ತಿ, ಹೇರಳವಾಗಿರುವುದಲ್ಲದೆ ನಮ್ಮ ದೇಶಕ್ಕೆ ಅಗ್ರಿಕಲ್ಚರ್ ಇನ್‌ಕಂಟ್ಯಾಕ್ಸ್ ಮುಖಾಂತರ ಹೇರಳವಾಗಿ ಹಣವನ್ನು ನಮ್ಮ ಖಜಾನೆಗೆ ತುಂಬುತ್ತದೆ. ಅಲ್ಲಿ ಇರತಕ್ಕ ಕೂಲಿ

(ಶ್ರೀ ಕೆ. ಎಂ. ರುದ್ರಪ್ಪ)

ಗಾರರಿಗೆ ಎಲ್ಲಾ ರೀತಿಯಾದ ವಸತಿ ಸೌಕರ್ಯಗಳನ್ನು ಮಾಡಿಕೊಟ್ಟಿದ್ದಾರೆ ಅದಕ್ಕೆ ಲೇಬರ್ ಕಾನೂನು ಅನ್ವಯವಾಗುತ್ತದೆ ಅದನ್ನು ಇಂಡಸ್ಟ್ರೀಸ್ ಎಂದು ಪರಿಗಣನೆ ಮಾಡಿದ್ದಾರೆ ಅದನ್ನು ರಾಪ್ತ್ರೀಕರಣ ಮಾಡಲಿಕ್ಕು ಎಂದು ಹೇಳುವುದರಲ್ಲಿ ಯಾವ ಅರ್ಥವಿಲ್ಲ. ಚರ್ಚೆಗೆ ಬಂದಾಗ ಅದಕ್ಕೆ ಯಾವ ರೀತಿ ಸೀಲಿಂಗ್ ಹಾಕಬೇಕು ಎಂಬುದನ್ನು ನಭೆ ತೆಗೆದುಕೊಳ್ಳಬಹುದು. ಈಗ ಇದು ಈ ಮಸೂದೆಯ ಪರಿಮಿತಿಯಲ್ಲಿ ಇಲ್ಲದೆ ಇರುವುದರಿಂದ ಈಗ ಹೆಚ್ಚಿಗೆ ಅ ಬಗ್ಗೆ ಹೇಳಬಯಸುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ತಾವು ಇದನ್ನು ಒಪ್ಪುತ್ತೀರಾ? ಅಥವಾ ಒಪ್ಪುವುದಿಲ್ಲವೋ?

ಶ್ರೀ ಕೆ. ಎಂ. ರುದ್ರಪ್ಪ.— ಖುಷ್ಕಿ ಜಮೀನನ್ನು ವಿಂಗಡಣೆ ಮಾಡುವಾಗ ಮಳೆಯ ಆಧಾರದ ಮೇಲೆ ವಿಂಗಡಣೆ ಮಾಡಿರುತ್ತಾರೆ. ಖುಷ್ಕಿ ಜಮೀನಿನ ಫಲವತ್ತನ್ನು ಮಳೆಯ ಪ್ರಮಾಣದಿಂದ ಗಣನೆಗೆ ತೆಗೆದುಕೊಳ್ಳಬಾರದು. ಮಲೆನಾಡಿನ ಖುಷ್ಕಿ ಜಮೀನಿನಲ್ಲಿ ಏನೂ ಆಗುವುದಿಲ್ಲ. ಸ್ವಲ್ಪ ಕಡಿಮೆ ಮಳೆ ಬೀಳತಕ್ಕ ಅರಸೀಕೆರೆ, ಚಿತ್ರದುರ್ಗ, ತಿಪಟೂರು, ತುಮಕೂರು ಇಂಥ ಪ್ರದೇಶಗಳಲ್ಲಿ ಖುಷ್ಕಿ ಜಮೀನಿನಲ್ಲಿ ಶೇಂಗಾ ವಗೈರೆ ಹಾಕಿದ್ದಾರೆ. ಅಲ್ಲಿ ಫಲವತ್ತಾಗಿದೆ ಮಲೆನಾಡಿನಲ್ಲಿ ಖುಷ್ಕಿ ಜಮೀನಿನಲ್ಲಿ ಏನೂ ಬೆಳೆಯುವುದಿಲ್ಲ ಆದರಿಂದ ಬರುವ ಉತ್ಪತ್ತಿ ದೃಷ್ಟಿಯಿಂದ ನೋಡಬೇಕಾಗುತ್ತದೆ. ಮಳೆಯ ಆಧಾರದ ಮೇಲೆ ಮಾಡಿದೆ ಏನು ಉತ್ಪತ್ತಿ ಬರುತ್ತದೆ ಎನ್ನುವುದನ್ನು ನೋಡಿಕೊಂಡು ಆದರ ಮೇಲೆ ವಿಂಗಡಣೆ (Classification) ಮಾಡಬೇಕು ಎಂದು ಹೇಳುತ್ತೇನೆ.

ಇನ್ನು ಕಾಪಾನ್ಸೇಷನ್ ಕೊಡುವಾಗ ದೊಡ್ಡ ದೊಡ್ಡ ಲ್ಯಾಂಡ್ ಹೋಲ್ಡರ್ಸ್ ಜಮೀನು ಕಳೆದುಕೊಂಡರೆ ಏನು ಕಾಂಪನ್ಸೇಷನ್ ಕೊಡುತ್ತೀರೋ ಅದಕ್ಕಿಂತ ವಿಗಿಲಾಗಿ ಸಣ್ಣ ಹಿಡುವಳಿದಾರರು ಕಳೆದುಕೊಂಡರೆ ಹೆಚ್ಚು ಪ್ರಮಾಣದಲ್ಲಿ ಸರಿಯಾಗಿ ಕಾಂಪನ್ಸೇಷನ್ ಕೊಡಬೇಕು. ಈಗ ಮಾರ್ಕೆಟ್ ವ್ಯಾಲ್ಯೂ ಏನು ಅವಾರ್ಡಿಂಟನ್ನು ಅಧಿಕಾರಿಗಳು ಡಿಸ್ಟೈಡ್ ಮಾಡಿ ಕೊಡುತ್ತಾರೆ. ಸಣ್ಣ ಹಿಡುವಳಿದಾರರು ಜಮೀನನ್ನು ಕಳೆದುಕೊಂಡಾಗ ಆದೇರೀತಿ ಕಾಂಪನ್ಸೇಷನ್‌ಕೊಡುವುದು ನ್ಯಾಯವಾಗಿದೆ. ರೆವಿನ್ಯೂ ಡಿಪಾರ್ಟ್‌ಮೆಂಟಿನವರು ಕೆಲವು ಪ್ರಾಜೆಕ್ಟ್ ಏರಿಯಾಕ್ಕೆ ಜಮೀನನ್ನು ಅಕ್ವಯರ್ ಮಾಡಿಕೊಂಡಾಗ ಸರ್ಕಾರದವರು ಕಾಂಪನ್ಸೇಷನ್ ಕೊಡುತ್ತಾರೆ. ಸಣ್ಣ ಹಿಡುವಳಿದಾರರುಗಳು ಎಲ್ಲಾ ಜಮೀನನ್ನು ಈ ರೀತಿ ಕಳೆದುಕೊಂಡಾಗ ತಮ್ಮ ಜೀವನಕ್ಕೆ ಬೇರೆ ಉಪಾಯವೇ ಇರುವುದಿಲ್ಲ. ಅಂಥ ಸಮಯದಲ್ಲಿ ಅವರಿಗೆ ಸರಿಯಾದ ರೀತಿ ಮಾರ್ಕೆಟ್ ವ್ಯಾಲ್ಯುನಂತೆ ಕಾಂಪನ್ಸೇಷನ್ ಕೊಡಬೇಕು ಎಂದು ಹೇಳುತ್ತೇನೆ. ರೆಸ್ಯೂಮ್ ಮಾಡಿಕೊಳ್ಳಬೇಕಾದರೆ, ಮೈನರ್ಸ್ ಮತ್ತು ವಿಧವೆಯರು ಗೇಣಿಗೆ ಕೊಟ್ಟಿರುವ ಸಂದರ್ಭಗಳಲ್ಲಿ, ಅಂಥ ಮೈನರ್ ಮಕ್ಕಳು ಮೆಜಾರಿಟಿಗೆ ಬಂದಾಗ ಅವರು ಇಷ್ಟ ಪಟ್ಟರೆ ಅಂಥಾದ್ದು ರೆಸ್ಯೂಮ್ ಮಾಡುವುದಕ್ಕೆ ಅವಕಾಶ ಇರಬೇಕು. ಗೇಣಿದಾರರ 18 ವರ್ಷದವರೆಗೆ ಉತ್ಪತ್ತಿ ಮಾಡಿಕೊಟ್ಟಿರುತ್ತಾನೆ ಎಂದು ಇವರನ್ನು ಓಡಿಸುವುದು ಸರಿಯಲ್ಲ. ಎಂದು ಕೆಲವು ಮಾನ್ಯಸದಸ್ಯರು ಹೇಳಿದರು. ಇದು ಸರಿಯಾದುದಾದರೆಯಲ್ಲ ಆದ್ದರಿಂದ ಮೈನರ್ಸ್ ವಿಧವೆಯರು ಇದ್ದರೆ ಡಿಸ್ ಏಬಲ್ ಇದ್ದರೆ, ಅವರಿಗೆ ರಕ್ಷಣೆ ಕೊಡತಕ್ಕದ್ದು ಒಳ್ಳೆಯದು. ಅವರಿಗೆ ರೆಸ್ಯೂಮ್ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶ ಇರಬೇಕು. ಸೆಕ್ಷನ್ 103ರ ತಿದ್ದುಪಡಿ ಮಸೂದೆಯಲ್ಲಿ ಕೆಲವು ಸಂದರ್ಭದಲ್ಲಿ ಸರ್ಕಾರದವರು ಲೀಸ್ ಕೊಡುವುದಕ್ಕೆ ಅವಕಾಶ ಇದೆ. ದೊಡ್ಡ ದೊಡ್ಡ ಕೈಗಾರಿಕೆ ಗಳವರು ಜಮೀನನ್ನು ಲೀಸ್ ತೆಗೆದುಕೊಂಡು ಕಚ್ಚಾ ಬೆಳೆಗಳನ್ನು ಬೆಳೆಯುವುದಕ್ಕೆ (Land Reforms Bill of 1961) ಸೆಕ್ಷನ್ 103 ರಲ್ಲಿ ಅವಕಾಶ ಇದೆ. ಈಗ ತಂದಿರತಕ್ಕ ಮಸೂದೆಯಲ್ಲಿ ಅವಕಾಶ ಇಲ್ಲ. ಎಲ್ಲೆಲ್ಲಿ ಕರಾಬು ಜಮೀನು, ಬರಡು ಜಮೀನು ಇದೆಯೋ ಎಲ್ಲೆ ಇಂಥ ಸರ್ಕಾರದ ಜಮೀನನ್ನು ವ್ಯವಸಾಯ ಮಾಡುವುದಕ್ಕೆ ಸಾಧ್ಯವಿಲ್ಲವೋ ಅಂಥ ಜಮೀನನ್ನು ಲೀಸ್ ಮೇರೆ ಕೊಡುವ ಅವಕಾಶಬೇಕು. ಕೈಗಾರಿಕೆಗಳವರು ಇಂಥ ಜಮೀನಿನಲ್ಲಿ ತಮ್ಮ ಸ್ವಂತ ಖರ್ಚಿನಲ್ಲಿ ಬೇಕಾದ ಕಚ್ಚಾ ಬೆಳೆಯನ್ನು ಬೆಳೆದುಕೊಳ್ಳುತ್ತಾರೆ. ಅವರು ಸರ್ಕಾರಕ್ಕೆ ರಾಯಲ್ಟಿ ಕೊಡಬೇಕು, ಆ ರೀತಿ ಏರ್ಪಾಡನ್ನು ಸೆಕ್ಷನ್ 103 ನ್ನು ಈತಿದ್ದುಪಡಿ ಮಸೂದೆಯಲ್ಲಿ ಅಳವಡಿಸಿದರೆ ಒಳ್ಳೆಯದು ಎಂದು ನಾನು ತಿಳಿದುಕೊಂಡಿದ್ದೇನೆ.

ಇನ್ನು ಪಹಣಿ ಬರೆಯುವುದರಲ್ಲಿ ಬಹಳ ನ್ಯೂನತೆಗಳು ಇವೆ; ಅನೇಕ ಸಂದರ್ಭದಲ್ಲಿ ಗೇಣಿದಾರರ ವಿರುದ್ಧವಾಗಿ ಪಹಣಿ ಬರೆಯದೆ ಇರುವುದು ಉಂಟು; ಇಲ್ಲ ಎಂದು ನಾನು ಹೇಳುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಶ್ಯಾನುಭೋಗ ಮತ್ತು ವಿಲೇಜ್ ಅಕೌಂಟೆಂಟ್ಸ್ ಅನ್ನು ನಪಡಿಸಿಕೊಂಡು ಜಮೀನು ದಾರರು ವಿರುದ್ಧವಾಗಿ ಪಹಣಿ ಬರೆದುಕೊಂಡು ಕೋರ್ಟಿಗೆ ಹೋಗಿರುವ ಕೇಸುಗಳೂ ಇವೆ. ಇಂಥ ಸಂದರ್ಭಗಳಲ್ಲಿ ಜಮೀನಿನ ಅಮಲುದಾರು ಜನರ ಅಭಿಪ್ರಾಯ ಪಡೆದು ಒಂದು

ತೀರ್ಮಾನ ಮಾಡಬೇಕಾಗುತ್ತದೆ. ವಿಲೇಜ್ ಕೋರ್ಟು ತರಹ ಮಾಡಿ ಆಜು ಬಾಜು ಯಾರು ಸಾಗುವಳಿ ಮಾಡುತ್ತಾರೋ ಅವರಿಂದ ಅಭಿಪ್ರಾಯ ಪಡೆದು ತೀರ್ಮಾನ ಮಾಡುವುದು ಸುಲಭ. ಒಂದು ಊರಲ್ಲಿ ಎಲ್ಲರ ಬಾಯನ್ನು ಮುಚ್ಚಿ ಅನ್ಯಾಯ ಹೇಳುವುದಕ್ಕೆ ಆಗುವುದಿಲ್ಲ. ವಾಸ್ತವಾಂಶ ಹೊರಗಡೆ ಬಂದೇ ಬರುತ್ತದೆ. ಪರಿಣಿತಿ ಬರೆಯುವುದರಲ್ಲಿ ಎಲ್ಲೆಲ್ಲಿ ನ್ಯೂನತೆ ಇದೆ ಅದನ್ನು ಈ ರೀತಿ ಸರ್ಕಾರ ತಿದ್ದುಪಡಿ ಮಾಡಿ ಸರಿಪಡಿಸಬೇಕು. ಈ ಮಸೂದೆಯಿಂದ ರೈತಾಪಿ ವರ್ಗದವರಿಗೆ ಮತ್ತು ಮಣ್ಣಿನ ಮಕ್ಕಳು ಎಂದು ನಾವು ಏನು ಹೇಳುತ್ತೇವೆಯೋ ಅವರಿಗೆ ಬೇಸಾಯದಲ್ಲಿ ಆಸಕ್ತಿ ಬರುವಂತೆ ಮಾಡಬೇಕು. ಯಾವುದೇ ಕಾರಣದಿಂದ ಬೇಸಾಯದಿಂದ ಬರತಕ್ಕ ಉತ್ಪತ್ತಿ ಕಡಮೆ ಯಾಗಬಾರದು. ಈ ದೃಷ್ಟಿಯನ್ನು ಇಟ್ಟುಕೊಂಡು ಈ ಮಸೂದೆಯನ್ನು ಈ ಸದನದಲ್ಲಿ ಪಾಸು ಮಾಡಬೇಕಾಗಿದೆ. ಅನೇಕ ಸದಸ್ಯರು ಅಭಿಪ್ರಾಯ ಪಟ್ಟಿರುವಂತೆ ಈ ಮಸೂದೆ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗಬೇಕಾಗಿದೆ. ಆಗ ಸೆಲೆಕ್ಟ್ ಕಮಿಟಿಯಲ್ಲಿ ಯಾರು ಇರುತ್ತಾರೋ ಆ ಮಹನೀಯರು ಹೆಚ್ಚಿನ ರೀತಿಯಲ್ಲಿ ಪರಿಷ್ಕರಿಸಿ ನಮ್ಮ ಫೋಷಣೆ ಏನು ಇತ್ತು ಅದಕ್ಕೆ ಅನುಸಾರವಾಗಿ ಮಾಡುತ್ತಾರೆ ಎಂದು ನಾನು ನಂಬಿದ್ದೇನೆ.

ಇನ್ನು ಸೀಲಿಂಗ್ ವಿಚಾರದಲ್ಲಿ 10 ಎಕರೆ, 18 ಸ್ಟಾಂಡರ್ಡ್ ಎಕರೆ ಇರಬೇಕೇ, ಎಂದು ನಮ್ಮ ಕೇಂದ್ರದ ಭೂಸುಧಾರಣಾ ಸಲಹ ಸಮಿತಿಯವರು ಅಭಿಪ್ರಾಯ ಪಟ್ಟಿದ್ದಾರೆ. ಅದನ್ನು ಬಿಟ್ಟು ನಾವು ಹೋಗುವಂತೆ ಇಲ್ಲ. ಆಡಳಿತ ಪಕ್ಷ ಅಂತಿಮವಾಗಿ ಏನು ಒಂದು ತೀರ್ಮಾನ ತೆಗೆದು ಕೊಳ್ಳುತ್ತದೋ ಅದಕ್ಕೆ ನಮ್ಮ ಪಕ್ಷದವರು ಎಲ್ಲರೂ ಬದ್ಧರಾಗಿದ್ದೇವೆ, ಈ ವಿಚಾರದಲ್ಲಿ ನಾನು ಹೆಚ್ಚಿಗೆ ಹೇಳುವುದಿಲ್ಲ.

ಶ್ರೀ ಕೋಣಂದೂರು ಲಿಂಗಪ್ಪ.—ಹತ್ತು ಎಕರೆಗೆ ಒಪ್ಪುತೀರಾ?

ಶ್ರೀ ಕೆ. ಎಂ. ರುದ್ರಪ್ಪ.—ಹತ್ತು ಎಕರೆಯಾಕೆದ 18 ಎಕರೆ ಇರಬೇಕು. ನಮ್ಮ ಪಾರ್ಟಿಯಲ್ಲಿ ಏನು ತೀರ್ಮಾನ ಮಾಡುತ್ತೇವೆಯೋ ಆ ತೀರ್ಮಾನಕ್ಕೆ ನಾವು ಎಲ್ಲರೂ ಬದ್ಧರಾಗಿದ್ದೇವೆ. ನಮ್ಮಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ. ನಮ್ಮ ಪಾರ್ಟಿಯಲ್ಲಿ ನಾವೆಲ್ಲರೂ ಒಗ್ಗಟ್ಟಿನಿಂದ, ನಮ್ಮ ಮುಖಂಡರುಗಳು ಏನು ತೀರ್ಮಾನ ಮಾಡುತ್ತಾರೆ, ಮತ್ತು ನಮ್ಮ ಅಭಿಪ್ರಾಯಗಳನ್ನು ಫ್ರೀಆಗಿ ಹೇಳುವುದಕ್ಕೆ ಅವಕಾಶವಿದೆ; ಅವನ್ನೆಲ್ಲಾ ತಿಳಿದು ಅಂತಿಮವಾಗಿ ಏನು ತೀರ್ಮಾನಕ್ಕೆ ಬರುತ್ತದೆ ಅದಕ್ಕೆ ನಾವೆಲ್ಲರೂ ಬದ್ಧರು, ಎಂದು ಹೇಳಿ ಈ ಬಿಲ್ಲನ್ನು ಸ್ವಾಗತ ಮಾಡುತ್ತೇನೆ.

† ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗಮಂಗಲ)—ಸಭಾಪತಿಗಳೇ ಇದುವರೆಗೆ ಮಾತನಾಡಿದಂಥ ಸ್ನೇಹಿತರು ಅವರು ಯಾವ ಯಾವ ಪರಿಸ್ಥಿತಿಯಲ್ಲಿ ಇದ್ದಾರೆಯೋ, ಅಲ್ಲಿಯ ಸಂದರ್ಭಗಳನ್ನು, ಸನ್ನಿವೇಶಗಳನ್ನು ಗಣನೆಗೆ ತೆಗೆದುಕೊಂಡು ತಮಗೆ ಸೂಕ್ತವಾಗಿ ಕಂಡುಬಂದಂಥ ಸಲಹೆಗಳನ್ನು ಈ ಭೂಸುಧಾರಣ ಮಸೂದೆ ಕೊಟ್ಟಿದ್ದಾರೆ. ನಾನು ಬಂದಿರತಕ್ಕ ಜಾಗವನ್ನು ಹಿನ್ನೆಲೆಯಾಗಿಟ್ಟುಕೊಂಡು ಈ ಸದನದ ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ಕೆಲವು ಸಲಹೆಗಳನ್ನು ಕೊಡುವುದು ನನ್ನ ಕೆಲಸವಾಗಿದೆ. ಈಗ ತಿದ್ದುಪಡಿಯಲ್ಲಿ ಮಸೂದೆಯಲ್ಲಿರತಕ್ಕಂಥ ಆಕ್ಷೇಪಣಾರ್ಹವಾದ ಕೆಲವು ಅಂಶಗಳನ್ನು ತಮ್ಮ ಗಮನಕ್ಕೆ ತರಲು ಇಷ್ಟಪಡುತ್ತೇನೆ. ಮೊಟ್ಟಮೊದಲನೆಯದಾಗಿ 16 ಕಿಲೋ ಮೀಟರ್ ಅಂತರದಲ್ಲಿ ಜಮೀನುಗಳನ್ನು ಇಟ್ಟುಕೊಳ್ಳಬೇಕು. ಹಾಗಿಲ್ಲದಿದ್ದರೆ ಅದು ಸರ್ಕಾರದ ವಶವಾಗುತ್ತದೆ ಎನ್ನುವ ಪ್ರತಿಬಂಧಕ ಏನು ಇದೆ ಅದರಿಂದ ನಮ್ಮ ಜನಕ್ಕೆ ಅರ್ಥಾತ್ ನಾಗಮಂಗಲದ ಜನಕ್ಕೆ ಎಷ್ಟು ಅನ್ಯಾಯವಾಗುತ್ತದೆ ಎನ್ನುವ ವಿವರಣೆಯನ್ನು ಕೊಡಲು ಇಷ್ಟಪಡುತ್ತೇನೆ. ವಿಧಾನಸೌಧವನ್ನು, ಬೆಂಗಳೂರಿನಲ್ಲಿರುವಂತಹ ಎಲ್ಲಾ ಸರ್ಕಾರಿ ಕಚೇರಿಗಳನ್ನು ಕಾಯುತ್ತಾ ಇರತಕ್ಕ ಜನ ನಮ್ಮವರು. ಅವರು ಈ ಕಾನೂನು ದೃಷ್ಟಿಯಲ್ಲಿ ಯೋಚನೆ ಮಾಡಿದರೆ ಎಲ್ಲರೂ ಜಮೀನನ್ನು ಇಟ್ಟುಕೊಂಡಿರುವವರು. ಆದರೆ ಅವರು ನಾಳ್ಕನ್ನೇ ವರ್ಗದ ನಾಗರಿಕರು ಅವರ ಗತಿ ಏನು? ಸ್ವಲ್ಪ ಮಟ್ಟಿಗೆ ಯೋಚನೆ ಮಾಡಿ. ಭವಿಷ್ಯತಿಯಲ್ಲಿ ನಮ್ಮ ಜನ ಇದ್ದಾರೆ. ಅವರು ಅತಿ ಹೊಟ್ಟೆಗೆ ಜೀವನ ನಡೆಸಲಾರದೆ ಕ್ಷೇಮಕ್ಕೆ ತಮ್ಮ ಊರಿಗೆ ನಿರ್ವಹಣೆಗಾಗಿ ಇಲ್ಲಿಗೆ ವಲಸೆ ಬಂದು ತಮ್ಮ ಜಮೀನನ್ನು ಉತ್ಪತ್ತಿ ಪಡೆದು, ಇಲ್ಲೂ ಸಹ ಸ್ವಲ್ಪ ಸಂಭಾವನೆಯನ್ನು ಪಡೆದು ಜೀವನ ನಡೆಸುತ್ತಾ ಇರತಕ್ಕ ಕನಿಷ್ಟ ವರ್ಗದ ಜನ ಇದ್ದಾರೆ. ನಾಳೆ ಇವರ ಜಮೀನು ಹೋದರೆ ಅವರ ಗತಿಯೇನು? ಜೀವನ ಮಾಡುವುದು ಹೇಗೆ? ನಾನು ಸತ್ಯವನ್ನು ಹೇಳುತ್ತಿದ್ದೇನೆ. ಇಂದು ನಾಗಮಂಗಲದವರು ಮತ್ತು ಕುಣಿಗಲ್‌ನವರು ಬೆಂಗಳೂರಿಗೆ ಬಂದಿದ್ದಾರೆ, ಅವರಿಗೆ ಜೀವನ ಮಾಡುವ ಕಷ್ಟವಾಗಿ ಇಲ್ಲಿ ಬಂದು ಸೇರಿಕೊಂಡಿದ್ದಾರೆ. ಹೊಟ್ಟೆಪಾಡಿಗಾಗಿ ಬಂದು ಸೇರಿಕೊಂಡಿದ್ದಾರೆ ಎಂದು ಹೇಳಲು ಅವಮಾನವಾಗುವುದು. ಆದರೂ ಕೂಡ ಸತ್ಯವನ್ನು ಇಲ್ಲಿ ಪ್ರತಿಪಾದಿಸಬೇಕಾಗಿದೆ. ಅಂಥ ಜನರ ಗತಿಯೇನು? ನಾಳೆ ಅವನು ಸತ್ತರೆ ಅವನ ಮಕ್ಕಳ ಗತಿಯೇನು? ಆ ಮಕ್ಕಳಿಗೆ ಸರಕಾರ ಕೆಲಸ ಕೊಡು

(ಶ್ರೀ ಎಚ್. ಟಿ. ಕೃಷ್ಣಪ್ಪ)

ವುದೇ? ಕೊಡಲು ಕಾಯುದೆಯ ಲ್ಲಿ ಕಲಂ ಇದೆಯೇ ? ಇಂಥ ಒಂದು ಪರಿಸ್ಥಿತಿ ಇದೆ, ಇದನ್ನು ಗಮನಿಸ ಬೇಕು. 16 ಕಿಲೋ ಮೀಟರ್ ಎಂದರೆ ಆಕಾಶ ಮಾರ್ಗದಲ್ಲೋ ಅಥವ ಕಾಲು ನಡಿಗೆಯಲ್ಲೋ ಎಂದು ಕೇಳಬೇಕಾಗಿದೆ. ಮು ನಾಡು ಪ್ರದೇಶದಲ್ಲಿ ಮೂರು ಮೈಲಿ ಅಂದುಕೊಂಡು ನುತ್ತಿಕೊಂಡು ಬಂದರೆ 20 ಮೈಲಿಯಾಗುವುದು, 20 ಮೈಲಿ ಹೋಗಿ ವ್ಯವಸಾಯ ಮಾಡಿಸಬಹುದು. ಈ ಒಂದು ವರ್ಗದ ಜನರ ಕಷ್ಟ ಗಮನಿಸಿ ಕಾನೂನು ಬದಲಾಯಿಸಬೇಕು ಎಂದು ಕೇಳಿಕೊಳ್ಳುತ್ತೇನೆ. 1961 ರ ನಮ್ಮಲ್ಲಿ ಒಂದು ಲಕ್ಷ 3 ಸಾವಿರ ಜನವಿದ್ದರು, 1971ರಲ್ಲೂ ಇಷ್ಟೇ ಇದ್ದಾರೆ, ಬದಲಾವಣೆಯಾಗಿಲ್ಲ. ಸುಮಾರು 70 ಸಾವಿರ ಜನಸಂಖ್ಯೆ ಹೆಚ್ಚಾಗಿದೆ. ಅನೇಕರು ಜೀವನಕ್ಕಾಗಿ ಬೇರೆ ಕಡೆಗೆ ಹೋಗಿದ್ದಾರೆ. ಈ ದಿವಸ ನಮ್ಮ ಜಮೀನು ಕಿತ್ತುಕೊಳ್ಳುವುದರಿಂದ ಮಕ್ಕಳು ಅನಾಥರಾಗುತ್ತಾರೆ. ನಾವು ನಿವೃತ್ತರಾದಾಗ ಮಕ್ಕಳು ಅನಾಥರಾಗುತ್ತಾರೆ, ಇದನು ಗಮನಿಸಬೇಕು.

ಇನ್ನೊಂದು ವಿಚಾರ. ಈಗ 12 ಸಾವಿರ ರೂಪಾಯಿ ಆದಾಯ ವ್ಯವಸಾಯೇತರ ಮೂಲ ಗಳಿಂದ ಪಡೆಯುವವರು ಜಮೀನಿಟ್ಟುಕೊಳ್ಳಬಾರದು ಎಂದಿದೆ. ಇದರ ಬಗ್ಗೆ ಹೇಳುವುದಾದರೆ ಮಣ್ಣಿನ ಮಕ್ಕಳಾಗಿ ಸರಕಾರಿ ಹುದ್ದೆಗೆ ಸೇರಿ ಸಂಪಾದನೆ ಮಾಡುವವರೂ ಕೆಲವರಿದ್ದಾರೆ, ಕೆಲವರು ಕಾರ್ಖಾನೆಗಳಲ್ಲಿ ಕೆಲಸಮಾಡಬಹುದು, ಕೆಲವರು ವ್ಯಾಪಾರ ವಗೈರೆ ಮಾಡಬಹುದು. ಅಂಥವರನ್ನು ನಾವು ಬೆರಳಿನಲ್ಲಿ ಎಣಿಕೆ ಮಾಡಬಹುದು. ಇದನ್ನು ಗಮನಿಸಬೇಕು. ವ್ಯವಸಾಯ ವನ್ನ ನಂಬಿಸಿರುವವರಿಗೆ ಸರಕಾರದಲ್ಲಿ ಅಡಳಿತ ನಡೆಸುವ ಸ್ಥಾನಮಾನ ಸಾಕಾದಷ್ಟು ಪ್ರಮಾಣ ದಲ್ಲಿ ಸಿಕ್ಕಿಲ್ಲ. ಈ ಕಾಯಿದೆ ಮಾಡುವುದಾದರೆ ವ್ಯವಸಾಯಗಾರ ಸರಕಾರಿ ನೌಕರಿಗೆ ಬರುವಅವ ಕಾಶ ತಪ್ಪಿಹೋಗುವುದು, ನೌಕರಿ ಸಿಕ್ಕದೆ ಇರಬಹುದು, ಅದಕ್ಕಾಗಿ ಖರ್ಚುಮಾಡಬಾರದು ಎಂಬ ಭಾವನೆ ಬರಬಹುದು. ಮುಂದೆ ಅವನ ಮಕ್ಕಳಿಗೆ ಸರಕಾರಿ ಹುದ್ದೆ ಕೊಡುವರೇ ? ಅವನ ಮಗ ಐ.ಎ.ಎಸ್. ಆಫೀಸರಾಗಬಹುದೇ ? ಈಗಲೇ ವಿದ್ಯಾವಂತರಿಗೆ ಕೆಲಸವಿಲ್ಲ, ಅವರ ಬಗ್ಗೆ ಅನುಕಂಪ ವ್ಯಕ್ತವಾಗುತ್ತಿದೆ. ಹತ್ತು ವರ್ಷವಾದಮೇಲೆ ಬರುವ ಭಯಂಕರ ಪರಿಸ್ಥಿತಿಯನ್ನು ಎದುರಿಸ ಬೇಕಾಗುವುದು. ಆದುದರಿಂದ 12 ಸಾವಿರ ರೂಪಾಯಿ ಆದಾಯದ ಮಿತಿ ಇರುವುದನ್ನು ಮತ್ತು 16 ಕಿಲೋ ಮೀಟರ್ ಎಂದು ನಿರ್ಬಂಧಕಾರಿಯಾಗುವುದನ್ನು ತೆಗೆದುಹಾಕಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ವ್ಯವಸಾಯ ಮಾಡುವವರು 5 ವರ್ಷ ಸಂಪಾದನೆ ಮಾಡಿ ಆದಾಯ ತೆರಿಗೆ ಕೊಟ್ಟು ಆದ ಮೇಲೆ ಮುಂದೆ ಅವನಿಗೆ ಇಷ್ಟವಾಗಬಹುದು. ಆಗೇನು ಮಾಡಬೇಕು ? 12 ಸಾವಿರ ರೂಪಾಯಿ ಸಂಪಾದನೆ ಮಾಡುವವನು 24 ಸಾವಿರ ರೂಪಾಯಿ ಕಳೆದುಕೊಂಡರೆ ಆಗ ಅವನಿಗೆ ಜಮೀನು ಕೊಡುವಿರಾ ? ಅದುವರೆಗೆ ಜಮೀನೆಲ್ಲಾ ಹಂಚಿಕೆಯಾಗಿರುತ್ತದೆ. ಅವನ ಕುಟುಂಬದ ಗತಿ ಆಗೇನಾಗಬೇಕು ಎಂಬುದನ್ನು ದೃಷ್ಟಿಯ ಡಬೇಕು. ಆದುದರಿಂದ ಯಾವ ದೃಷ್ಟಿಯಿಂದಲೂ ಕೂಡ ವ್ಯವಸಾಯೇತರ ಮೂಲದಿಂದ 12 ಸಾವಿರ ರೂಪಾಯಿ ಆದಾಯ ಬರುವ ಮನುಷ್ಯ ಜಮೀನಿಟ್ಟುಕೊಳ್ಳಬಾರದು ಎಂಬ ವಾದವನ್ನು ಪುಷ್ಟೀಕರಿಸಬಾರದು ಎಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನೂ ಅನೇಕ ವಿಚಾರಗಳನ್ನು ತಿಳಿಸಬಯಸುತ್ತೇನೆ. ಈ ಮಸೂದೆಯಲ್ಲಿ ಯಾವ ಯಾವ ಜಮೀನಿಗೆ ಎಷ್ಟು ನೀರಿನ ಸೌಲಭ್ಯವಿದೆ ಎಂದು ನೋಡಿ ಅದರ ಆಧಾರದ ಮೇಲೆ ಜಮೀನುಗಳನ್ನು ಬೇರೆ ಬೇರೆ ವರ್ಗ ಮಾಡಿ ವಿಂಗಡಿಸಿದ್ದಾರೆ. ಈ ವರ್ಗೀಕರಣ ತಪ್ಪು ಎಂಬುದು ನನ್ನ ಭಾವನೆ. ಏಕೆಂದರೆ ಇದರ ಜೊತೆಗೆ ಜಮೀನು ಎಷ್ಟು ಫಲವತ್ತಾಗಿದೆ, ಮಾರು ಕಟ್ಟೆಯಲ್ಲಿ ಅದರ ಬೆಲೆ ಹೇಗಿದೆ, ಸಂಚಾರ ಸೌಲಭ್ಯ ಅಲ್ಲಿ ಹೇಗಿದೆ ಎಂಬುದನ್ನೆಲ್ಲಾ ಗಮನಿಸಬೇಕು. ಬೇಕಾದರೆ ನಾಗಮಂಗಲ ತಾಲ್ಲೂಕಿನ 50 ಎಕರೆ ಜಮೀನನ್ನು ಬೆಂಗಳೂರಿನ 2 ಎಕರೆ ಜಮೀನಿಗೆ ಅದಲುಬದಲು ಮಾಡಿ ಕೊಳ್ಳಲು ನಾನು ಸಿದ್ಧ. ವ್ಯವಸಾಯೇತರ ಉದ್ದೇಶಗಳಿಗೆ ಯಾವುದಾದರೂ ಜಮೀನನ್ನ ಪರಿ ವರ್ತನೆಮಾಡಿದಾಗ ಬೆಲೆ ಹೆಚ್ಚುವುದು, ಇದು ಗಮನಿಸಬೇಕಾದ ಅಂಶ ಎಂದು ಬಿನ್ನಹಮಾಡಿ ಕೊಳ್ಳುತ್ತೇನೆ.

ಬಹಳ ಮುಖ್ಯವಾದ ಅಂಶ 16 ಕಿಲೋಮೀಟರುಗಳಿಗಿಂತ ಹೆಚ್ಚು ದೂರದಲ್ಲಿ ಜಮೀನಿಟ್ಟು ಕೊಳ್ಳಲು ಅವಕಾಶವಿಲ್ಲವೆಂಬುದು. ಮತ್ತು 12 ಸಾವಿರ ರೂಪಾಯಿಗಳಿಗಿಂತ ಮೇಲ್ಪಟ್ಟು ಆದಾಯ ಇರುವವರು ಜಮೀನಿಟ್ಟುಕೊಳ್ಳಬಾರದು ಎಂಬುದು. ಕಾಯಿದೆ ಮಾಡುವುದು ಈಗಿನ ಜನರಿಗೆ ಮಾತ್ರವಲ್ಲ, ಮುಂದಿನ ಪೀಳಿಗೆಗೂ ಕೂಡ ಅನ್ವಯಿಸುವುದು. ಇಂದು 10 ಎಕರೆ ಇರುವವ ರಿಗೆ ನಾರ್ನಾರು ವರ್ಷಗಳಲ್ಲಿ ನಾಲ್ಕೈದು ಮಕ್ಕಳಾದರೆ ಹೆಚ್ಚು ಜಮೀನು ಬೇಕಾಗುವುದು. ಆಗ

ಗಳೆನು ? ಈಗಿರುವ ಪ್ರಕಾರ ಕಾನೂನಾದರೆ ಜನರಿಗೆ ಜಮೀನಿನ ಮೇಲಿರುವ ಆಸಕ್ತಿ ಹೊರಟು ಹೋಗುವುದು. ಕೊನೆಯವರೆಗೆ ಒಡೆತನವಿದ್ದರೆ ಸಾಲ ಮಾಡಿ ಜಮೀನು ಅಭಿವೃದ್ಧಿ ಮಾಡಬಹುದು. ನನ್ನ ಜಮೀನು ನನ್ನ ಮಕ್ಕಳಿಗೆ ಸೇರುವುದು ಎನ್ನುವ ಭರವಸೆ ಇಲ್ಲದಿದ್ದರೆ ಜನರಿಗೆ ನಿರಾಶೆಯಾಗುವುದು. ಇದು ಸ್ವಾಭಾವಿಕವಾದ ವಿಚಾರ. ಆದುದರಿಂದ ಭೂಮಿತಿ ಗೊತ್ತು ಮಾಡುವಾಗ ಇದನ್ನೆಲ್ಲಾ ಗಮನಿಸಬೇಕು. ಈಗಿರುವಂತೆ 10 ಎಕರೆ ಮಿತಿ ಹಾಕಿದರೆ ಏನೂ ಅನುಕೂಲವಾಗುವುದಿಲ್ಲ. ಮೂಲಭೂತವಾದ ಉದ್ದೇಶ ಜಮೀನಿಲ್ಲದವರು ಯಾರಿದ್ದಾರೋ ಅವರಿಗೆ ಅದನ್ನು ಕೊಡಬೇಕೆಂಬುದು. ಜಮೀನಿಲ್ಲದಿರುವವರಿಗೆ ಕೊಡುವುದಕ್ಕೆ ಸಾಧ್ಯವಿಲ್ಲದಿರುವಾಗ ಉದ್ಯೋಗ ಇಲ್ಲದಿರುವವರಿಗೆ ಸರಕಾರ ಬೇರೆ ಉದ್ಯೋಗ ಕೊಡುವುದು! ಈಗಾಗಲೇ ಭೂಮಿ ಒತ್ತಡ ಹೆಚ್ಚಾಗಿರುವ ಕಾಲದಲ್ಲಿ ಇನ್ನೂ ಹೆಚ್ಚು ಒತ್ತಡ ತರುವ ಪ್ರಯತ್ನ ಮಾಡಬಾರದು ಹಾಗೆ ಮಾಡುವುದರಿಂದ ನಮ್ಮ ಉದ್ದೇಶ ಸಾಧನೆಯಾಗುವುದಿಲ್ಲ. ಅನಾವಶ್ಯಕವಾದ ಗೊಂದಲ ಕ್ಷೋಭೆ ಮುಂತಾದವುಗಳಿಗೆ ಸಮಾಜದಲ್ಲಿ ಅವಕಾಶ ಮಾಡಬಾರದು. ಈಗಿರುವಂತೆ ಹೆಚ್ಚು ವ್ಯಾಜ್ಯ ಪ್ರಾರಂಭವಾಗಲು ಅವಕಾಶವಿದೆ. ಆದುದರಿಂದ ತಕ್ಕ ತಿದ್ದುಪಡಿ ಮಾಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

5-30 P.M.

ನಿರುದ್ಯೋಗಿಗಳಾದ ಜನರಿಗೆ ಅವರವರ ಯೋಗ್ಯತೆಗೆ ತಕ್ಕಂತೆ ಬೇರೆ ಕೆಲಸಗಳನ್ನು ಸರ್ಕಾರದವರು ಒದಗಿಸಬೇಕು. ಇದು ಅವರ ಆದ್ಯ ಕರ್ತವ್ಯ. ಆದರೆ ನಾನು ನಮ್ಮ ಸಾಗರ ತಾಲ್ಲೂಕಿನ ಮಟ್ಟಿಗೆ ಹೇಳುವುದಾದರೆ ನಮಗೆ ಸರ್ಕಾರದವರು ನಾಲ್ಕನ್ನೇ ದರ್ಜೆಯ ನೌಕರಿಗಳನ್ನೇ ಕೊಡಲಿ— ಸಾಕು, ನಮ್ಮ ಜನರಿಗೆ ಅವರೇನೂ ಭೂಮಿಯನ್ನು ಕೊಡಬೇಕಾಗಿಲ್ಲ ಎಂದು ಹೇಳುತ್ತೇನೆ. ಈ ದಿವಸ ಏನೊಂದು ಪರಿಸ್ಥಿತಿ ಇದೆಯೋ ಅದು ಇನ್ನು ಹತ್ತಾರು ವರ್ಷಗಳು ಕಳೆದ ನಂತರ ಇರಲಾರದು. ಹಾಗೆ ಪರಿಸ್ಥಿತಿ ಬದಲಾಯಿಸಬಹುದು ಎಂಬುದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಕಾನೂನುಗಳನ್ನು ಮಾಡಬೇಕು ಎಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ದಿವಸ ತಮ್ಮ ಕಾನೂನು ಪ್ರಕಾರ ಒಂದು ಸಂಸಾರಕ್ಕೆ ಹತ್ತು ಎಕರೆ ಭೂಮಿ ಇದ್ದರೆ ಸಾಕೆಂದು ಹೇಳಲಾಗಿದೆ. ಇದು ಇನ್ನು ಹತ್ತು ವರ್ಷಗಳು ಕಳೆದಮೇಲೆ ತಾನಾಗೇ 2 ಕರೆಗೆ ಇಳಿಯುತ್ತದೆ. ಆತನಿಗೆ 4 - 5 ಜನ ಮಕ್ಕಳಿದ್ದರೆ ಇದು ತಾನಾಗೇ ಒಡೆದು ಹೋಗುತ್ತದೆ. ಆದುದರಿಂದ ನಾನು ಹೇಳುತ್ತಿರುವುದು ನಮ್ಮ ಈ ಶೋಷಿಯಲಿಸ್ಟ್ ಮಿತ್ರರಿಗೆ ಏನೆಂದರೆ:- ತಾವು ಹೇಳುತ್ತಿರುವ ಪ್ರಕಾರ ಯಾವುದು ಶೋಷಣೆಯ ವರ್ಗ ಎಂಬುದನ್ನು ಕಂಡುಹಿಡಿಯಿರಿ; ಭೂಮಾಲೀಕರನ್ನು ರೈತ ಶೋಷಣೆ ಮಾಡುತ್ತಿದ್ದಾನೆಯೇ ಅಥವಾ ರೈತರನ್ನು ಭೂಮಾಲೀಕ ಶೋಷಣೆ ಮಾಡುತ್ತಿದ್ದಾನೆಯೇ ಯಾರು ಯಾರನ್ನು ಶೋಷಣೆ ಮಾಡುತ್ತಿದ್ದಾರೆಂಬುದನ್ನು ಕಂಡು ಹಿಡಿದು ಅದನ್ನು ತಪ್ಪಿಸಿ. ಬೇಡ ಎನ್ನುವುದಿಲ್ಲ. ಆದರೆ ಯಾವುದೋ ಒಂದು ವರ್ಗ ಯಾರಿಗೋ ಅನ್ಯಾಯ ಮಾಡಿದ್ದರೆ ಅದಕ್ಕೆ ಈಗ ಸರ್ಕಾರದವರು ಬೇರೆ ಇನ್ನಾವುದೋ ಒಂದು ವರ್ಗಕ್ಕೆ ಅನ್ಯಾಯ ಮಾಡುವುದು ಸರಿಯಲ್ಲ. ಆಡಳಿತ ಪಕ್ಷದವರು ಮಾಡುತ್ತಿರುವುದನ್ನೆಲ್ಲಾ ನೆನೆಸಿಕೊಂಡರೆ ಇವರ ಆ ಚುನಾವಣೆಯ ಕಾಲದಲ್ಲಿ ಜನರಿಗೆ ಏನೇನೋ ಪ್ರೋಪೋಜಲ್‌ಗಳನ್ನು ಮಾಡಿದ್ದರು; ಜನರಿಗೆ ಅನೇಕ ಭರವಸೆಗಳನ್ನು ಕೊಟ್ಟಿದ್ದರು. ಆ ಕೊಟ್ಟಿದ್ದ ಎಲ್ಲಾ ಭರವಸೆಗಳಿಗಾಗಿ ಈಗ ಹೇಗೋಮಾಡಿ, ತಪ್ಪೋ ನೆಪ್ಪೋ ಒಂದು ಕಾನೂನನ್ನು ಮಾಡಿ ಬಿಸಾಟಿರಾಯಿತು ಎನ್ನುತಕ್ಕ ಮನೋಭಾವದಿಂದ ಈ ಕಾನೂನನ್ನು ತರುತ್ತಿದ್ದಾರೆ. ಹೀಗೆ ಸರ್ಕಾರದವರು ಆತುರಾತುರವಾಗಿ ಅವಸರದಿಂದ ಬುದ್ಧಿಗೇಡಿತನದಿಂದ ಬುದ್ಧಿ ಶೂನ್ಯರಾಗಿ ತಿಳಿಗೇಡಿತನದಿಂದ ಇಂಥ ಕಾನೂನುಗಳನ್ನು ಮಾಡಬೇಡಿ ಎಂದು ಪ್ರಾರ್ಥಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ಬಿ. ಶಿವಯ್ಯ (ನಂಜನಗೂಡು).—ಸನ್ಮಾನ್ಯ ಅಧ್ಯಕ್ಷರೇ, ಈ ಸದನದ ಮುಂದೆ ಮಾನ್ಯ ಸಚಿವರು ಮಂಡಿಸಿರತಕ್ಕ ಮಸೂದೆಯ ಬಗ್ಗೆ ಈಗಾಗಲೇ ಅನೇಕ ಪಕ್ಷಕ್ಕೆ ಸೇರಿದ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಕೆಲವು ಪಕ್ಷಗಳವರೇನೋ ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟವಾಗಿಟ್ಟಿದ್ದಾರೆ. ಆದರೆ ನಮಾಜವಾದವನ್ನು ಒಪ್ಪಿರತಕ್ಕ ಈ ಕಾಂಗ್ರೆಸ್ (ಒ) ಪಾರ್ಟಿಯವರು ಅದನ್ನು ಜಾರಿಗೆ ತರುವುದರಲ್ಲಿ ಹಿಂದೆ ಬಿದ್ದಿದ್ದಾರೆ. ಇವರು ಈ ದಿವಸ ಖಚಿತವಾಗಿ ತಾವು ಇದನ್ನು ಒಪ್ಪಿದ್ದೇವೆ ಅಥವಾ ಒಪ್ಪುವುದಿಲ್ಲ ಎಂಬುದನ್ನು ಹೇಳುವುದಿಲ್ಲ. ಬೇರೇ ಪಕ್ಷಗಳವರು ತಮ್ಮ ತಮ್ಮ ಪಕ್ಷಗಳ ತತ್ವಕ್ಕನುಸಾರವಾಗಿ ಇದನ್ನು ವಿರೋಧಿಸುತ್ತಿವೆ. ಇನ್ನು ಕೆಲವು ಪಕ್ಷಗಳು ಇದನ್ನು ಅನುಮೋದಿಸಿರುತ್ತವೆ. ಆದರೆ ನಮ್ಮ ಪಕ್ಷದಲ್ಲೂ ಕೂಡ ಗಾಡಿಯು ಟ್ರ್ಯಾಕ್ಟನ್ನು ಬಿಟ್ಟು ಹೋಗುವಂತೆ ಇವರು ತತ್ವವನ್ನು ಒಪ್ಪಿದ್ದರೂ ಇವರಲ್ಲಿ ಒಂದು ಸ್ಥಿರವಾದ ಅಭಿಪ್ರಾಯ ಇರುವುದಿಲ್ಲ. ಅಂದರೆ ಇವರಲ್ಲಿ ಆ ತತ್ವದ ಬಗ್ಗೆ ಸರಿಯಾದ ನಂಬಿಕೆ ಇಲ್ಲದಿರುವುದರಿಂದ

(ಶ್ರೀ ಕೆ. ಬಿ. ಶಿವಯ್ಯ)

ಇವರಲ್ಲಿ ಒಂದು (Settledviews) ಸೆಟ್ಲ್‌ಡ್‌ವ್ಯೂಸ್ ಇಲ್ಲವೆಂದು ಕಾಣುತ್ತದೆ. ಹಾಗೆ ತತ್ವವನ್ನು ಒಪ್ಪಿದ್ದರೆ ಇವರು ದಾರಿ ತಪ್ಪಿಹೋಗುವುದಕ್ಕೆ ಅವಕಾಶವಿಲ್ಲ.

ಇನ್ನು ನಾನು ಈ ಮಸೂದೆಯ ಬಗ್ಗೆ ನನ್ನ ಅಭಿಪ್ರಾಯಗಳೇನು ಎಂಬುದನ್ನು ನಿಮ್ಮ ಮುಂದೆ ಇಡುವುದಕ್ಕೆ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈಗಿರತಕ್ಕ ಸಮಾಜದಲ್ಲಿ ಬ್ರಿಟಿಷರು ಅನೇಕ ವರ್ಗಗಳನ್ನು ರಾಜ ಮಹಾರಾಜರ ಮೊದಲುಗೊಂಡು—ಭೂಮಾಲೀಕ—ರೈತವರ್ಗ ಮತ್ತು ರೈತ—ಕಾರ್ಮಿಕ ವರ್ಗ ಎಂದು ಅನೇಕ ವರ್ಗಗಳನ್ನು ನಿರ್ಮಾಣ ಮಾಡಿದ್ದರು. ದೇಶಕ್ಕೆ ಸ್ವತಂತ್ರ್ಯ ಬಂದ ನಂತರ ಅನೇಕವರ್ಗಗಳು ಈಗಾಗಲೇ ಮಾಯವಾಗಿದ್ದರೂ ಈ ರೈತ—ಭೂಮಾಲೀಕ ವರ್ಗವಿನ್ನೂ ಅಳಿಸಿಹೋಗಲಿಲ್ಲ. ಸಮಾಜದಲ್ಲಿ ಇಂದಿಗೂ ಭೂಮಿ ಮಾಲಕ ಆಬ್‌ಸೆಂಟೀ ಲ್ಯಾಂಡ್‌ಲಾರ್ಡ್ ಸ್ಮಾಲ್ ಪೀಜಿನಲ್ ಫಾರ್ಮರ್ ಇವರೆಲ್ಲಾ ಉಳಿದುಕೊಂಡೇ ಬಂದಿದ್ದಾರೆ. ಈ ದಿವಸ ಅವರವರ ದೃಷ್ಟಿಕೋನಕ್ಕೆ ತಕ್ಕಂತೆ ಅನೇಕರು ಈ 'ರೈತ ಶಬ್ದಕ್ಕೆ ಅರ್ಥಕಲ್ಪನೆಗಳನ್ನು ಮಾಡಿಕೊಂಡಿದ್ದಾರೆ. ನನ್ನ ದೃಷ್ಟಿಯಲ್ಲಿ ರೈತ ಎಂದರೆ ಯಾರು ನೇರವಾಗಿ ಬೆವರನ್ನು ಸುರಿಸಿ ದುಡಿಮೆ ಮಾಡಿ ಭೂಮಿಯನ್ನು ಉತ್ತು ಬಿತ್ತಿ ಬೇಸಾಯ ಮಾಡಿ ಅದರಿಂದ ಬರತಕ್ಕ ಉತ್ಪತ್ತಿಯಲ್ಲೇ ತಾನೂ ತನ್ನ ಸಂಸಾರನನ್ನು ಇನ್ನೊಬ್ಬರ ಸಹಾಯ ಸಹಕಾರಗಳಿಲ್ಲದೆ ಜೀವನ ಸಾಗಿಸತಕ್ಕವನೇ ನಿಜವಾದ ರೈತ. ಇಂಥವನಿಗೆ ನಾವು 'ಉಳುವವನೆ ಹೊಲದ ಒಡೆಯ' ಎಂದು ಹೇಳಬೇಕು. ರೈತ—ಎಂದರ ಇನ್ನೊಂದು ದೃಷ್ಟಿಯಲ್ಲಿ ಈ ಸಭೆಯಮುಂದೆ ಇಟ್ಟರತಕ್ಕ ಚಿತ್ರಣವೆಂದರೆ—ರೈತ ಎನ್ನತಕ್ಕವನು ಅವನು ತನ್ನ ಭೂಮಿಗೆ ಎಷ್ಟು ದೂರದಲ್ಲಾದರೂ ವಾಸ ಮಾಡಬಹುದು. ಆತನ ಮಗನಿಗೆ ಯೂನಿವರ್ಸಿಟಿಗಳಲ್ಲಿ ವಿದ್ಯಾಭ್ಯಾಸಮಾಡುವುದಕ್ಕೂ ಮತ್ತು ಹೊರರಾಷ್ಟ್ರಗಳಿಗೆ ಹೋಗಿ ವಿದ್ಯಾಭ್ಯಾಸಮಾಡುವುದಕ್ಕೂ ತನ್ನ ಭೂಮಿಯಿಂದ ಸಾಕಷ್ಟು ಉತ್ಪತ್ತಿ ಬರುವಂತಿರಬೇಕು. ಆ ರೈತ ಅನೇಕ ಕೂಲಿ ಜನರನ್ನು ಇಟ್ಟುಕೊಂಡು ಅವರಿಂದ ಕೆಲಸ ಮಾಡಿಸಿ ಅವರಿಗೆ ತನಗೆ ಇಷ್ಟ ಬಂದಷ್ಟು ಗೌಣಿಯನ್ನು ಕೊಟ್ಟುಕೊಂಡು ಶೋಷಣೆ ಮಾಡುವ ವರ್ಗ ಒಂದು. ಆದರೆ ನಾನು ಹೇಳುತ್ತೇನೆ ಈ ದಿವಸ ನಾವು ಸಮಾಜವಾದದ ಚರಿತ್ರೆಯ ಪುಟಗಳಿಂದ ಇಂಥ ರೈತವರ್ಗವನ್ನು ಕತ್ತುಹಾಕಬೇಕು ಎಂದು. ಸ್ವಂತ ದುಡಿಮೆಯಲ್ಲಿರಲೆ ಎಷ್ಟು ಎಕರೆ ಭೂಮಿಯನ್ನು ವ್ಯವಸಾಯಮಾಡುವುದಕ್ಕೆ ಸಾಧ್ಯವೋ ಅಷ್ಟು (ವಿತಿಯಲ್ಲಿ) ಲಿಮಿಟ್ಟಿನಲ್ಲಿ ಭೂಮಿಯನ್ನು ಇಟ್ಟುಕೊಂಡು ತನ್ನ ಶಕ್ತಿಯನ್ನೆಲ್ಲಾ ಅದರಲ್ಲಿ ಹಾಕಿ ಬೇಸಾಯಮಾಡಿದರೆ ಅದರಲ್ಲಿ ಒಂದು ಸಂಸಾರಕ್ಕೆ ಸಾಕಾಗುಷ್ಟು ವರಮಾನ ಬಂದೇ ಬರುತ್ತದೆ. ಈ ಮಿತಿಯ ಮೇಲೆ ಯಾರಿಗೂ ಮೇಲೆ ಇರದಂತೆ ಭೂಮಿತಿಯನ್ನು ಹಾಕಬೇಕೆಂಬುದು ನನ್ನ ಅಭಿಪ್ರಾಯ. ಯಾರಿಗೆ ಎಷ್ಟಾಗಲಿ ಭೂಮಿ ಈ ಒಂದು ಸೀಲಿಂಗ್ ಲಿಮಿಟ್ಟಿನಲ್ಲಿ ಇರಬೇಕು. ಇನ್ನು ಈ ಲ್ಯಾಂಡ್ ಲಾರ್ಡ್ ಮತ್ತು ಅಬ್ ಸೆಂಟೀ ಲ್ಯಾಂಡ್ ಲಾರ್ಡ್ ಇವರುಗಳನ್ನು ಸಮಾಜದ ವರ್ಗದಿಂದ ಮೊದಲು ಕಿತ್ತು ಹಾಕಬೇಕು. ಇನ್ನಾದರೂ ರಾಜ್ಯದಲ್ಲಿ ಈ ಗೇಣಿ ಪದ್ಧತಿ ಅಳಿಸಿ ಹೋಗಬೇಕು. ಅವನು ಯಾವರೀತಿಯಲ್ಲೂ ಶೋಷಣೆಗೆ ಒಳಗಾಗಬಾರದು. ಈ ರೈತ ವರ್ಗದವರು ಇನ್ನಾದರೂ ಸುಖವಾಗಿ ಜೀವನ ನಡೆಸುವುದಕ್ಕೆ ಒಂದು ಮಾರ್ಗವನ್ನು ಮಾಡಬೇಕು. ಇಂಥ ಅಭಿಪ್ರಾಯಗಳನ್ನು ಸುಲಭವಾಗಿ ಜಾರಿಗೆ ತರುವುದಕ್ಕೆ ಅವಕಾಶವಾಗತಕ್ಕ ರೀತಿಯಲ್ಲಿ ನಾವು ಈ ಮಸೂದೆಯನ್ನು ರಚಿಸಬೇಕಾಗಿದೆ. ಆದರೆ ಈ ಮಸೂದೆಯಲ್ಲಿ ರೈತ ಎನ್ನತಕ್ಕ ಡೆಫಿನಿಷನ್ ಏನಿದೆ ಅದರಲ್ಲಿ ಈ ಟಿಲ್ಲರ್ ಆಫ್ ದಿ ಸಾಯಿಲ್ ಎನ್ನತಕ್ಕ ಚಿತ್ರ ಸರಿಯಾಗಿ ಮೂಡುವಂತೆ ಮಾಡಬೇಕು. ಆದರೆ ಭೂಮಿಯನ್ನು ಉಳತಕ್ಕ ರೈತವರ್ಗದಲ್ಲಿ ಈ ದಿವಸ ಎರಡು ಬಗೆಯ ರೈತವರ್ಗಗಳಿವೆ. ಒಂದು ಕಾರಿನಲ್ಲಿ ಕುಳಿತು, ತಾನು ವ್ಯವಸಾಯ ಮಾಡದೆ ಇತರೇಯವರಿಂದ ಬೆವರನ್ನು ಸುರಿಸಿ ಬೆಳೆಯನ್ನು ತಾವು ತೆಗೆದುಕೊಂಡು ಸುಖಪಡತಕ್ಕ ಒಂದು ವರ್ಗವಿದೆ. ಇದು ರಾಜ್ಯದಲ್ಲಿ ಸುಮಾರು ಶೇಕಡ 2 ರಷ್ಟು ಇರಬಹುದು. ಇನ್ನೊಂದು ರೈತವರ್ಗ ನೇರವಾಗಿ ಬೆವರನ್ನು ಸುರಿಸಿ ಬೇಸಾಯ ಮಾಡಿ ಭೂಮಿಯಿಂದ ಉತ್ಪನ್ನವನ್ನು ಪಡೆದು ಜೀವನ ಮಾಡತಕ್ಕಂಥ ಒಂದು ವರ್ಗವಿದೆ. ಅದು ರಾಜ್ಯದಲ್ಲಿ ಸುಮಾರು ಶೇ: 70 ರಷ್ಟು ಇರಬಹುದು. ಈಗಿರತಕ್ಕ ಸಮಾಜದಲ್ಲಿ ಯಾರಿಗೆ ಸತ್ಯ ನ್ಯಾಯಗಳು ದೊರಕಬೇಕು ಅನ್ನತಕ್ಕ ವಿಚಾರದಲ್ಲಿ ಶೇಕಡ 70 ರಷ್ಟು ಜನರು ಶೇಕಡ 2 ರಷ್ಟು ಜನರ ಶೋಷಣೆಗೆ ಒಳಗಾಗಿದ್ದರೆ ಇವರಿಗೆ ರಕ್ಷಣೆ, ನ್ಯಾಯ ದೊರೆಯಬೇಕೋ ಅಥವಾ ಶೇಕಡ 70 ರಷ್ಟು ಜನರ ಕೈಯಲ್ಲಿಕ್ಕೆ ಸಿಕ್ಕದ್ದಾರೊ ಅನ್ನುವುದನ್ನು ವಿಮರ್ಶೆಮಾಡಿ ನ್ಯಾಯ ದೊರೆಕಿಸಬೇಕಾಗಿದೆ. ನಿಜವಾಗಿಯೂ ಕೂಡ ಈ ಒಂದು ಶೋಷಣೆ ತಪ್ಪಣ ನಿಲ್ಲಬೇಕಾದರೆ ಬಹುಶಃ ಈ ಸಮಾಜದಲ್ಲಿ ಈ ಒಂದು ರ್ಯಾಂಡ್ ರಾರ್ಡ್ ಎಂಬುದಾಗಿ ಕರೆಯುವ ಪದ್ಧತಿ ಅದಷ್ಟು ಬೇಗ ತೊಲಗಬೇಕು.

ಇದರಲ್ಲಿ ಕೇವಲ ಸೇಕಡ 2-3 ರಷ್ಟು ಇರತಕ್ಕ ಹಾಗೂ ಇದರಲ್ಲಿ ವೆಸ್ಟೆಡ್ ಇಂಟರೆಸ್ಟ್‌ನ್ನೇ ಇಟ್ಟು ಕೊಂಡಿರುವ ಜನರಿದ್ದಾರೆ. ಅಂತಹವರ ಬಗ್ಗೆ ಕೆಲವು ಮಾನ್ಯ ಸದಸ್ಯರು ಪ್ರಪರ್ಸೈಜ್ ಮಾಡಿದ್ದಾರೆ. ಈಗಾಗಲೇ ಕೆಲವು ಮಿತ್ರರು ಒಂದು ದೊಡ್ಡ ಸಭೆಯನ್ನು ಕರೆದು ಲ್ಯಾಂಡ್ ರಾಡ್ರ್ಮ್ ಬಗ್ಗೆ ವಿಚಾರಮಾಡುತ್ತಿದ್ದಾರೆ. ಅದರ ಬಗ್ಗೆ ಒಂದು ಚರ್ಚೆಯಾಗುತ್ತಿದೆ. ಇದರ ಹಿನ್ನೆಲೆ ತಿಳಿದು ನ್ಯಾಬೂಟೇಜ್ ಮಾಡಬೇಕೆಂಬ ದೃಷ್ಟಿಯಿಂದ ಪ್ರಪರ್ಸೈಜ್ ಮಾಡಲು ಪ್ರಯತ್ನ ಮಾಡುತ್ತಿದ್ದಾರೆ. ಈ ರೀತಿಯಲ್ಲಿ ಸೇಕಡ 2-3 ರಷ್ಟು ಇರತಕ್ಕ ಅಸ್ಸೆಂಟಿ ಲ್ಯಾಂಡ್ ಲಾರ್ಡ್ಸ್ ಎಲ್ಲರೂ ಸೇರಿ ಏನಾದರೂ ಒಂದು ತೀರ್ಮಾನ ತಗೆದುಕೊಳ್ಳಬೇಕೆಂಬ ದೃಷ್ಟಿಯಿಂದ ಈ ಸಭೆ ನೆರೆದಿದೆಯೆಂದು ನನಗೆ ಕಾಣುತ್ತದೆ. ಬಹುಶಃ ನನಗೆ ಓಟು ಕೊಟ್ಟಿರುವ ಜನರು ಯಾರೇ ಆಗಲೀ ಅವರು ಹಳ್ಳಿಯನ್ನು ಬಿಟ್ಟು ಪಟ್ಟಣಕ್ಕೆ ಬಂದಿರುವವರು ಇಮವರೆಗೆ ಯಾವ ಮಂತ್ರಿಯನ್ನೇ ಆಗಲೀ ನಮ್ಮ ಕಷ್ಟ ಈ ರೀತಿ ಇದೆ, ನಮ್ಮ ಪರವಾಗಿ ಲ್ಯಾಂಡ್ ರಿಫಾರಮ್ಸ್ ನಡೆಯುತ್ತಿದೆ, ಅದರ ಬಗ್ಗೆ ನಮ್ಮ ಸ್ಥಿತಿಗತಿಯನ್ನು ಗಮನಿಸಬೇಕೆಂದು ಯಾರೂ ಕೇಳಲಲ್ಲ. ಅಂದಮೇಲೆ ನಾವು ಅವರ ಬಗ್ಗೆ ವಿಚಾರಮಾಡುವುದು ಬೇಡವೆಂದು ನಮ್ಮನ್ನೆ ಕುಳಿತುಕೊಳ್ಳುವುದಲ್ಲ: ಅವರಿಗೆ ನ್ಯಾಯವಾದ ರೀತಿಯಲ್ಲಿ ಎಲ್ಲ ಸೌಲಭ್ಯಗಳನ್ನು ಒದಗಿಸುವುದು ನನ್ನ ಕರ್ತವ್ಯ. ಇವತ್ತು ನನಗೆ ಓಟು ಕೊಟ್ಟ ಜನರು ಅನೇಕ ಜನ ರೈತಪರ್ಗದವರು. ಸಣ್ಣ ಸಣ್ಣ ವರ್ತಕರು. ಅವರ ಬಗ್ಗೆ ಈ ರಾಜ್ಯದಲ್ಲಿ ನಾವು ನ್ಯಾಯವನ್ನು ದೊರಕಿಸಿಕೊಡಬೇಕಾಗಿದ್ದರೆ ಅವರ ಪರವಾಗಿ ನಾವು ಸರ್ಕಾರದಲ್ಲಿ ಪಾಡ ಮಾಡಲೇ ಬೇಕು. ಆ ರಿತಿ ಮಾಡುವುದು ನಮ್ಮ ಧರ್ಮ ಆ ವರ್ಗದ ಜನರಿಗೆ ನ್ಯಾಯ ದೊರಕಿಸುವುದರಲ್ಲಿ ಈ ಮಹಾಸಭೆಯಲ್ಲಿ ಯಾವ ರೈತ ನೆರವಾಗಿ ವ್ಯವಸಾಯ ಮಾಡುತ್ತಾನೋ, ಯಾವ ರೈತ ಭೂಮಿಯನ್ನೇ ನಂಬಿರುತ್ತಾನೋ ಅಂತಹ ರೈತರ ಬಗ್ಗೆ ಪ್ರಗತಿದಾಯಕವಾದ ಒಂದು ಮಸೂದೆಯನ್ನು ಈ ಸರ್ಕಾರ ಜಾರಿಗೆ ತರುವ ಹಾಗೆ ನೋಡಿಕೊಳ್ಳತಕ್ಕದ್ದು ನಮ್ಮೆಲ್ಲರ ಕರ್ತವ್ಯವಾಗಿದೆ. ಅಂಥಾದ್ದಕ್ಕೆ ಈ ಮಹಾಸಭೆ ತನ್ನ ಒಪ್ಪಿಗೆಯನ್ನು ಕೊಡಬೇಕೆಂದು ನಾನು ಬೇಡಿಕೊಳ್ಳುತ್ತೇನೆ. ಏಕೆಂದರೆ ಈ ದೇಶ ಧರ್ಮ, ನ್ಯಾಯ, ಮತ್ತು ಸತ್ಯಕ್ಕೆ ಹೆಸರಾದಂಥಾದ್ದು. ಬಹುಮುಖ್ಯವಾಗಿ ಈ ದೇಶದಲ್ಲಿ ಹಿಂದೆ ಬಸವಣ್ಣನವರು ಹಾಗೂ ಮಹಾತ್ಮ ಗಾಂಧಿಯವರು ನೆರಸಿದ್ದರು. ಅಂತಹ ಒಂದು ಪುಣ್ಯ ದೇಶವಿದು. ಅದರಿಂದಲೇ ಈ ದೇಶ ತ್ಯಾಗಕ್ಕೆ ಎತ್ತಿದ ಕೈ. ನಮ್ಮ ಜೀವನದಲ್ಲಿ ಈ ದೇಶವ ಸಂಪತ್ತು ಬೇರೆಯವರಿಗೆಂದೂ, ಇಲ್ಲನ ಸಂಪತ್ತೆಲ್ಲಾ ನನ್ನ ಸುಖಕ್ಕೆ ಎನ್ನುವ ತತ್ವವನ್ನು ನಾವು ಮನಗಾಣಬಾರದು. ಈ ಒಂದು ಪ್ರಗತಿದಾಯಕವಾದ ಮಸೂದೆ ಈ ಸಭೆಯಲ್ಲಿ ಬಂದಾಗ್ಗೆ ಈ ದೇಶದ ಕೋಟ್ಯಾಂತರ ಜನಗಳ ಹಾಗೂ ಶ್ರೀಮತಿ ಇಂದಿರಾ ಗಾಂಧಿಯವರ ಕನಸು ನನಸಾಗಬೇಕಾಗಿದ್ದರೆ, ಅವರ ಮುಖ್ಯ ತತ್ವವಾದಂತಹ ಒಂದು ಘೋಷಣೆಯಾದ ಗರೀಬೀ ಹಠಾವೋ ಎಂಬುದು ಪೂರ್ತಿಯಾಗಿ ಕಾರ್ಯಗತವಾಗಬೇಕಾಗಿದ್ದರೆ, ಈ ದೇಶದಲ್ಲಿ ನಿರುದ್ಯೋಗ ಸಮಸ್ಯೆ ಪರಿಹಾರವಾಗಬೇಕು, ಪ್ರತಿಯೊಬ್ಬರಿಗೂ ಉದ್ಯೋಗಗಳನ್ನು ಒದಗಿಸಬೇಕಾಗಿದೆ. ಸಾಮಾಜಿಕವಾಗಿ ನ್ಯಾಯ ದೊರಕಬೇಕಾಗಿದೆ. ಅವರ ಸ್ಥಿತಿಗತಿ ಆರ್ಥಿಕವಾಗಿ ರಚನೆಯಾಗಬೇಕಾಗಿದೆ. ಮಾನ್ಯ ಸದಸ್ಯರೆಲ್ಲರೂ ಆ ಒಂದು ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಎಲ್ಲರೂ ಒಂದೇ ಸಮಾನಾದ ಅಭಿಪ್ರಾಯದಿಂದ ಈ ಮಸೂದೆಗೆ ಬೆಂಬಲವನ್ನು ಕೊಡಬೇಕಾಗಿದೆ. ಬಹುಶಃ ಕೆಲವರು ಇತ್ತೀಚೆಗೆ ಈ ದೇಶದ ಭೂಮಿಯ ಬಗ್ಗೆ ನಾನಾ ರೀತಿಯಲ್ಲಿ ವಾದಮಾಡುತ್ತಿದ್ದಾರೆ. ಈಗಿನ ಭೂಸುಧಾರಣೆಯಿಂದ ಭೂ ಉತ್ಪನ್ನ ಕಡಿಮೆಯಾಗುತ್ತದೆಂದು ಬೇರೆ ಹೇಳುತ್ತಿದ್ದಾರೆ. ನಿಜವಾಗಿಯೂ ಆ ರೀತಿಯಾಗುವುದಿಲ್ಲವೆಂಬ ನನ್ನ ಭಾವನೆ. ಕಾರಣವಿಷ್ಟೇ. ಈ ಭೂಮಿ ನನ್ನದು ಎಂಬುದಾಗಿ ಭಾವನೆ ಬರುವಾಗ, ಯ ವ್ಯಕ್ತನೇ ಆಗಲೀ ತಾನು ಹೆಚ್ಚಿನ ಪಡಿಮೆಯಿಂದ ಉತ್ಪಾದನ ಮಾಡುತ್ತಾನೆ. ಆದರೆ ಏನಾದರೂ ಕಾರಣದಿಂದ ಅವನ ಭೂಮಿಯ ಒಂದು ಭಾಗವನ್ನಾದರೂ ವೆಸ್ಟೆಡ್ ಇಂಟರೆಸ್ಟ್‌ನಿಂದ ಬಿಡಿಸಲಿಕ್ಕೆ ಹಂಚಿದರೆ, ಆಗ ಬಡವನಾವನಿಗೆ ಆಲ್ಲಿ ವ್ಯವಸಾಯ ಮಾಡಲಿಕ್ಕೆ ಹಣವಿಲ್ಲ, ಇತರ ಸೌಕರ್ಯಗಳಿಲ್ಲ, ಅದರಿಂದ ಭೂಮಿಯ ಉತ್ಪನ್ನ ನಿಜವಾಗಿ ಕಡಿಮೆಯಾಗುತ್ತದೆಂದು ನಮ್ಮ ಸಮ್ಮನೆಯಾದರೂ ವಾದ ಮಾಡುತ್ತಾನೆ. ಆಮೇಲೆ ಅದನ್ನು ಇನ್ನೊಂದು ವರ್ಗ ನಡೆಸಿಕೊಂಡು ಬರುತ್ತದೆಂದು ಹೇಳುತ್ತಾನೆ. ನಿಜವಾಗಿಯೂ ಭೂಮಿಯ ಉತ್ಪನ್ನ ಕಡಿಮೆಯಾಗುವುದಿಲ್ಲ. ಕಾರಣವಿಷ್ಟೇ. ಈ ದೇಶದಲ್ಲಿ ಹೇರಳವಾಗಿ ಅಪಾರವಾಗಿ ಸೇಕಡ 70ರಷ್ಟು ಜನರು ವ್ಯವಸಾಯದಿಂದಲೇ ಜೀವನ ಮಾಡುತ್ತಿರುವುದರಿಂದ ಸೇಕಡ 2—3 ರಷ್ಟು ಇರತಕ್ಕ ವೆಸ್ಟೆಡ್ ಇಂಟರೆಸ್ಟ್ ಜನರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಭೂಮಿ ಕೊಡುವುದರಿಂದೇನೂ ಪ್ರಯೋಜನವಿಲ್ಲ. ಕನಿಷ್ಠಾಂಶವಾಗಿ ಭೂಮಿ ಈಗ ಪುನರ್ವರ್ಗೀಕರಣಮಾಡುವಾಗ ಅವನು ಅದನ್ನು ನನ್ನದು ಎಂದು ಹೇಳುತ್ತಾನೆ. ಮತ್ತು ಹೆಚ್ಚಿಗೆ ಭೂಮಿಯಲ್ಲಿ ಉತ್ಪನ್ನ ಮಾಡುವುದಕ್ಕೆ ಅವಕಾಶವಾಗುತ್ತದೆಂದು ಹೇಳುತ್ತಾನೆಂದು ನನ್ನ ಅಭಿಪ್ರಾಯ. ಪೊಟ್ಟಮೊದಲನೆಯದಾಗಿ ಈ ಭೂಸುಧಾರಣೆಯೇ ಏಕೆ ಆಗಬೇಕು: ಇತರ ಸುಧಾರಣೆಗಳೂ ಸಹ ಏಕೆ ಆಗಬಾರದೆಂದು ನನ್ನ ಕೆಲವು ಮಿತ್ರರು ಹೇಳಿದರು

(ಶ್ರೀ ಕೆ. ಬಿ. ಶಿವಯ್ಯ)

ಈ ದೇಶದಲ್ಲಿ ಹೆಚ್ಚಿನ ಉತ್ಪನ್ನವಾಗುವುದು ಮುಖ್ಯವಾಗಿ ವ್ಯವಸಾಯ ಒಂದರಿಂದಲೇ, ಎರಡನೆಯದು ಫ್ಯಾಕ್ಟರಿಗಳಿಂದ ಹೆಚ್ಚಿನ ಜನಸಂಖ್ಯೆ ಈ ಒಂದು ಅಭಿಪ್ರಾಯವನ್ನು ಇಟ್ಟುಕೊಂಡು ಮಾತನಾಡುವ ಹವ್ಯಾಸ ಬಂದಿದೆ. ಮೊಟ್ಟಮೊದಲು ಈಗ ಭೂಮಿಯ ಸುಧಾರಣೆ ಮಾಡುವುದರ ಮೂಲಕ ಮಿತಿ ನಿಗದಿಮಾಡಿ. ನಂತರ ಇತರ ಎಲ್ಲಾ ಪಟ್ಟಣಗಳಲ್ಲಿಯೂ ಆಸ್ತಿಪಾಸ್ತಿ ಮಿತಿಯ ಬಗ್ಗೆ ಒಂದು ನಿರ್ಧಾರ ಮಾಡುವುದಾಗತ್ತದೆ. ಎರಡನೆಯದಾಗಿ ಇವು ನಿರ್ಧಾರವಾದಮೇಲೆ ಮೂರನೆಯದಾಗಿ ವ್ಯಕ್ತಿಯ ವರಮಾನ ಎಷ್ಟಿರುವ ಬಗ್ಗೆಯೂ ಒಂದು ಮಿತಿ ಇರಬೇಕೆಂದು ಬರುತ್ತದೆಂದು ನನಗೆ ಕಾಣುತ್ತದೆ. ರಷ್ಯಾ, ಚೈನಾ ಮುಂತಾದ ದೇಶಗಳಲ್ಲಿಯೂ ಇದೇ ರೀತಿ ತೆಗೆದುಕೊಂಡಿದ್ದಾರೆ. ಇನ್ನೂ ಹಿಂದಿಳಿದ ಹಾಗೂ ಮುಂದುವರಿದ ದೇಶಗಳಲ್ಲಿ ಇದೇ ರೀತಿಯಲ್ಲಿ ತೆಗೆದುಕೊಂಡಿದ್ದಾರೆ. ಆದ್ದರಿಂದ ನಮ್ಮ ದೇಶದಲ್ಲಿಯೂ ಕೂಡ ಇದೇ ರೀತಿ ಭೂಸುಧಾರಣೆ ಹಾರಿಗೆ ತರಬೇಕೆಂದು ಈ ಸರ್ಕಾರದವರು ಕ್ರಮ ತೆಗೆದುಕೊಂಡಿರುವುದೆಂದು ನನ್ನ ಅಭಿಪ್ರಾಯವನ್ನು ಈ ಸಭೆಗೆ ನಾನು ತಿಳಿಸುತ್ತಿದ್ದೇನೆ.

ಇನ್ನು ಭೂಮಿಯ ಸೀಲಿಂಗ್ ವಿಚಾರದಲ್ಲಿ ಒಂದು ಲಿಮಿಟ್ಟನ್ನು ನಿಗದಿ ಮಾಡುವ ಬಗ್ಗೆ ಅನೇಕ ಮಿತ್ರರು ನಾನಾ ವಿಧದಲ್ಲಿ ಚರ್ಚೆಮಾಡಿ ಅವರವರ ಅಭಿಪ್ರಾಯಗಳನ್ನು ತಿಳಿಸಿದ್ದಾರೆ. ಈ ಸೀಲಿಂಗ್ ಬಗ್ಗೆ ಎರಡು ನೀರಾವರಿ ಫಸಲುಗಳನ್ನು ಕೊಡತಕ್ಕ 10 ಎಕರೆಗಳಷ್ಟು ಮಿತಿಯನ್ನು ಇಡಬೇಕೆಂದು ನಮ್ಮ ಪಕ್ಷದವರು ಒಂದು ಅಭಿಪ್ರಾಯಕ್ಕೆ ಬಂದಿದ್ದಾರೆ. ಆ ರೀತಿಯಾಗಿ ಈ ವಸೂದೆಯಲ್ಲಿ ನಮೂದಿಸಿದ್ದಾರೆ. ಅದು ಬಹಳ ಹೆಚ್ಚಿನದು ಎಂಬ ಅಭಿಪ್ರಾಯ ಇದೆ. ಮೈಸೂರಿನಲ್ಲಿ ತರೀ 10 ಎಕರೆಗಳಿಗಿಂತಲೂ ಹೆಚ್ಚಾಗಿರಕೂಡದು, ಮತ್ತು ಖುಷ್ಕಿ ಜಮೀನು 5 ಎಕರೆಗಳಿಗಿಂತ ಹೆಚ್ಚಿರಬಾರದೆಂದು ಈ ಮಸೂದೆಯಲ್ಲಿ ನಮೂದಿಸಿದೆ. ನಮ್ಮ ಪಕ್ಷದ ಒಪ್ಪಿಗೆ ಆದ ಮೇರೆ ಅದಕ್ಕಿಂತ ಹೆಚ್ಚಿಗೆ ಇರಬಾರದು. ಎರಡು ಫಸಲು ಬರಕ್ಕ ಖುಷ್ಕಿ ಜಮೀನು 54 ಎಕರೆಗಿಂತ ಹೆಚ್ಚು ಇರಬಾರದೆಂದು ನನ್ನ ಅಭಿಪ್ರಾಯವನ್ನು ತಿಳಿಸುತ್ತಿದ್ದೇನೆ.

ಇನ್ನು ಕಾಫಿ, ಟೀ, ರಬ್ಬರ್, ಕೋಕೋ, ಇವುಗಳಿಗೆ ಬೇರೆ ರೀತಿಯಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಈ ಮಸೂದೆಯಲ್ಲಿ ತಿಳಿಸಿದೆ. ಈ ಕಾಫಿ, ಟೀ, ರಬ್ಬರ್, ಕೊಕೋ ಮುಂತಾದುವುಗಳನ್ನು ಈ ಸೀಲಿಂಗ್ ಲಿಮಿಟಿನಲ್ಲಿ ತಂದರೆ ಹೆಚ್ಚಿನ ಆನಾಹುತವಾಗುತ್ತದೆ ಮತ್ತು ತನ್ಮೂಲಕ ಉತ್ಪನ್ನಕ್ಕೂ ತೊಂದರೆಯಾಗುತ್ತದೆ ಎಂದು ಕೆಲವು ಸದಸ್ಯರು ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಮತ್ತು ಕೆಲವರು ಕಾಫಿ ಬೆಳೆಗೆ ದುಬಾರಿ ಹಣ ಖರ್ಚು ಮಾಡಬೇಕಾಗುತ್ತದೆಂದು ಸಹ ಹೇಳಿದರು. ನಾನಾದರೂ ಹೇಳುತ್ತೇನೆ ಈ ದುಬಾರಿ ಹಣ ಖರ್ಚು ಮಾಡತಕ್ಕಂತಹ ಈ ಕಾಫೀ, ಟೀ, ರಬ್ಬರ್, ಕೋಕೋ ಮುಂತಾದುವುಗಳನ್ನು ಸರ್ಕಾರದವರೇ ತೆಗೆದುಕೊಂಡು ರಾಷ್ಟ್ರೀಕರಣ ಮಾಡುವುದು ಒಳ್ಳೆಯದು ಮತ್ತು ತನ್ಮೂಲಕ ಸಮಾಜವಾದ ಇತರ ಕೆಲಸಕಾರ್ಯಗಳನ್ನು ಮಾಡುವುದಕ್ಕೆ ಸುಲಭವಾಗುತ್ತದೆ ಎಂದು ಹೇಳುತ್ತೇನೆ. ಇದನ್ನು ಒಬ್ಬರಿಗೆ ಬಿಟ್ಟು ಇನ್ನೊಬ್ಬರಿಗೆ ಬಿಡದೆ ಏಕೆ ತಾರತಮ್ಯ ಮಾಡಬೇಕೆಂದು ಕೇಳುತ್ತೇನೆ.

ಇನ್ನು ವಿನಾಯಿತಿ ಕೊಡುವುದರ ಬಗ್ಗೆ ಹೇಳುವುದಾದರೆ, ವಿಶ್ವವಿದ್ಯಾನಿಲಯಗಳ ಮುಖಾಂತರ ಏನಾದರೂ ರಿಸರ್ಚ್ ಎಲ್ಲ ಮಾಡುತ್ತಾರೆ, ಮತ್ತು ಎಲ್ಲಿ ಸಮಾಜಕ್ಕೆ ಪ್ರಯೋಜನವಾಗುವಂತಹ ಭೂಮಿ ಇದೆ, ಅಂಥ ಕಡೆ ವಿನಾಯಿತಿ ಕೊಡಬೇಕೇ ವಿನಹ ಧಾರ್ಮಿಕ ಸಂಸ್ಥೆಗಳಿಗಾಗಲಿ, ವಿದ್ಯಾ ಸಂಸ್ಥೆಗಳಿಗಾಗಲಿ ಆಥವಾ ಮತ್ತಿತರ ಸಂಸ್ಥೆಗಳಿಗಾಗಲಿ ವಿನಾಯಿತಿ ಕೊಡಬಾರದು. ಅವರಲ್ಲಿ ಮಿತಿಗಿಂತ ಹೆಚ್ಚು ಇದ್ದರೆ ಅದನ್ನು ಸರ್ಕಾರದ ವಶಕ್ಕೆ ಸೀಲಿಂಗ್ ಲಿಮಿಟ್ ಪ್ರಕಾರ ತೆಗೆದುಕೊಳ್ಳಬೇಕು. ಒಬ್ಬರಿಗೆ ರಿಯಾಯಿತಿ ತೋರಿಸಿ ಇನ್ನೊಬ್ಬರಿಗೆ ತೋರಿಸದಿರುವುದರಿಂದ ತಾರತಮ್ಯ ತೋರಿಸಿದಹಾಗೆ ಆಗುತ್ತದೆ. ಇದರಿಂದ ಸಮಾಜವಾದದ ತತ್ವವನ್ನು ಅನುಷ್ಠಾನಕ್ಕೆ ತರುವುದಕ್ಕಾಗುವುದಿಲ್ಲ.

ಇನ್ನು ಕುಟುಂಬದ ಬಗ್ಗೆ ಡೆಫಿನಿಷನ್ನಿನಲ್ಲಿ ಗಂಡ, ಹೆಂಡತಿ ಮತ್ತು ವಯಸ್ಕರು ಜನ ಮೈನರ್ ಮಕ್ಕಳು ಇದ್ದರೆ ಒಂದು ಕುಟುಂಬ ಎಂದು ಮಾಡಿದ್ದಾರೆ. ಇವರು 10 ಎಕರೆಯನ್ನು ಹೊಂದಬಹುದು ಎಂದೂ ಸಹ ಹೇಳಿದ್ದಾರೆ. ಅದಕ್ಕಿಂತ ದೊಡ್ಡ ಕುಟುಂಬ ಇದ್ದರೆ ಅದು ಜಾಯಿಂಟ್ ಫ್ಯಾಮಿಲಿಯಾಗುತ್ತದೆ. ಮೇಜರ್ ಸನ್ ಇದ್ದರೆ ಅದಕ್ಕೆ ಒಂದು ಇಂಡಿಪೆಂಡೆಂಟ್ ಯುನಿಟ್ ಕೊಡಬೇಕೆಂದು ಹೇಳುತ್ತಾರೆ. ಬಹುಶಃ ಇದರ ಬಗ್ಗೆ ಅನೇಕ ಸಲ ನಾವು ಚರ್ಚೆ ಮಾಡಿದ್ದೇವೆ. ನಮ್ಮ ಆಕ್ಟಿನಲ್ಲಿ ಅದಕ್ಕೆಲ್ಲಾ ಪ್ರೊವಿಜನ್ ಇಲ್ಲವೆಂದು ಕಾಣುತ್ತದೆ. ಆದ್ದರಿಂದ ನನ್ನ ಸಲಹೆ ಏನೆಂದರೆ, ಇದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗುವ ಪ್ರಯುಕ್ತ ಮೇಜರ್ ಸನ್ನಿಗೆ ಇಂಡಿಪೆಂಡೆಂಟ್ ಯುನಿಟ್ ಕೊಡಬೇಕೆಂಬ ಏನೊಂದು ಅಭಿಪ್ರಾಯ ಇದೆ, ಅದನ್ನು ಕೈಬಿಟ್ಟು

ಅದರ ಬದಲು ಡಬರ್ ದಿ ಯುನಿಟ್ ಇಟ್ಟುಕೊಂಡು, ಮೇಜರ್ ಸನ್ನಿಗೆ ಕೊಡತಕ್ಕ ಇಂಡಿಪೆಂಡೆಂಟ್ ಯುನಿಟ್ಟನ್ನು ಬಿಡುವಂತೆ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಇದನ್ನು ಯೋಚನೆ ಮಾಡುತ್ತಾರೆಂದು ತಿಳಿಯುತ್ತೇನೆ.

ಇನ್ನು ಕೆಲವರು ಗೇಣಿಗೆ ಕೊಡುವುದನ್ನು ಸಂಪೂರ್ಣವಾಗಿ ತೆಗೆದು ಹಾಕಬೇಕೆಂದು ಹೇಳಿದ್ದಾರೆ. ಕೆಲವು ಸಂದರ್ಭಗಳಲ್ಲಿ ಡಿಸೇಬರ್ಡ್ ಪರ್ಸನ್ಸ್ ಮತ್ತು ಮಿಲಿಟರಿಯಲ್ಲಿ ಸೈನಿಕರಾಗಿ ಕೆಲಸ ಮಾಡತಕ್ಕವರು, ಆರ್ಫನ್ಸ್, ಮೈನರ್ಸ್ - ಮುಂತಾದವರ ಬಗ್ಗೆ ಗೇಣಿಗೆ ಕೊಡುವುದು ಇರಬೇಕೇ ಏನಹ ಬೇರೆ ಯಾವ ಸಂದರ್ಭಗಳಲ್ಲಿಯೂ ಇರಬಾರದೆಂದು ಹೇಳುತ್ತೇನೆ.

ಹೆಚ್ಚುವರಿ ಭೂಮಿಯನ್ನು ತೆಗೆದುಕೊಳ್ಳುವ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಅದಕ್ಕೆ ಕಂದಾಯದ ಇಷ್ಟು ಪಟ್ಟು ಪರಿಹಾರ ರೂಪದಲ್ಲಿ ಕೊಡತಕ್ಕದ್ದು ಎಂದು ಇದೆ. ಸೀಲಿಂಗ್ ಲಿಮಿಟ್ ಮೇಲೆ ಹೆಚ್ಚಾಗಿದ್ದ ಭೂಮಿಯನ್ನು ಸರ್ಕಾರದವರು ಪರಿಹಾರವಿಲ್ಲದೇಯೆ ಏಕೆ ವಶಪಡಿಸಿಕೊಳ್ಳಬಾರದು ಎಂದು ಕೇಳುತ್ತೇನೆ. ಏಕೆಂದರೆ, ಅನೇಕ ವರ್ಷಗಳ ಕಾಲ ರೈತನ ಶೋಷಣೆ ಮಾಡಿ ಅದರ ಉತ್ಪನ್ನವನ್ನು ಅವರು ಪಡೆದಿರುತ್ತಾರೆ. ಆದ್ದರಿಂದ ಅಂತಹ ಸಂದರ್ಭಗಳಲ್ಲಿ ಪರಿಹಾರವಿಲ್ಲದ ಭೂಮಿಯನ್ನು ಪಡೆದುಕೊಳ್ಳಬಹುದು. ಇಲ್ಲದಿದ್ದರೆ ಅಂಥ ಭೂಮಿಯನ್ನು ಬಡ ರೈತರಿಗೆ ಮತ್ತು ಹರಿಜನಗಿರಿಜನರಿಗೆ ಹಂಚುವಾಗ ಅವರಿಂದ ಕಂತಿನ ಮೂಲಕ ಆ ಹಣವನ್ನು ಪಡೆಯಬೇಕಾಗುತ್ತದೆ. ಬಡಜನರು ವ್ಯವಸಾಯ ಮಾಡುವುದರ ಜೊತೆಗೆ ಈ ಕಂತಿನ ಮೂಲಕ ಕೊಡುವ ಹಣ ಸಹ ಒಂದು ಹೊರೆಯಾಗಿ ಇರುತ್ತದೆ. ಇದರಿಂದಾಗಿ ಅವನ ಭಾರ ಇನ್ನೂ ಹೆಚ್ಚಿಗೆ ಆದ ಹಾಗೆ ಆಗುತ್ತದೆ. ಈ ಪ್ರೊವಿಜನನ್ನು ಸಹ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ.

ಇನ್ನು ಕೋಆಪರೇಟಿವ್ ಫಾರ್ಮಿಂಗ್ ಬಗೆ ಹೇಳುವುದಾದರೆ, ಇವತ್ತು ರಾಜ್ಯದಲ್ಲಿರುವ ತಕ್ಕಂತಹ ಪ್ರತಿಯೊಂದು ಸಹಕಾರ ಸಂಘಗಳು ಸಹ ಒಂದಲ್ಲ ಒಂದು ರೀತಿಯಲ್ಲಿ ರಾಜಕೀಯದಲ್ಲಿ ಸಿಕ್ಕಿಹಾಕಿಕೊಂಡಿವೆ. ಇವೆಲ್ಲವನ್ನೂ ಅಬಾಲಿಷ್ ಮಾಡಿ, ಈ ಸಹಕಾರ ಸಂಘಗಳನ್ನು ಹೊಸದಾಗಿ ಪುನರುಜ್ಜೀವಗೊಳಿಸಿ, ಬೇರೆ ರೀತಿಯಲ್ಲಿ ಇವಕ್ಕೆ ಉತ್ತೇಜನ ಕೊಟ್ಟು ಸಹಕಾರೀ ಸಂಘಗಳ ಮುಖಾಂತರ ರೈತರಿಗೆ ಕಡಿಮೆ ಬಡ್ಡಿಯ ಸಾಲ, ಮತ್ತಿತರ ಸಲಕರಣೆಗಳನ್ನು ಕೊಟ್ಟು ಈ ಮನಿ ಲೆಂಡರ್ಸ್ ಏನಿದ್ದಾರೆ, ಅವರ ಕ್ಲಚ್‌ನಿಂದ ಬಡ ರೈತರನ್ನು ಪಾರು ಮಾಡಬೇಕೆಂದು ಹೇಳುತ್ತೇನೆ. ಇವತ್ತು ರೈತರು ಏನಿದ್ದಾರೆ, ಅವರು ತಮ್ಮ ಜೀವನಕ್ಕೆ ತಕ್ಕಂತೆ ಇರಲು ತಕ್ಕ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕಾಗಿದೆ. ಅವರಿಗೆ ಸಹಕಾರೀ ಸಂಘಗಳ ಮುಖಾಂತರ ಹಣ ಪಡೆಯುವುದು ಹೇಗೆ, ನವೀನ ಉಪಕರಣಗಳಿಂದ ವ್ಯವಸಾಯ ಮಾಡುವುದು ಹೇಗೆ—ಇವುಗಳ ಬಗ್ಗೆ ತಿಳಿವಳಿಕೆಯನ್ನು ಸಹ ಕೊಡಲು ಸರ್ಕಾರ ಏರ್ಪಾಡು ಮಾಡಬೇಕು.

ಕೊನೆಯದಾಗಿ ಈ ಒಂದು ಭೂಮಸೂದೆ ಏನಿದೆ, ಇದನ್ನು ರಾಜ್ಯಾಂಗದ 9ನೇ ಷೆಡ್ಯೂಲಿನಲ್ಲಿ ಸೇರಿಸಬೇಕು. ಅದಕ್ಕೆ ಕಾರಣ ಇಷ್ಟೆ. ಯಾವ ಕೋರ್ಟ್‌ನಲ್ಲಿಯೂ ಇದನ್ನು ಪ್ರಶ್ನೆ ಮಾಡಬಾರದು. ಇದು ಮೇಜರ್ ಆಕ್ಟ್ ಆದ ಮೇಲೆ ಏನು ಇದರಿಂದ ರೈತನಿಗೆ ಪ್ರಯೋಜನವಾಗುತ್ತದೆ. ಅದು ಶಾಶ್ವತವಾಗಿ ಅವನಿಗೆ ಸಿಗಬೇಕು; ಅವನು ಇದರಿಂದ ಹೊಸ ಜೀವನ ಪ್ರಾರಂಭಿಸಬೇಕು. ಈ ದೃಷ್ಟಿಯಲ್ಲಿ ಇದನ್ನು 9ನೇ ಷೆಡ್ಯೂಲಿನಲ್ಲಿ ಸೇರಿಸಬೇಕೆಂದು ಹೇಳುತ್ತೇನೆ.

ಇಷ್ಟು ಸಲಹೆಗಳನ್ನು ಇಂದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಗುವ ಪ್ರಯುಕ್ತ ಕೊಟ್ಟು ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. DEPUTY SPEAKER.—The House will now rise and meet tomorrow at 9-30 A.M.

The House adjourned at Six of the Clock to meet again at Nine of the Clock, on Saturday, the 9th December 1972.

WD 18798—GPB—550—24-1-1974